ಪುಸ್ತಕ ಪ್ರಪಂಚ

ಸಂಪುಟ ೪೮ ೧೯೮೪ ಜೂನ್ ಸಂಚಿಕೆ ೧೧



ವಿಷಯ ಸೂಚಿ

ಮುಖಚಿತ್ರ: ನಮ್ಮ ನಾಡಿನ ಶಿಲ್ಪಕಲೆ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೨೮ ಜೂನ್ ೧೯೮೪ ಸಂಚಿಕೆ ೧೨

ನೀರ್ಗಲ್ಲು ಪ್ರವಾಹ

ನಾಲ್ಕು ದಿನಗಳವರೆಗೆ ಒಂದೇ ಸಮನೆ ಬೀಸಿದ ಶೀತಮಾರುತವು ೧೯೮೨ನೇ ಇಸವಿ ಮಾರ್ಚ್ ೨೭ನೇ ತಾರೀಖು ಶನಿವಾರ ಪೂರ್ವ ಕ್ಯಾಲಿಫೋರ್ನಿಯಾದ ಸೀರ್‍ರಾನೆವಾಡ ಪರ್ವತಗಳಲ್ಲಿ ತೊಡಗಿತು; ಆ ಪರ್ವತದ ತಪ್ಪಲಿನಲ್ಲಿ ಟೌಹೋ ಸರೋವರದ ಬಳಿಯ 'ಆಲ್ಪೈನ್ ಮೆಡೋಸ್' ಎಂಬ ಸ್ಕೀ* ತಾಣದಲ್ಲಿ ಮೊದಲೇ ಎರಡರಿಂದ ನಾಲ್ಕು ಮೀಟರ್‌ಗಳಷ್ಟು ಎತ್ತರದವರೆಗೆ ಹಿಮ ಬಿದ್ದಿತ್ತು. ಗಾಬರಿಪಡುವ ಹಾಗೆ ಒಮ್ಮೊಮ್ಮೆ ಗಂಟೆಗೆ ಐದರಿಂದ ಎಂಟು ಸೆಂಟಿಮೀಟರಿನಷ್ಟು ಹಿಮಬೀಳಿಸುವ ಈ ಹೊಸ ಶೀತಗಾಳಿಯು ಆಲ್ಪೈನ್ ಮೆಡೋಸ್ ಮೇಲುಗಡೆಯ ಬೆನ್ನಮೇಲೆ ಅಸಾಧಾರಣದ ಭಾರದ ಹಿಮದ ಹೊದಿಕೆಯನ್ನು ಬಿಟ್ಟು ಹೋಯಿತು. ಅದು ಅಪಾಯವಾಗುವಷ್ಟು ಹಿಮವನ್ನು ಆತುಕೊಳ್ಳುತ್ತಲೇ ಇತ್ತು. ಅದರ ಮೇಲೆ ಗಂಟೆಗೆ ೨೦೦ ಕಿ.ಮೀ. ವೇಗದಲ್ಲಿ ಭಯಂಕರವಾಗಿ ಬೀಸುತ್ತಿದ್ದ ಗಾಳಿಯು ಹೊಡೆತ. ಬುಧವಾರ ಬೆಳಗ್ಗೆ ೭ರ ಹೊತ್ತಿಗೆ ಬೆಟ್ಟದ ಬುಡದಲ್ಲಿ ೨·೩ ಮೀಟರಿನಷ್ಟು ಬೆನ್ನಮೇಲೆ ೪·೫ ಮೀಟರ್

---

* 'ಸ್ಕೀ' ಎಂದರೆ ಪೂನಾಚಪ್ಪಲಿಯಂತೆ ತುದಿಯಲ್ಲಿ ಮೇಲಕ್ಕೆದ್ದು ಸುಮಾರು ನಾಲ್ಕೈದು ಅಡಿಗಳಷ್ಟು ಉದ್ದವೂ ಐದಾರು ಅಂಗುಲಗಳ ಅಗಲವೂ ಉಳ್ಳ ಮರದ ಹಾವುಗೆಗಳು—'ಜಾರು ಹಾವುಗೆಗಳು' ಇವುಗಳನ್ನು ಪಾದಗಳಿಗೆ ಕಟ್ಟಿಕೊಂಡು ಹಿಮಶಿಲೆಯ ಇಳಿಜಾರುಗಳಲ್ಲಿ ವೇಗವಾಗಿ ಜಾರುವುದು ಹಿಮಪ್ರದೇಶದಲ್ಲಿ ವಾಸಿಸುವ ಜನಗಳ ಸಾಹಸ ಕ್ರೀಡೆ. ಈ ಕ್ರೀಡೆಗೆ ಬೆಟ್ಟದ ತಪ್ಪಲುಗಳಲ್ಲಿ ಕೆಲವು ಅನುಕೂಲವಾದ ಸ್ಥಳಗಳಲ್ಲಿ 'ಸ್ಕೀ ತಾಣ'ಗಳನ್ನು ಸ್ಥಾಪಿಸಿರುವರು.

೧೯೮೨ನೇ ನವೆಂಬರ್ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ವಿಲಿಯಂ ಓಸ್ಕಾರ್ ಜಾನ್‌ಸನ್ ಅವರ ಲೇಖನದ ಅನುವಾದ.

ನಷ್ಟು ಹೊಸ ಹಿಮದ ಒಡ್ಡು ಸೇರಿತು. 'ಹೊಸಹಿಮ'ವೆಂಬ ಮಾತಿನಿಂದ ಮನಸ್ಸಿಗೆ ಬರುವುದು ಶಾಂತ ನಿಸರ್ಗದ ಸಾರವೋ ಎಂಬಂತಹ ಸ್ನಿಗ್ಧ ಪ್ರಶಾಂತ ಸೌಂದರ್ಯ. ಅರಣ್ಯ ಸೇವಾ ಇಲಾಖೆಯವರು ತಮ್ಮ 'ಆವನಾಷ್† ಕೈಪಿಡಿ'ಯಲ್ಲಿ ಪ್ರಕಟಿಸಿರುವಂತೆ ಹೊಸದಾಗಿ ಬಿದ್ದ ಹಿಮವು ಭೂಮಿಯ ಮೇಲಣ ಅತ್ಯಂತ ಹೆಚ್ಚು ಅಸ್ಥಿರವಾದ ಸ್ವಾಭಾವಿಕ ವಸ್ತುಗಳಲ್ಲೊಂದು.

ಹಿಮಶಿಲಾಪಾತವನ್ನು ನಿಯಂತ್ರಿಸಲು ಪ್ರಯೋಗಿಸಬಹುದಾದ ಎಲ್ಲಾ ಕ್ಷೇಮಮಾರ್ಗಗಳನ್ನೂ ಆಲ್ಪೈನ್‌ಮೆಡೋಸ್‌ನಲ್ಲಿ ಅನುಸರಿಸುತ್ತಾ ಇದ್ದರು. ಪ್ರತಿದಿನ ಬೆಳಗ್ಗೆ ಸ್ಕೀ ಕಾವಲು ಭಟರು ಎತ್ತುಕುರ್ಚಿಗಳಲ್ಲಿ (lift chairs) ಕುಳಿತು ಕುರುಡಾಗಿಸುವ ಗಾಳಿಯೊಳಗೆ ತೂರಿಕೊಂಡು ಚಲಿಸುತ್ತಿದ್ದರು. ಹಿಮಶಿಲಾಪಾತವಾಗುವ ಸಂಭವವಿರುವ ಹೊಸ ಹಿಮ ಬೀಳುತ್ತಿದ್ದ ತಪ್ಪಲುಗಳಲ್ಲಿ ಪ್ರತಿ ದಿನವೂ ೨೩೦ ಕಿಲೋ ಸಿಡಿಮದ್ದನ್ನು ನೆಡುತ್ತಿದ್ದರು. ಹೆಪ್ಪುಗಟ್ಟುತ್ತಿದ್ದ ಹಿಮರಾಶಿಯು ಅಲುಗಾಡಿಸಿದಂತಾಗಿ ಅದು ನಿರಪಾಯಕರವಾಗಿ ಹರಿದುಹೋಗಲೆಂಬುದೇ ಮದ್ದು ಸಿಡಿತದಿಂದಾಗುವ ಆಘಾತದ ಉದ್ದೇಶ.

ಏನೇ ಆಗಲಿ ಸ್ಕೀ ಆವರಣದ ಮೇಲಿನ ಎತ್ತರದ ಬೆನ್ನುಗಳ ಮೇಲಿನ ಅಪಾಯಕಾರಿ ಭಾಗಗಳಿಗೆ ಸ್ಕೀ ಮೂಲಕ ತಲಪುವುದಕ್ಕಾಗಲಿ ಅವುಗಳನ್ನು ನೋಡುವುದಕ್ಕಾಗಲಿ ಸಾಧ್ಯವಿದ್ದಿಲ್ಲ. ಮೊದಲೇ ಏರ್ಪಡಿಸಿದ್ದ ಸ್ಥಳಗಳಿಂದ ಚಾಲಕರು, ಚಲಿಸುವ ಸಣ್ಣ ಮೇಲ್ಮಾತಿ ಫಿರಂಗಿಗಳಿಂದ ಬೆಟ್ಟದ ಮೇಲೆ ಸುಮಾರು ೨೦೦ ಮೀಟರ್ ಲಂಬೋನ್ನತಿಯಷ್ಟು ದೂರ ಚಾಲಕರು ಉಡಾಯಿಸಿದರು. ಸೋಮವಾರದಿಂದ ಬುಧವಾರ ಬೆಳಗ್ಗಿನವರೆಗೆ ೪೮ ಸುತ್ತು ಉಡಾಯಿಸಿ, ಬೆಟ್ಟದ ಮೇಲೆ ಜಮಾಯಿಸಿದ್ದ ಹಿಮದ ಒಡ್ಡನ್ನು ಕೆಳಕ್ಕೆ ಹರಿಸಲಾಯಿತು. ಆದರೆ ಆವೊಂದು ಹಿಮ, ಆವೊಂದು ಗಾಳಿ ಅವುಗಳ ಸಂಗಮವೋ, ಆ ತಪ್ಪಲಿನ ಇಳಿಕೋನವೋ, ಅಂತೂ ಯಾವುದೋ ಒಂದು

---

† ಆವನಾಷ್ (Avalanche) (ನೀರ್ಗಲ್ಲು)—ಇದು ಫ್ರೆಂಚ್ ಭಾಷೆಯ ಪದ. ಚಳಿಗಾಲದಲ್ಲಿ ಬಹು ಶೀತಲ ಹವಾಮಾನವಿರುವ ಪರ್ವತ ಪ್ರದೇಶಗಳಲ್ಲಿ ಎರಡು ಮೂರು ತಿಂಗಳವರೆಗೆ ನಿರಂತರವಾಗಿ ಬೀಳುವ ಹಿಮವು ಅಗಾಧ ಒತ್ತಡದಿಂದ ಹೆಪ್ಪುಗಟ್ಟಿ ಕಲ್ಲು ಚಪ್ಪಡಿಯಂತೆ ಆಗುವುದು. ಪರ್ವತ ಶಿಖರದಲ್ಲೂ ತಪ್ಪಲುಗಳಲ್ಲೂ ಈ ರೀತಿ ಹೆಪ್ಪುಗಟ್ಟಿದ ಹಿಮವು ಕ್ರಮೇಣ ಬೆಳೆದು ಭಾರವಾಗಿ ಕೆಳಕ್ಕೆ ಬಿದ್ದು ಜಾರುತ್ತಾ ಬಂದು ಮುಂದೆ ಹೋದಂತೆ ವೇಗವನ್ನು ಹೆಚ್ಚಿಸಿಕೊಂಡು ಹರಿಯುತ್ತದೆ. ಹೀಗೆ ಬಿದ್ದು ಹರಿಯುವ ಹಿಮಶಿಲೆಯ ನೀರ್ಗಲ್ಲು—ಹಿಮಶಿಲಾಪಾತ.

ಗೊತ್ತಿಲ್ಲದ ಕಾರಣದಿಂದ ಹಿಮವು ಬೆಟ್ಟದ ಮೇಲೆಯೇ ಟನ್‌ಗಟ್ಟಲೆ ಜಮಾಯಿ ಸುತ್ತಲೇ ಇತ್ತು.

"ಹಿಮಾವೃತ" ಬುಧವಾರ ಅಪರಾಹ್ನ ೩ ಗಂಟೆಯ ಹೊತ್ತಿಗೆ ಸ್ಕೀ ತಾಣದ ತಲದಲ್ಲಿ ಬಹು ಕೆಲವೇ ಜನ ಉಳಿದಿದ್ದರು. ತಪ್ಪಲುಗಳನ್ನು ಮುಚ್ಚಿದ್ದ ರಿಂದ ೪೩೫ ಕೆಲಸಗಾರರಲ್ಲಿ ಕೇವಲ ೨೦ ಮಂದಿ ಮಾತ್ರ ಹಾಜರಿದ್ದರು. ಸ್ಕೀ ಕಾವಲುಭಟರು ಅವರು ಮಾಡಬಹುದಾದ ರಕ್ಷಣಾಕಾರ್ಯಗಳನ್ನು ಮಾಡಿ ಹತ್ತು ಕಿಲೋಮೀಟರ್ ದೂರದ ಮತ್ತೊಂದು ಸ್ಕೀ ತಾಣ, 'ಸ್ಕ್ವಾವ್ಯಾಲಿ'ಗೆ ಹೋದರು. ಅಲ್ಲಿನ ಎತ್ತು (lift) ಗಳಲ್ಲಿ ಕುಳಿತು ಬೆಟ್ಟದ ಬೆನ್ನಿಗೆ ಏರಿ, ಅಪಾಯಕಾರಿ ಅಸ್ಥಿರ ಹಿಮದೊಡ್ಡಿನಲ್ಲೆಲ್ಲಾ ಸಿಡಿಮದ್ದನ್ನು ನೆಟ್ಟು ಆಲ್ಪೈನ್ ಮೆಡೋಸ್ ಸ್ಕೀ ತಾಣಕ್ಕೆ ಬರುವ ರಸ್ತೆಯ ಮೇಲೆ ಅದು ಜಾರಿಬೀಳುವ ಹೆದರಿಕೆಯನ್ನು ತಪ್ಪಿಸುವುದೇ ಅವರ ಗುರಿಯಾಗಿತ್ತು.

೩-೪೫ರ ಹೊತ್ತಿಗೆ ಭಯಂಕರ ಸ್ವಪ್ನ ಆರಂಭವಾಯಿತು. ಸ್ಕೀ ತಾಣದ ತಲದಲ್ಲಿ ಮೂರು ಅಂತಸ್ತಿನ ಒಂದು ಕಟ್ಟಡ. ಅಲ್ಲಿ ಸ್ಕೀ ಎತ್ತಿನ ಯಂತ್ರೋಪ ಕರಣಗಳು, ಸ್ಕೀ ಕಾವಲುಭಟರ ಕೇಂದ್ರ ಕಛೇರಿ ಇವುಗಳಿದ್ದವು. ಅದ ಮೂರನೇ ಅಂತಸ್ತಿನಲ್ಲಿ ನಿರ್ವಹಣಾಧಿಕಾರಿ ರ‍್ಯಾಂಡಿಬಕ್, ಐದು ಜನ ನೌಕರರು ಒಬ್ಬ ಆಗಂತುಕ ಇದ್ದರು.

ಹಿಮಶಿಲಾಪಾತದ ಮೊದಲ ಹೊಡೆತದ ಕೆಲವು ಕ್ರೂರ ಸೆಕೆಂಡುಗಳನ್ನು ಅವನು ವಿವರಿಸಿದನು:

"ಮರ್ಮರ ಶಬ್ದ ಕಿವಿಗೆ ಬಿದ್ದೊಡನೆಯೇ ಕಟ್ಟಡವು ಘೋರವಾಗಿ ಅಲುಗಾಡತೊಡಗಿತು. ಒಂದೇ ಕ್ಷಣದನಂತರ ಬಲವಾದ ಗಾಳಿಯು ಅಪ್ಪಳಿ ಸಿತು. ಆಗಲೇ ನಾನು ನೆಲದ ಮೇಲೆ ಉರುಳಿ ನನ್ನ ತಲೆಯನ್ನು ಬಲವಾಗಿ ಹಿಡಿದುಕೊಂಡು ಚೆಂಡಿನಂತೆ ಮುದುಡಿಕೊಂಡೆ. ತತ್‌ಕ್ಷಣವೇ ನಾನು ಪೂರ್ತಿ ಹಿಮಾವೃತನಾದೆ.

ಸಮುದ್ರದ ಅಲೆಯಲ್ಲಿ ಹೊರಳಿದಂತೆ ಆಯಿತು. ಅದರ ರಭಸವು ನನ್ನನ್ನು ಅದುಮಿತು. ವೇಗವಾಗಿ ಹರಿಯುವ ನೀರಿನಂತೆ ಹಿಮದ ಓಟವು ಸ್ಪರ್ಶಿಸಿತು ಹಿಮದ ಚಲನೆ ನಿಂತಾಗ ಅರ್ಧ ಮೀಟರ್ ಹಿಮದ ಅಡಿಯಲ್ಲಿದ್ದೆ. ನನ್ನ ತಲೆ ಯನ್ನೂ ಭುಜವನ್ನೂ ಹಿಮದೊಳಗಿನಿಂದ ಮೇಲಕ್ಕೆತ್ತಿದೆ. ಆಗಲೂ ಕೋಣೆಯ ನೆಲದ ಮೇಲೆಯೇ ನಾನಿದ್ದರೂ ನನ್ನ ಸುತ್ತ ಗೋಡೆಗಳು ಮಾತ್ರ ಇರಲಿಲ್ಲ.

ಆ ಅಪರಾಹ್ನ ಆಲ್ಪೈನ್ ಮೆಡೋಸ್‌ಗೆ ಅಪ್ಪಳಿಸಿದ ಹಿಮಶಿಲಾಪಾತ

ದಲ್ಲಿ ಮೂರು ಭಾಗಗಳು. ಅವುಗಳಲ್ಲಿ ಎರಡು ಗುಡುಗುವ ನಾಲಗೆಗಳು ಝುಳಪಿಸಿ ಸ್ಕೀ ನಿಲ್ದಾಣವನ್ನು ನೆಕ್ಕಿ; ಮೂರು ಮಂದಿ ಪ್ರವಾಸಿಗಳನ್ನೂ ಒಬ್ಬ ನೌಕರನನ್ನೂ ಕಬಳಿಸಿದವು ಕೆಲವು ದೊಡ್ಡ ಹಿಮ-ಯಂತ್ರಗಳನ್ನು ಹೊಸೆದುಹಾಕಿದವು. ಮುಖ್ಯ ಭಾಗವು, ಮರಗಳನ್ನೂ ಕೊಂಬೆಗಳನ್ನೂ ಬಂಡೆ ಕಲ್ಲುಗಳನ್ನು ರಾಂಡಿಬರ್ಕ್‌ನನ್ನು ಕಬಳಿಸಿದ ಕಟ್ಟಡದ ಮೇಲಕ್ಕೆ ಗುಡಿಸಿ, ಮುಖ್ಯ ಕಟ್ಟಡದ ಮೇಲಕ್ಕೆ ಕುಸಿಯಿತು. ಈ ನಡುವೆ ಇನ್ನೂ ಮೂವರನ್ನು ಸಾಯಿಸಿ ಸ್ಕೀ ಎತ್ತಿನ ಚಾಲಕಿ ಅನ್ನಾ ಕೊನ್ರಾಡ್‌ಳನ್ನು ಮೂರು ಮೀಟರಷ್ಟು ಹಿಮ ಮತ್ತು ಮುರಿದ ವಸ್ತುಗಳಡಿಯಲ್ಲಿ ಐದು ದಿನಗಳವರೆಗೆ ಹೂಳಿಟ್ಟಿತು. ಅವಳ ಶರೀರವನ್ನು ಹುಡುಕಿದವರಿಗೆ ಅವಳು ಜೀವಂತವಾಗಿದ್ದುದು ಮಾತ್ರ ವಲ್ಲದೆ ಜಾಗ್ರತ ಸ್ಥಿತಿಯಲ್ಲಿದ್ದುದೂ ಗೋಚರಿಸಿತು. ಮೇಲಿನಿಂದ ಅವಳನ್ನು ಮುಸುಕಿದ ಮುರುಕು ವಸ್ತುಗಳ ನಡುವಿನಲ್ಲಿ ನಿರ್ಮಿತವಾದ ಒಂದು ವಾಯು ಗುಹೆಯಲ್ಲಿ ಅವಳು ಸೇರಿಹೋಗಿದ್ದಳು. (ವಿ.ಸೂ.: ಬೆಂಗಳೂರಿನ ಗಂಗಾರಾಂ ಕಟ್ಟಡವು ಕುಸಿದು ಬಿದ್ದಾಗ ಮುರುಕು ವಸ್ತುಗಳಡಿಯಲ್ಲಿ ಸಿಕ್ಕಿಕೊಂಡು ಐದಾರು ದಿನಗಳವರೆಗೆ ಬದುಕಿಬಂದವರನ್ನು ನೆನಸಿಕೊಳ್ಳಿ—ಅನು).

ಚಪಲಚಿತ್ತದ ಮಾರಕಗಳು : ಅನ್ನಾ ಕೊನ್ರಾಡಳು ಸತ್ತುಳಿದ ಪವಾಡ ಮಾತ್ರವಲ್ಲದೆ ಇನ್ನೂ ಕೆಲವು ವಿಶಿಷ್ಟ ಸಂಗತಿಗಳಿಂದ ಅಲ್ಪೈನ್‌ಮೆಡೋಸ್‌ನ ನೀರ್ಗಲ್ಲು ಅಸಾಧಾರಣವಾಗಿತ್ತು. ಮೊದಲನೆಯದು, ಯಾವುದೇ ನೀರ್ಗಲ್ಲಿ ನಿಂದ ಸ್ಕೀ-ತಾಣದ ಆವರಣದಲ್ಲಿ ಸಾವುಂಟಾಗುವುದು ಅಪೂರ್ವ. ಹೆಚ್ಚಾಗಿ ಇದಾಗುವುದು ಮನುಷ್ಯ ಸಂಚಾರಕ್ಕೆ ಪರವಾನಿಗೆ ಇಲ್ಲದ ಇಳಿಜಾರುಗಳಲ್ಲಿ ಮತ್ತು ಒಳಪ್ರಾಂತಗಳಲ್ಲಿ. ಎರಡನೆಯದು, ಅಲ್ಪೈನ್ ಮೆಡೋಸ್ ಹಿಮಶಿಲಾ ಪಾತಕ್ಕೆ ಚಾಲನೆಕೊಟ್ಟುದು ಪ್ರಕೃತಿಯೇ ಹೊರತು ಮನುಷ್ಯ ಕೃತ್ಯ ಅಲ್ಲ. ಬಹುತೇಕ ಮಾರಕ ನೀರ್ಗಲ್ಲುಗಳಿಗೆ ಅವಜ್ಞತೆಯಿಂದ ಚಾಲನೆ ಕೊಡುವವರು ಸಾವಿಗೀಡಾಗುವವರೇ. ಜಾರುಹಾವುಗೆಗಳನ್ನು ತೊಟ್ಟುಕೊಂಡು ತುಟಾಯ ಸ್ಥಿತಿಯಲ್ಲಿರುವ ನೀರ್ಗಲ್ಲು ಆಗಿ ಸಂಭವಿಸಬಹುದಾದ ಹಿಮದೊಡ್ಡುಗಳ ಮೇಲೆ ಅವರು ಕಾಲಿಟ್ಟೊಡನೆಯೇ ಹಿಮಶಿಲೆಯು ಜಾರತೊಡಗುವುದು.

ಮೂರನೆಯದು, ಹಿಂದೆಂದೂ ಅಷ್ಟೊಂದು ದೊಡ್ಡ ಗಾತ್ರದ ಅಥವಾ ಅದರ ಸಮೀಪ ಗಾತ್ರದ ನೀರ್ಗಲ್ಲು ಸಂಭವಿಸಿರಲಿಲ್ಲ. ಇಂತಹ ಅವಘಡ ಉಂಟಾಗಲು ಅನೇಕ ತಡೆಗಳಿದ್ದರೂ ಏಳುಮಂದಿ ಸತ್ತರು.

ಇದರಲ್ಲೇ ಇರುವುದು ನೀರ್ಗಲ್ಲುಗಳನ್ನು ಕುರಿತ ವರ್ಣರಹಿತ ಕಟುಸತ್ಯ.

ಇವು ಕ್ರೂರ ಚಪಲಚಿತ್ತದ ಹಂತಕಗಳು. ಪ್ರಕೃತಿ ದೇವತೆಯ ಅತ್ಯಂತ ಹೆಚ್ಚಿನ ಉದ್ರಿಕ್ತ ಸ್ವಭಾವದ ಅತ್ಯಂತ ಮಾರಕ ಸೃಷ್ಟಿ. ಇದು ಹೆಚ್ಚಾಗಿ ಆಗಾಗ ಸಂಭವಿಸುವ ಪ್ರಕೃತಿಯ ಘಟನೆಯಾದರೂ ಇದು ಭಯಂಕರವಾಗಿರುವಷ್ಟು ಗೂಢವಾಗಿಯೇ ಉಳಿದಿದೆ.

ಆಲ್ಪ್ಸ್ ಪರ್ವತಗಳಲ್ಲಿ ಪ್ರತಿವರ್ಷವೂ ಸಾವಿರಾರು ನೀರ್ಗಲ್ಲುಗಳು, ನೂರಾರು ಸಾವುಗಳಿಗೆ ಕಾರಣವಾಗುತ್ತವೆ. ಸಂಯುಕ್ತ ಸಂಸ್ಥಾನದ ಪಶ್ಚಿಮದಲ್ಲಿನ ದೀರ್ಘ ಬೆಟ್ಟಸಾಲುಗಳಲ್ಲಿ ವರ್ಷಕ್ಕೆ ಸುಮಾರು ಹತ್ತುಸಾವಿರ ಹಿಮಶಿಲಾಪಾತಗಳಾಗುವುದನ್ನು ಮನುಷ್ಯ ಕಂಡಿದ್ದಾನೆ. ಇವುಗಳಲ್ಲಿ ಅನೇಕ ಮನುಷ್ಯ ಕೃತ. ಕಾಣದ ಹಿಮಶಿಲಾಪಾತಗಳು ಇನ್ನೆಷ್ಟು ಸಾವಿರಗಳಾಗುವವೋ ದೇವರೇ ಬಲ್ಲ. ಇವೆಲ್ಲ ಮನುಷ್ಯ ವಾಸಸ್ಥಳಕ್ಕಿಂತ ಬಹುದೂರದ ಬೆಟ್ಟದ ತಪ್ಪಲುಗಳಲ್ಲಿ ಗುಡುಗುವವು, ಬುಸುಗುಟ್ಟುವವು ಅಥವಾ ಸುಮ್ಮನೆ ಹರಿಯುವವು.

ನೀರ್ಗಲ್ಲುಗಳು ಲೆಕ್ಕವಿಲ್ಲದಷ್ಟು ಬಗೆಯವು. ಕೆಲವು ತುಪ್ಪಳದಷ್ಟು ಹಗುರವಾಗಿ ಕೆಳಕ್ಕೆ ಹರಿಯುವ ಹಿಟ್ಟುಹಿಮವು ಮುದ್ದಾದ ಮಗುವಿನ ಕಣ್ಣೀರಿನಂತವು. ಕೆಲವು ಸಕ್ಕರೆ ಪಾಕದಂತೆ ದ್ರವವಾಗಿದ್ದರೂ ಮಂಜಿನ ಹೊಗೆಯನ್ನು ಎಬ್ಬಿಸುತ್ತ ಹೋಗುವವು. ಕೆಲವಂತೂ ಹೆಕ್ಟೇರುಗಳಷ್ಟು ನೆಲವನ್ನು ಮುಚ್ಚುವ ಬೃಹದಾಕಾರದ ಚಪ್ಪಡಿಗಳು. ಗಾಳಿಯ ಹೊಡೆತದಿಂದ ಅದುಮಲ್ಪಟ್ಟ ಹತ್ತುಲಕ್ಷ ಟನ್ ತೂಕದ ದಪ್ಪ ಗೋರಿಕಲ್ಲಿನಂತವು.

ದೈತ್ಯಶಕ್ತಿ: ಒಂದು ನೀರ್ಗಲ್ಲಿನ ಒಳಗೆ ಉತ್ಪತ್ತಿಯಾಗುವ ಸ್ವಾಭಾವಿಕ ಶಕ್ತಿಗಳು ಭೂಮಿಯ ಮೇಲೆ ಅತ್ಯದ್ಭುತವಾದವು — ಹುಚ್ಚುಚ್ಚಾಗಿ ಮಾರ್ಪಡುವ ದ್ರವ್ಯರಾಶಿಗಳ ಸಾಂದ್ರತೆ, ವಿಚಿತ್ರ ಜಲಭಾರದ ಏರುಪೇರು, ವಿಲಕ್ಷಣ ವೇಗೋತ್ಕರ್ಷ, ಗಾಳಿಯ ಒತ್ತಡದಲ್ಲಿ ಅದ್ಭುತ ಬದಲಾವಣೆಗಳು, ತಿಕ್ಕಾಟದಿಂದ ಅದರ ದೇಹದೊಳಗಡೆ ಆಗುವ ಶಾಖೋತ್ಪತ್ತಿ. ಒಂದು ಚಪ್ಪಡಿ ನೀರ್ಗಲ್ಲು ಸಾಧಾರಣವಾಗಿ, ಮೇಲ್ಮಟ್ಟದ ಸ್ಕೀ ಪಟುಗಳನ್ನು ಹೊರತುಪಡಿಸಿ, ಒಬ್ಬ ಸಾಮಾನ್ಯ ಸ್ಕೀಗಾರನಿಗಿಂತ ಹೆಚ್ಚಿನ ವೇಗದಲ್ಲಿ ಎಂದರೆ ಗಂಟೆಗೆ ೯೫ ಕಿ.ಮೀ. ವೇಗದಲ್ಲಿ ಜಾರಬಲ್ಲದು; ಈ ವೇಗದಲ್ಲಿ ಅಟ್ಟಿಸಿಕೊಂಡು ಬರುವ 'ಬೆನ್ನುಹತ್ತಿದ ಬೇತಾಳ', ಆರು ಸಾಗರನಾವೆಗಳಷ್ಟು ಭಾರದ ನೀರ್ಗಲ್ಲುಗಳನ್ನು ಹಿಂದೆ ಹಾಕಿ ಜಾರಬಲ್ಲೆನೆಂದು ಯೋಚಿಸುವ ಯಾವುದೇ ಸ್ಕೀಗಾರನ ಮೊಣಕಾಲು ನೀರಾಗುವುದು—ಇದಕ್ಕಿಂತಲೂ ಕಡೆಯೂ ಆಗುವುದು.

ಬೆಟ್ಟದ ತಪ್ಪಲಿನ ಇಳಿಜಾರು ಸಾಕಷ್ಟು ಕಡಿದಾಗಿಯೂ ಉದ್ದವಾಗಿಯೂ ಇದ್ದ ಪಕ್ಷದಲ್ಲಿ ನೀರ್ಗಲ್ಲು ಚಪ್ಪಡಿಯು ಜಾರುವ ವೇಗವು ಗಂಟೆಗೆ ೧೬೦ ಕಿ.ಮೀ.ವರೆಗೆ ಉತ್ಕರ್ಷವಾಗಬಲ್ಲುದು. ಆ ಸಂದರ್ಭದಲ್ಲಿ ನೀರ್ಗಲ್ಲಿನ ಮುಂದುಗಡೆ ಗಾಳಿಯ ಹೊಡೆತದ ತರಂಗಗಳನ್ನು ಸೃಷ್ಟಿಸಬಲ್ಲುದು.

ಅಂತಹ ಕುರುಡುಗೊಳಿಸುವ ವೇಗದಲ್ಲಿ ಚಲಿಸುವ ಆ ಗಾತ್ರದ ಹಿಮಶಿಲೆಯ ಮುಂದುಗಡೆಯ ಗಾಳಿಯಲ್ಲಿ ಉಂಟಾಗುವ ಒತ್ತಡ ದೊಡ್ಡ ದೊಡ್ಡ ಮರಗಳನ್ನು ನೆಲಕ್ಕೆ ಉರುಳಿಸಬಹುದೆಂದೂ ದೊಡ್ಡ ಕಟ್ಟಡಗಳನ್ನು ಸಿಡಿಸಬಹುದೆಂದೂ ಗೊತ್ತಾಗಿದೆ. ತಿಕ್ಕಾಟದಿಂದ ಆ ಹಿಮಶಿಲೆಯೊಳಗೆ ಉತ್ಪನ್ನವಾಗುವ ಶಾಖಕ್ಕೆ ಇಡೀ ಹಿಮಪರ್ವತವೇ ಕರಗಿ ನೀರಾಗಿ ಹರಿಯುವುದು. ಆಮೇಲೆ ಅದು ಚಲಿಸುವುದು. ನಿಂತ ತಕ್ಷಣವೇ ಅದು ಪುನಃ ಹೆಪ್ಪುಗಟ್ಟಿ ಅದರೊಳಗೆ ಸಿಕ್ಕಿಕೊಂಡ ಯಾವುದೇ ಬಲಿಯ ಸುತ್ತ ಹಿಮಗಡ್ಡೆಯ ಕವಚವನ್ನು ಬಿಗಿಯಾಗಿ ತೊಡಿಸುತ್ತದೆ. ರಾಕ್ಷಸಾಕಾರದ ನೀರ್ಗಲ್ಲಿನ ಶಕ್ತಿಯು ಊಹೆಗೆ ಮೀರಿದುದು. ಆಸ್ಟ್ರೇಲಿಯಾದ ನೀರ್ಗಲ್ಲು ತಜ್ಞರಾದ ಡಾಕ್ಟರ್ ಹರ್ಬರ್ಟ್ ಆಲಿಟ್ಸ್‌ಕಿಯವರು ಹೇಳುತ್ತಾರೆ, "ಗಂಟೆಗೆ ೩೮೫ ಕಿ.ಮೀ, ವೇಗದಲ್ಲಿ ಮುನ್ನುಗ್ಗುವ ಒಂದು ಹಿಟ್ಟು ನೀರ್ಗಲ್ಲು ಒಂದು ಬಿರುಗಾಳಿಯನ್ನೇ ಹೋಲುತ್ತದೆ—ಆದರೆ ವ್ಯತ್ಯಾಸವಿಷ್ಟೆ. ಹಿಮರಾಶಿಯಿಂದ ಉಂಟಾದ ಅದರ ಸಾಂದ್ರತೆಯಿಂದ ಅದಕ್ಕಿಂತ ಹೆಚ್ಚು ವಿನಾಶಕಾರಿ."

ಅವರ ಮಾತನ್ನು ರುಜುಪಡಿಸಲು ಒಂದು ಸಂಗತಿ: ಪೆರುದೇಶದ ೬,೭೬೮ ಮೀಟರ್ ಎತ್ತರದ ಹುವಾಸ್ಕರಾನ್ ಪರ್ವತ ಶಿಖರದಿಂದ (ದಕ್ಷಿಣ ಅಮೆರಿಕದ ಏಳನೆಯ ಅತ್ಯುತ್ತರ ಪರ್ವತ) ೧೯೬೨ನೇ ಇಸವಿ ಜನವರಿ ೧೦ ರಂದು ಒಂದು ಹಿಮಶಿಲೆಯು ಕಳಚಿ ಕೆಳಕ್ಕೆ ಬಿದ್ದು ಅದರೊಂದಿಗೆ, ಅನೇಕ ಹೆಕ್ಟೇರ್ ವಿಶಾಲವಾಗಿ ಹರಿಯುತ್ತಿದ್ದ ಹಿಮನದಿಯನ್ನು (glacier) ೯೦೦ ಮೀಟರ್ ಕೆಳಕ್ಕೆ ಹೊಡೆದುಕೊಂಡು ಹೋಗಿ ಕೆಳಗಿದ್ದ ತಗ್ಗು ಪ್ರದೇಶದ ಮೇಲೆ ಬಡಿದುದರಿಂದ ಉಂಟಾದ ಭಯಂಕರ ಶಬ್ದ ಕೆಲವು ಕಿಲೋಮೀಟರ್‌ಗಳಷ್ಟು ದೂರಕ್ಕೆ ಕೇಳಿಸಿತು. ಈ ಹೊಡೆತವು ಎರಡನೇ ನೀರ್ಗಲ್ಲನ್ನು ಹುಟ್ಟಿಸಿತು. ಅದು ಇಳಿಜಾರಿನಲ್ಲಿ ಗಂಟೆಗೆ ೧೦೫ ಕಿ.ಮೀ. ವೇಗದಲ್ಲಿ ನುಗ್ಗಿ ಲೆಕ್ಕವಿಲ್ಲದಷ್ಟು ಟನ್ನುಗಳ ಕಲ್ಲುಬಂಡೆಗಳನ್ನೂ ಅಲ್ಲಿ ಇಲ್ಲಿ ಇದ್ದ ಹಿಮಗಡ್ಡೆಗಳನ್ನೂ ದಬ್ಬಿಕೊಂಡು ಹೋದ ರಭಸದಲ್ಲಿ ಮುಂದಿದ್ದ ಪರ್ವತಗಳ ತಪ್ಪಲುಗಳ ಮೇಲಕ್ಕೆ ಹತ್ತಿ ಹೋಗಲು ತೊಡಗಿತು.

ಒಟ್ಟಿನಲ್ಲಿ, ಹುವಾಸ್ಕರಾನ್ ನೀರ್ಗಲ್ಲು ಲಂಬದೂರ ೪೦೦೦ ಮೀಟರು ಗಳಷ್ಟು ಇಳಿದು, ೧೬ ಕಿ.ಮೀ. ದೂರಕ್ಕೆ ಪಯಣಿಸಿತು. ಇದರಿಂದ ಸುಮಾರು ೪೦೦೦ ಜನ ಸತ್ತರು. ಎಂಟು ಹಳ್ಳಿಗಳು ಪೂರ್ತಿ ಅಥವಾ ಭಾಗಶಃ ನಾಶ ವಾದವು.

೧೯೭೦ ನೇ ಇಸವಿ ಮೇ ೩೧ ರಂದು ಪೆರು ದೇಶದಲ್ಲಿ ಒಂದು ಭೂಕಂಪ ಉಂಟಾಯಿತು. ಹುವಾಸ್ಕರಾನ್ ಪರ್ವತದ ಶಿಖರದಿಂದ ಪುನಃ ಹಿಮವು ಜಾರಿತು. ಈ ಸಲ ೨೦,೦೦೦ ಜನರು ಸತ್ತರು.

ಹಿಮನದೀ ತಜ್ಞರು ಮತ್ತು ಹಿಮ ವಿಜ್ಞಾನಿಗಳು ನೀರ್ಗಲ್ಲುಗಳನ್ನು ತಿಳಿದುಕೊಳ್ಳಲೂ ನಿಯಂತ್ರಿಸಲೂ ಕಾತುರರಾಗಿ, ಆಧುನಿಕ ವಿಜ್ಞಾನಕ್ಕೆ ತಿಳಿದುಬಂದಿರುವ ಪ್ರತಿಯೊಂದು ಉಪಕರಣ, ಕಂಪ್ಯೂಟರ್ ತಂತ್ರ, ಸಾಮಾನ್ಯ ತಿಳಿವಳಿಕೆ ಮುಂತಾದವುಗಳನ್ನು ಈ ಸಮಸ್ಯೆಯನ್ನು ಬಿಡಿಸಲು ಉಪಯೋಗಿಸು ತ್ತಿರುವರು. ಈ ದಿಶೆಯಲ್ಲಿ ಅಪಾರವಾಗಿ ಮುನ್ನಡೆದಿರುವರು. ಆದರೂ ಉತ್ತರ ಅಮೆರಿಕದ ಕೊಲೋರೆಡೋ ಫೋರ್ಟ್‌ಕಾಲಿನ್ಸ್‌ನ ಅರಣ್ಯ ಸೇವಾಸಂಸ್ಥೆಯ ನೀರ್ಗಲ್ಲು ಸಂಶೋಧನೆ ಯೋಜನೆಯ ಅಧಿಕಾರಿ, ನಾಕ್ಸ್ ವಿಲಿಯಮ್ಸ್‌ರು ವಿಜ್ಞಾನಿಗಳೆಲ್ಲರ ಪರವಾಗಿ ಹೇಳುವುದು ಹೀಗೆ—"ನೀರ್ಗಲ್ಲುಗಳ ವಿಷಯ ಎಷ್ಟೆಷ್ಟು ಹೆಚ್ಚಾಗಿ ನಿಮಗೆ ತಿಳಿದುಬರುವುದೋ ಅಷ್ಟಷ್ಟು ಹೆಚ್ಚಾಗಿ ಅವುಗಳ ವಿಷಯ ನೀವು ಸಾಕಷ್ಟು ತಿಳಿಯಲಾರಿರಿ ಎಂದು ತಿಳಿಯುವಿರಿ."

ಜಿ. ಎಸ್. ಕೇಶವಾಚಾರ್ಯ

ಹೇಯದಿಂದ ಗೈದ ಯಾವ ಕೆಲಸವೂ ಚೊಕ್ಕಾಗಲಾರದು; ಹಾಗೇ ಅಭಿ ಮಾನದಿಂದ ಗೈದ ಕಾರ್ಯ ಉದಾತ್ತವಾಗಲಾರದು.

—ರಸ್ಕಿನ್

ಜೀವನದಲ್ಲಿ ಯಾರಿಗೂ ಕೇವಲ ಸುಖವಾಗಲಿ, ದುಃಖವಾಗಲಿ ಇರುವುದಿಲ್ಲ. ಕೆಲಸಲ ದುಃಖ ಬಂದರೆ, ಕೆಲವೊಮ್ಮೆ ಸುಖವೂ ಬಂದೇ ಬರುತ್ತದೆ.

—ಕಾಳಿದಾಸ

ನಾಯಿಯ ಹಾಲು ನಾಯಿಗಲ್ಲದೆ ಅಭಿಷೇಕಕ್ಕೆ ಸಲ್ಲುವುದೇ?

—ವಚನ ಸಾಹಿತ್ಯ

ತಾಂಜಾನಿಯಾದಲ್ಲಿ ವಯಸ್ಕರ ಶಿಕ್ಷಣ

"ಶಿಕ್ಷಣ" ಎಂಬ ಪದದ ವ್ಯಾಖ್ಯೆ ಜೀವನದ ಎಲ್ಲ ಮುಖಗಳನ್ನೂ ಒಳಗೊಂಡಿದೆ. ಇದರ ಮುಖ್ಯ ಗುರಿ ವ್ಯಕ್ತಿಯ ಸರ್ವತೋಮುಖವಾದ ವಿಕಾಸ. ನಿಸರ್ಗ ನಿಯಮದ ಮೇರೆಗೆ ಈ ವಿಕಾಸ ಚಿಕ್ಕ ಹರೆಯದಲ್ಲೇ ಆಗಬೇಕು. ಇದೊಂದು ವಯಸ್ಸಿಗೆ ಸೀಮಿತವಾಗಿಲ್ಲ. ಅದು ತೊಟ್ಟಲಿನಿಂದ ಸಮಾಧಿಯ ವರೆಗೆ ಸಾಗುವ ನಿರಂತರ ಕಾರ್ಯ ಚಟುವಟಿಕೆ. ಈ ಉದ್ದೇಶ್ಯವನ್ನು ಸಾಧಿಸಲು ಬಹಳ ಹಿಂದಿನ ಕಾಲದಲ್ಲಿಯೇ ಮಠಗಳು, ಶಾಲೆಗಳು ಸ್ಥಾಪಿಸಲ್ಪಟ್ಟಿದ್ದವು. ಈ ಶಾಲೆಗಳಲ್ಲಿ ಒದಗುವ ಶಿಕ್ಷಣವೇ ಔಪಚಾರಿಕ ಶಿಕ್ಷಣ. ಕಾರಣಾಂತರಗಳಿಂದ, ಈ ಔಪಚಾರಿಕ ಶಿಕ್ಷಣ ಕ್ರಮಕ್ಕೆ ಪ್ರಾಪ್ತ ವಯಸ್ಸಿನಲ್ಲಿ ಒಳಪಡದವರನ್ನು ಅವರ ಜೀವನವಿಡೀ ಯಾವುದೇ ಬಗೆಯ ತಿಳಿವಳಿಕೆ ನೀಡದೆ ದೂರವಿಟ್ಟರೆ ಪ್ರಾಯಶಃ ಅದೊಂದು ಅಕ್ಷಮ್ಯ ಅಪರಾಧವಾಗಬಹುದು. ಆದುದರಿಂದ, ಜ್ಞಾನ ಮತ್ತು ತಿಳಿವಳಿಕೆ ಪಡೆಯುವುದರಲ್ಲಿ ವಂಚಿತರಾದ ಈ ವರ್ಗಕ್ಕೆ, ಅಕ್ಷರಾಭ್ಯಾಸ ಮಾಡಿಸಿ, ತಿಳಿವಳಿಕೆ ನೀಡುವುದೇ ಅಲ್ಲದೆ, ಒಬ್ಬ ವ್ಯಕ್ತಿ ಆರ್ಥಿಕವಾಗಿ ಸಾಮಾಜಿಕವಾಗಿ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಯಶಸ್ವಿಯಾಗಿ ಪಾಲ್ಗೊಳ್ಳುವಂತೆ ಮಾಡಬಲ್ಲ ತಿಳಿವಳಿಕೆಯನ್ನು ನೀಡುವುದೇ, ವಯಸ್ಕರ ಶಿಕ್ಷಣದ ಮುಖ್ಯ ಗುರಿಯಾಗಿದೆ. ವಯಸ್ಕರ ಶಿಕ್ಷಣ, ಎಂಬ ಪದಕ್ಕೆ ವಿಶಾಲವಾದ ಅರ್ಥವಿದೆ. ಅದು ಸಾಕ್ಷರತೆಯನ್ನೂ ಮೀರಿ ಬೆಳೆದಿದೆ. ಸಾಕ್ಷರತೆ ಒಂದು ಸಂಜೀವಿನಿಯಲ್ಲ, ಅದು ಜೀವನದ ಬಹುಮುಖ ಸಮಸ್ಯೆಗಳಿಗೆ ಏಕೈಕ ಪರಿಹಾರವಂತೂ ಆಗಲಾರದು, ಆದರೆ ಜೀವನವನ್ನು ಚೆಲುವಾಗಿಸಲು, ಅದು ಸನ್ನೆಯ ಕೋಲಿನಂತೆ ನೆರವಾಗುತ್ತದೆಂಬುದನ್ನು ಯಾರೂ ಅಲ್ಲಗಳೆಯಲಾರರು.

ಅಂತರರಾಷ್ಟ್ರೀಯ ಮಟ್ಟದಲ್ಲಿ ವಯಸ್ಕರ ಶಿಕ್ಷಣ ಎಂಬ ಪದದ ಬಳಕೆ ಹೆಚ್ಚಾಗಿ ಆದದ್ದು ಎರಡನೆ ಮಹಾಯುದ್ಧಾನಂತರದ ದಿನಗಳಲ್ಲಿ. ಯುದ್ಧದ ಭೀಕರ ಫಲಿತಾಂಶಗಳಿಂದ ನೊಂದ ಜನ "ಬಂದೂಕ"ವೊಂದೇ ಸಮಸ್ಯೆಗಳನ್ನು ಬಗೆಹರಿಸಲಾರದೆಂಬುದನ್ನು ಮನಗಂಡರು. ಸಾವು, ನೋವು, ಜನಾಂಗ ದ್ವೇಷ, ಅನಾಥರಾಗಿ ಹೆಂಗಸರು ಮಕ್ಕಳ ಅಲೆತ, ಹಣಕಾಸಿನ ಉಬ್ಬರಗಳಿಂದಾಗಿ ಬೇಸತ್ತ ಯೂರೋಪಿನ ರಾಷ್ಟ್ರಗಳು ಜನಾಂಗಗಳ ನಡುವೆ ಹೆಚ್ಚಿನ ಹೊಂದಾಣಿಕೆ ಸಹಕಾರ, ಪರಸ್ಪರ ಅರಿವು ಮೂಡಿಸಲು ವಿಜ್ಞಾನ ಮತ್ತು ವಯಸ್ಕರ ಶಿಕ್ಷಣ ಪ್ರಸಾರ ಆಗಬೇಕೆಂದು ಬಯಸಿದರು. ಏಷ್ಯ, ಆಫ್ರಿಕಗಳ ಬಹುಪಾಲು

ರಾಷ್ಟ್ರಗಳು ಸಾಮ್ರಾಜ್ಯಗಳ ಆಡಳಿತಕ್ಕೆ ಒಳಪಟ್ಟಿದ್ದು ರಾಜಕೀಯ ಸಂಕೋಲೆಗಳಿಂದ ಬಿಡುಗಡೆಯಾಗಲು ಹೆಣಗುತ್ತಿದ್ದುವು. ಅದರ ಫಲವಾಗಿ ಸಂಯುಕ್ತ ರಾಷ್ಟ್ರಸಂಸ್ಥೆ ಮತ್ತು ಅದರ ಅಂಗಸಂಸ್ಥೆಗಳು ಜನ್ಮ ತಾಳಿದವು. ಇವುಗಳಲ್ಲಿ "ಯುನೆಸ್ಕೋ" ಹೆಸರಾದುದು. "ಫಂಡಮೆಂಟಲ್ ಎಜುಕೇಷನ್" ಎಂಬ ಹೆಸರಿನಿಂದ, ಸಾಕ್ಷರತಾ ಕಾರ್ಯವನ್ನು ಅದು ಆರಂಭಿಸಲು ನಿರ್ದೇಶನ ನೀಡಿತು.

೧೯೪೮ರಲ್ಲಿ ನಡೆದ ವಿಶ್ವಸಂಸ್ಥೆಯ ಸಮ್ಮೇಳನವು "ಶಿಕ್ಷಣ ಪ್ರತಿಯೊಬ್ಬ ಮಾನವನ ಹಕ್ಕು" ಎಂದು ಘೋಷಿಸಿತು. "ಅನಕ್ಷರತೆ ವ್ಯಕ್ತಿಯ ಆರ್ಥಿಕ, ರಾಜಕೀಯ, ಸಾಮಾಜಿಕ ಅಭಿವೃದ್ಧಿಗೆ ಮತ್ತು ಆತ್ಮೋನ್ನತಿಗೆ ದೊಡ್ಡ ಕುತ್ತು (Handicap) ನಂತರ ರಾಷ್ಟ್ರೀಯ ತಿಳಿವಳಿಕೆ ಸಹಕಾರಗಳಿಗೆ ಅಡ್ಡಿ, ವಿಶ್ವದ ಶಾಂತಿಗೆ ದೊಡ್ಡ ವಿಪತ್ತು" ಎಂದು ತನ್ನ ಅನೇಕ ಹೇಳಿಕೆಗಳಲ್ಲಿ ಪ್ರಕಟಿಸಿ, ವಯಸ್ಕರ ಶಿಕ್ಷಣ ಕಾರ್ಯಕ್ಕೆ ಒತ್ತು ಕೊಟ್ಟಿತು.

೧೯೪೯ರಲ್ಲಿ ಡೆನ್ಮಾರ್ಕ್ ದೇಶದ ಎಲ್ಸಿನೋರ್ ಪಟ್ಟಣದಲ್ಲಿ ಪ್ರಪಂಚದ ೨೫ ರಾಷ್ಟ್ರಗಳ ಪ್ರತಿನಿಧಿಗಳು ಸೇರಿದ್ದರು. ಅವರಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ಯೂರೋಪು ರಾಷ್ಟ್ರಗಳಿಂದಲೇ ಬಂದಿದ್ದರು. ವಯಸ್ಕರ ಶಿಕ್ಷಣದ ಸ್ಥಾನಮಾನಗಳನ್ನು ಚರ್ಚಿಸಿ ಹಲವಾರು ಉಪಯುಕ್ತವಾದ ಸಲಹೆಗಳನ್ನು ಈ ಸಭೆ ನೀಡಿತು. "ವಯಸ್ಕರ ಶಿಕ್ಷಣ" ಭಾವನೆಯ ಬೆಳವಣಿಗೆಯ ದೃಷ್ಟಿಯಿಂದ ಮುಂದಿನ ಸಮ್ಮೇಳನ ಒಂದು ಹೆಜ್ಜೆ ಮುಂದೆ ಹೋಯಿತು.

ಕೆನಡಾ ದೇಶದ ಮುಖ್ಯ ಪಟ್ಟಣವಾದ ಮಾಂಟ್ರಿಯಲ್‌ನಲ್ಲಿ ೧೯೬೦ರಲ್ಲಿ ಸಮಾವೇಶಗೊಂಡಿದ್ದ ಸಮ್ಮೇಳನದಲ್ಲಿ, ವಿಶ್ವದ ೫೬ ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಿದರು. ಬದಲಾಗುತ್ತಿರುವ ಪ್ರಪಂಚದಲ್ಲಿ ವಯಸ್ಕರ ಶಿಕ್ಷಣ ಎಂಬ ವಿಷಯ ಚರ್ಚೆಯ ವಸ್ತುವಾಗಿದ್ದಿತು; ಈ ಸಮ್ಮೇಳನದಲ್ಲಿ. ವಯಸ್ಕರ ಶಿಕ್ಷಣವನ್ನು ಒಳಗೊಳ್ಳದ ಯಾವುದೇ ಶೈಕ್ಷಣಿಕ ಯೋಜನೆ ಪೂರ್ಣವಾದುದಲ್ಲ. ವಯಸ್ಕರ ಶಿಕ್ಷಣ ಕಡ್ಡಾಯವಾಗಿ ಸೇರಿಸಲೇಬೇಕು ಮುಂತಾದ ವಿಷಯಗಳಲ್ಲದೆ, ಮುಂದುವರಿದ ರಾಷ್ಟ್ರಗಳು ವಯಸ್ಕರ ಶಿಕ್ಷಣ ಯೋಜನೆಗೆ ಆರ್ಥಿಕವಾಗಿ ಸಹಾಯ ಮಾಡಬೇಕೆಂದೂ ಈ ಸಮ್ಮೇಳನ ನಿರ್ಣಯ ಮಾಡಿತು.

ವಿಶ್ವಸಂಸ್ಥೆಯ ೨೬ನೆಯ ಪ್ರಣಾಳಿಕೆಯ ಪ್ರಕಾರ ವಿದ್ಯೆ ಕಲಿಯುವುದು ಪ್ರತಿಯೊಬ್ಬನ ಆಜನ್ಮಸಿದ್ಧಹಕ್ಕು. ಈ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆಯು ನಿರಕ್ಷರತಾ ನಿವಾರಣೆಯ ಬಗ್ಗೆ ತನ್ನ ಗಮನ ಹರಿಸಿದೆ. ೧೯೬೧ನೇ ಇಸವಿಯಲ್ಲಿ ನಡೆದ ವಿಶ್ವಸಂಸ್ಥೆಯ ಮಹಾಸಭೆಯಲ್ಲಿ "ಸಾಮೂಹಿಕ ಸಾಕ್ಷರತಾ

ನಿವಾರಣ ಸಮಸ್ಯೆ” ಚರ್ಚೆಗೆ ಬಂದಿತು. ಈ ವಿಚಾರದಲ್ಲಿ ಯುನೆಸ್ಕೋ ಕೂಲಂಕಷವಾದ ಪರಿಶೀಲನೆ ನಡೆಸಿ ಸೂಕ್ತವಾದ ಪರಿಹಾರವನ್ನು ಸೂಚಿಸತಕ್ಕದ್ದು ಎಂದು ನಿರ್ಧರಿಸಿತು. ಆದರಿಂದ ಯಾವ ಪರಿಣಾಮವೂ ಆಗಲಿಲ್ಲ. ಪುನಃ ೧೯೬೩ರ ಡಿಸೆಂಬರ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಮಹಾಸಭೆಯಲ್ಲಿ ಇದೇ ವಿಷಯ ಚರ್ಚೆಗೆ ಬಂದು, ಅಂತಿಮವಾಗಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಮಾಡಿದ ಶಿಫಾರಸುಗಳನ್ನು ಗಮನದಲ್ಲಿಟ್ಟುಕೊಂಡು ವಯಸ್ಕರ ಶಿಕ್ಷಣದ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಲು ತನ್ನ ಅಮೂಲ್ಯ ಸಲಹೆಗಳನ್ನು ಪ್ರತಿನಿಧಿಸಿದ ದೇಶಗಳಿಗೆ ನೀಡಿತು. ೧೯೬೪ರಲ್ಲಿ ನಡೆದ ಯುನೆಸ್ಕೋ ಸಂಸ್ಥೆಯ ೧೪ನೆಯ ಅಧಿವೇಶನದಲ್ಲಿ ಪ್ರತಿ ವರ್ಷ ಸೆಪ್ಟೆಂಬರ್ ೮ನೇ ದಿನದಂದು ಅಂತರರಾಷ್ಟ್ರೀಯ ಸಾಕ್ಷರತಾ ದಿನವನ್ನಾಗಿ ಆಚರಿಸಲು ಕರೆಕೊಟ್ಟಿತು.

೨೦ನೇ ಶತಮಾನದಲ್ಲಿ ಏಷ್ಯ ಮತ್ತು ಆಫ್ರಿಕ ಖಂಡದ ಅನೇಕ ರಾಷ್ಟ್ರಗಳಲ್ಲಿ ಸ್ವಾತಂತ್ರ್ಯೋದಯವಾಯಿತಷ್ಟೆ. ಅಲ್ಲಿ ಜನರನ್ನು ಜಾಗೃತಗೊಳಿಸಿ ರಾಷ್ಟ್ರದ ಪ್ರಗತಿಗೆ ಸಹಾಯಕವಾಗುವಂತೆ ಸಾಮೂಹಿಕ ನಿರಕ್ಷರತಾ ನಿವಾರಣಾ ಆಂದೋಳನಗಳು ಬಹು ಉತ್ಸಾಹದಿಂದ ಪ್ರಾರಂಭವಾದವು. ಇಂತಹವುಗಳಲ್ಲಿ ತಾಂಜಾನಿಯಾ ದೇಶವೂ ಒಂದು. ತಾಂಜಾನಿಯಾ ದೇಶವು ೧೯೬೧ರಲ್ಲಿ ಸ್ವತಂತ್ರವಾಯಿತು. ವಿದ್ಯಾಭ್ಯಾಸವು ಒಂದು ದೇಶದ ಸಾಮಾಜಿಕ ಆರ್ಥಿಕ ಬೆಳವಣಿಗೆಗೆ ತೀರ ಅನಿವಾರ್ಯ ಎಂದು ಮನಗಂಡು ಮೊದಲು ಶಿಕ್ಷಣಕ್ಷೇತ್ರವನ್ನು ಬಲಪಡಿಸಲು ಅದು ಕಾರ್ಯೋನ್ಮುಖವಾಯಿತು. ಅದರಲ್ಲಿಯೂ ‘ವಯಸ್ಕರ ಶಿಕ್ಷಣಕ್ಕೆ’ ವಿಶೇಷ ಪ್ರಾಮುಖ್ಯತೆಯನ್ನು ಅದು ನೀಡಿತು. ೧೭ ಮಿಲಿಯ ಜನಸಂಖ್ಯೆಯನ್ನು ಹೊಂದಿದ್ದ ತಾಂಜಾನಿಯಾ ದೇಶದಲ್ಲಿ ನಡೆದ ವ್ಯಾಪಕ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಅಂಗವಾಗಿ ೧೯೭೧ರಲ್ಲಿದ್ದ ಅನಕ್ಷರತೆಯ ಪ್ರಮಾಣ ಶೇ. ೬೭ಕ್ಕೆ ಇಳಿದು, ೧೯೭೫ರ ವೇಳೆಗೆ ೩೯ಕ್ಕೆ ನಿಂತಿತು. ಮರುಪ್ರಯತ್ನದ ಫಲವಾಗಿ ೧೯೭೭ರಲ್ಲಿ ಶೇ. ೨೭ಕ್ಕೆ ಇಳಿಯಿತು. ೧೯೮೧ರ ಗಡುವನ್ನು ಹಾಕಿಕೊಂಡು ೧೯೭೭ರಲ್ಲಿ ಶೇ. ೨೭ನ್ನು ೧೦ಕ್ಕೆ ಇಳಿಸಲು ಅಪೂರ್ವ ಸಿದ್ಧತೆಗಳನ್ನು ಹಾಕಿಕೊಂಡು ಅದರಂತೆಯೇ ಅದು ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ನಡೆಸಲಾರಂಭಿಸಿತು.

೧೯೬೭ರಿಂದೀಚೆಗೆ ವಯಸ್ಕರ ಶಿಕ್ಷಣ ಕಾರ್ಯಕ್ರಮವು ವ್ಯಾಪಕವಾಗಿ ಹರಡಿತು. ವಯಸ್ಕರ ಶಿಕ್ಷಣದ ಬಗ್ಗೆ ತೀವ್ರವಾಗಿ ಆಲೋಚಿಸಿ ಅನಕ್ಷರತೆಯ

ನಿರ್ಮೂಲನಕ್ಕಾಗಿ ಒಂದು ಆಂದೋಲನವನ್ನು ಮಾಡಲು ನಿರ್ಧರಿಸಿ ಇದರ ನೆನಪಿಗಾಗಿ, ೧೯೭೦ನೇ ಸಾಲಿನ ವರ್ಷವನ್ನು "ವಯಸ್ಕರ ಶಿಕ್ಷಣ ವರ್ಷ" ಎಂದು ಘೋಷಿಸಿತು. ಈ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಟ್ಟಾಗಿ ಶ್ರಮಿಸತೊಡಗಿದವು.

ವಯಸ್ಕರ ಶಿಕ್ಷಣ ಕೇಂದ್ರಗಳು ಪ್ರಾರಂಭದಲ್ಲಿ ೧೫-೪೫ ವಯೋಮಿತಿ ಯವರಿಗೆ ಸೀಮಿತವಾಗಿದ್ದು ಕ್ರಮೇಣ ೭–೫೫ ಎಂದು ಮಾರ್ಪಾಡು ಮಾಡಿದರು. ಇದರಿಂದಾಗಿ ಇನ್ನೂ ಹೆಚ್ಚಿನ ಜನರನ್ನು ಕೇಂದ್ರಗಳಿಗೆ ಬರಮಾಡಿಕೊಳ್ಳಲು ಅನುಕೂಲವಾಯಿತು.

ಶಿಕ್ಷಣಕ್ರಮ: ತಾಂಜಾನಿಯಾದಲ್ಲಿ ವಯಸ್ಕರ ಶಿಕ್ಷಣ ಕ್ರಮವನ್ನು ನಾಲ್ಕು ಹಂತಗಳಲ್ಲಿ ರೂಪಿಸಿದ್ದಾರೆ. ಈ ನಾಲ್ಕು ಹಂತಗಳನ್ನು ಮುಗಿಸಿದವರನ್ನು "ಅಕ್ಷರಸ್ಥ" ಎಂದು ಪರಿಗಣಿಸಲಾಗುತ್ತದೆ. ಮೊದಲ ಹಂತದ ೨/೩ರಷ್ಟು ಅವಧಿಗೆ ಕೇಂದ್ರಕ್ಕೆ ತಪ್ಪದೆ ಹಾಜರಾಗುವವರನ್ನು ಎರಡನೆಯ ಹಂತಕ್ಕೆ ಹಾಜರಾಗಲು ಅರ್ಹನೆನಿಸುವನು. ಎರಡನೆಯ ಹಂತದಲ್ಲಿ ಓದುವುದು, ಬರೆಯುವುದು, ಸಂಖ್ಯೆಗಳನ್ನು ಗುರುತಿಸುವುದು, ೧ರಿಂದ ೧೦ರವರೆಗೆ ಸಂಖ್ಯೆಗಳನ್ನು ಬರೆಯುವುದು. ಮೂರನೆಯ ಹಂತದಲ್ಲಿ ಸಣ್ಣ ಸಣ್ಣ ವಾಕ್ಯಗಳನ್ನು ರಚಿಸಿ ಓದುವುದು, ೨ ಅಂಕಗಳ ಕೂಡಿ, ಕಳೆ, ಗುಣಾಕ ಹಾಗೂ ಭಾಗಾಹಾರ ಲೆಕ್ಕಗಳನ್ನು ಮಾಡುವುದು ಸೇರಿದ್ದು, ನಾಲ್ಕನೆ ಹಂತದಲ್ಲಿ ಒಂದು ಸಣ್ಣ ಪ್ಯಾರಾವನ್ನು ಓದಿ ಮನನ ಮಾಡಿಕೊಂಡು ನಂತರ ಅದೇ ಪ್ಯಾರಾ ವಿಷಯದ ಮೇಲೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸುವುದು ಸೇರುತ್ತದೆ.

ಈ ನಾಲ್ಕು ಹಂತಗಳನ್ನು ಮುಗಿಸಿದ ಶಿಕ್ಷಣಾರ್ಥಿಯು ನವ ಸಾಕ್ಷರರಿಗಾಗಿ ಮೀಸಲಾದ ವೃತ್ತಪತ್ರಿಕೆಗಳನ್ನು ಸರಾಗವಾಗಿ ಓದಿ ಅರ್ಥಮಾಡಿಕೊಳ್ಳಬಲ್ಲ ಹಂತಕ್ಕೆ ತಲುಪಿರುತ್ತಾನೆ.

ಸಮಿತಿಗಳು: ಕೇಂದ್ರಗಳು ಯಶಸ್ವಿಯಾಗಿ ನಡೆಸಲು ಸ್ಥಳೀಯ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಳ್ಳುವುದು ಅತ್ಯಾವಶ್ಯಕ. ಗ್ರಾಮ ಮಟ್ಟದಲ್ಲಿ ರಚಿತವಾದ ಸಮಿತಿಗಳು ಈ ಕೆಲಸದಲ್ಲಿ ಶ್ರದ್ಧೆ ವಹಿಸುತ್ತವೆ. ಅನಕ್ಷರಸ್ಥರ ಸಂಖ್ಯೆ ಹಳ್ಳಿಗಳಲ್ಲಿಯೇ ಹೆಚ್ಚು. ಅವರಲ್ಲೂ ಮಹಿಳೆಯರಲ್ಲಿ ಮತ್ತು ಹಿಂದುಳಿದ ವರ್ಗಗಳಲ್ಲಿ ಅವರ ಸಂಖ್ಯೆ ಅಧಿಕ. ಈ ವಯಸ್ಸಿನಲ್ಲಿ ಓದು ಬರಹ ಕಲಿತು ಏನು ಸಾಧಿಸಬೇಕೆಂಬ ಔದಾಸೀನಭಾವ ಅವರಲ್ಲಿ ಎದ್ದು ಕಾಣುತ್ತಿರುತ್ತದೆ. ಇಂತಹವರನ್ನು ಹುರಿದುಂಬಿಸಿ ಅವರ ಆಸಕ್ತಿಯನ್ನು ಕೆರಳಿಸಿ ಅವರು

ಸ್ವಪ್ರೇರಣೆಯಿಂದ ಕೇಂದ್ರಗಳಿಗೆ ಬರುವಂತೆ ಮಾಡುವುದು ಅತ್ಯಂತ ಪ್ರಮುಖವಾದ ಅಂಶ ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ. ತಾಂಜಾನಿಯಾದಲ್ಲಿ ಅಲ್ಲಿನ ಜನತೆ, ಈ ಕಾರ್ಯಕ್ರಮಕ್ಕೆ ಎಲ್ಲ ರೀತಿಯಿಂದಲೂ ಪ್ರೋತ್ಸಾಹ ನೀಡುತ್ತ ಬಂದಿದೆ. ಅವರಲ್ಲಿಯೂ ಕೆಲವು ಮಂದಿ ಆಲಸಿಗಳು ಇರುವುದುಂಟು. ಇಂತಹವರನ್ನು ಕೇಂದ್ರಗಳಿಗೆ ಮನವೊಲಿಸಿ ತರುವಲ್ಲಿ ಗ್ರಾಮ ಸಮಿತಿಗಳ ಕಾರ್ಯಕರ್ತರುಗಳು ಯಶಸ್ವಿಯಾಗುವರು. ಇವರ ಒತ್ತಡಕ್ಕೂ ಮಣಿಯದ ಮಂದಿಯೂ ಇಲ್ಲಿ ನಮಗೆ ಸಿಗುವುದುಂಟು. ಅಂತಹವರನ್ನು ಹಿಡಿದು ದಂಡ ವಿಧಿಸಿ ಕೇಂದ್ರಕ್ಕೆ ಬರುವಂತೆ ಮಾಡುವುದಕ್ಕೂ ಗ್ರಾಮ ಸಮಿತಿಯವರು ಹಿಂತೆಗೆಯುವುದಿಲ್ಲ. ತಾಂಜಾನಿಯಾ ದೇಶದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮ ಯಶಸ್ವಿಯಾಗಲು ಕೈಕೊಂಡ ಪ್ರಯತ್ನಗಳಲ್ಲೆಲ್ಲಾ ಅತ್ಯಂತ ಪ್ರಮುಖವಾದುದು ಮತ್ತು ಗಮನಾರ್ಹವಾದುದು ಎಂದರೆ, ಅಲ್ಲಿನ ಆಡಳಿತಾರೂಢ ಪಕ್ಷವು, ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ತನ್ನ ಪಕ್ಷದ ಚಟುವಟಿಕೆಗಳನ್ನು ನಡೆಸುವ ರೀತಿಯಲ್ಲಿಯೇ ಇದನ್ನೂ ಸಂಪೂರ್ಣ ಬದ್ಧತೆಯಿಂದ ನಡೆಸುತ್ತದೆ.

ಆಡಳಿತ ವ್ಯವಸ್ಥೆ: ಬಹುಸಂಖ್ಯಾತ ಜನರು ಶಿಕ್ಷಣದಿಂದ ವಂಚಿತರಾಗಿರುವುದರಿಂದ ಶೈಕ್ಷಣಿಕ ಹಾಗೂ ಸಾಮಾಜಿಕ ಯೋಜನೆಗಳನ್ನು ಕಾರ್ಯಗತ ಮಾಡಲು ಅಡ್ಡಿಯಾಗಿತ್ತು. ಇದನ್ನರಿತ ತಾಂಜಾನಿಯಾ ಸರ್ಕಾರವು ೧೯೬೧ರಲ್ಲಿ ಸ್ವತಂತ್ರಗೊಂಡ ಕೂಡಲೇ ಶಿಕ್ಷಣ ಕ್ಷೇತ್ರದಲ್ಲಿ ಶ್ರಮಿಸತೊಡಗಿತು. ಶಿಕ್ಷಣ ಕ್ರಮದಲ್ಲಿ, ವಯಸ್ಕರ ಶಿಕ್ಷಣಕ್ಕೆ ಹೆಚ್ಚು ಒತ್ತುಕೊಟ್ಟು ಅದಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನೇ, ಕೇಂದ್ರ ಹಾಗೂ ರಾಜ್ಯಗಳಲ್ಲಿ ತೆರೆಯಿತು. ಇಡೀ ತಾಂಜಾನಿಯಾ ದೇಶವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿ ಅವುಗಳಲ್ಲಿ ಆಯಾಯಾ ಭಾಗವನ್ನು ಮತ್ತೆ, ಪ್ರಾಂತೀಯ, ಜಿಲ್ಲಾ, ವಾರ್ಡ್ ಹಾಗೂ ಹಳ್ಳಿಗಳೆಂದು ಕಾರ್ಯಕ್ಷೇತ್ರವನ್ನು ಮಾಡಲಾಯಿತು. ಪ್ರಾಂತೀಯ ಮಟ್ಟದಲ್ಲಿ ಆಯಾ ಪ್ರಾಂತೀಯ ಆಡಳಿತಾರೂಢ ಪಕ್ಷದ ಕಾರ್ಯದರ್ಶಿಯು ಅಧ್ಯಕ್ಷನಾಗಿ ಮತ್ತು ವಯಸ್ಕರ ಶಿಕ್ಷಣ ಇಲಾಖೆಯ ಸಮನ್ವಯಾಧಿಕಾರಿಯು ಕಾರ್ಯದರ್ಶಿಯೂ ಇತರ ಇಲಾಖಾ ವಿಭಾಗೀಯ ಮುಖ್ಯಾಧಿಕಾರಿಗಳು ಸದಸ್ಯರಾಗಿಯೂ ಇರುವಂತಹ ಸಮಿತಿಗಳನ್ನು ರಚಿಸಿದರು. ಈ ಎಲ್ಲ ಹಂತಗಳಲ್ಲಿಯೂ ವಯಸ್ಕರ ಶಿಕ್ಷಣ ಕಾರ್ಯವು ಸುಸೂತ್ರವಾಗಿ ನಡೆಯಲು ಆಯಾಯಾ ಸಮಿತಿಗಳವರು ಕಷ್ಟಪಟ್ಟು ದುಡಿಯತೊಡಗಿದರು. ಈ ಸಮಿತಿಗಳಿಗೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಬೇಕಾದ ಸ್ವತಂತ್ರವನ್ನೂ

ಅಲ್ಲಿನ ಸರ್ಕಾರ ನೀಡಿತು. ವಯಸ್ಕರ ಶಿಕ್ಷಣ ಯೋಜನೆಯು ಒಂದು ರೀತಿಯಲ್ಲಿ ವೈಶಿಷ್ಟ್ಯಪೂರ್ಣವಾದುದು. ಇದು ಬೃಹತ್‌ಪ್ರಮಾಣದ್ದು. ಇದನ್ನು ನಡೆಸುವುದು ಸರ್ಕಾರದಿಂದ ಮಾತ್ರವೇ ಸಾಧ್ಯವಿಲ್ಲ. ಜನಸಮುದಾಯವೂ ಸಕ್ರಿಯವಾಗಿ ಇದರಲ್ಲಿ ಪಾಲ್ಗೊಳ್ಳಬೇಕು. ಈ ದೃಷ್ಟಿಕೋನದಿಂದ ಆರಂಭದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಇತರ ಸಂಘ ಸಂಸ್ಥೆಗಳು ಗಣನೀಯ ಸೇವೆಯನ್ನು ಸಲ್ಲಿಸಿದವು. ಅನಂತರದ ವರ್ಷಗಳಲ್ಲಿ ಸರ್ಕಾರವೇ ಮುಂದೆ ಬಂದಿತು ಎಂಬುದು ಗಮನಾರ್ಹ. ವಯಸ್ಕರ ಶಿಕ್ಷಣ ಕಾರ್ಯಕ್ರಮವು ಒಂದು ಇಲಾಖೆಯ, ಒಬ್ಬ ವ್ಯಕ್ತಿಯ ಸಹಾಯದಿಂದ ನಡೆಯತಕ್ಕ ಕಾರ್ಯಕ್ರಮವಲ್ಲ. ಇದು ಸರ್ಕಾರದ ಜವಾಬ್ದಾರಿಯುತವಾದ ಕರ್ತವ್ಯ. ಆದ್ದರಿಂದ, ಸರ್ಕಾರದ ಎಲ್ಲ ಇಲಾಖೆಗಳೂ ಸೇರಿ ಕೈಕೊಳ್ಳುವ ಕಾರ್ಯಕ್ರಮ ಎಂದು ತಿಳಿದು, ಎಲ್ಲ ಇಲಾಖೆಗಳವರೂ ಈ ಒಂದು ಕಾರ್ಯಕ್ರಮವನ್ನು ತಮ್ಮ ಇಲಾಖೆಯ ಇತರ ಅಭಿವೃದ್ಧಿ ಕಾರ್ಯಗಳ ಜೊತೆಗೆ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನೂ ನಡೆಸಿದರು. ಕೇಂದ್ರ ಹಾಗೂ ರಾಜ್ಯಗಳಲ್ಲಿದ್ದಂತಹ ವಯಸ್ಕರ ಶಿಕ್ಷಣ ಇಲಾಖೆಯು ಕಾರ್ಯಕ್ರಮಗಳನ್ನು ರೂಪಿಸುವುದು ಹಾಗೂ ನಿರ್ದೇಶನ ನೀಡುವುದಷ್ಟೇ ಕೆಲಸವನ್ನು ಮಾಡುತ್ತ ಈ ದಿಶೆಯಲ್ಲಿ ಕೆಲಸ ಮಾಡತೊಡಗಿತು. ವಿವಿಧ ಇಲಾಖೆಗಳಿಗೆ ನಿರ್ದೇಶನ ನೀಡುವುದರ ಜೊತೆಗೆ ಅವರು ನಡೆಸಿದ ಕಾರ್ಯಕ್ರಮಗಳನ್ನು ಕ್ರೋಢೀಕರಿಸುವುದು, ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಕಲಿಯುವವರ ಆಸಕ್ತಿ, ಅಭಿರುಚಿ ಮತ್ತು ಅಗತ್ಯಗಳಿಗೆ ತಕ್ಕಂತೆ ಬೋಧನಾ ಸಲಕರಣೆಗಳನ್ನು, ಪುಸ್ತಕಗಳನ್ನು, ಚಿತ್ರಪಟಗಳನ್ನು ರೂಢಿಪಾಟಿಗಳು ಮತ್ತು ಮೌಲ್ಯಮಾಪನ ಸಾಧನಗಳನ್ನು ರೂಪಿಸಿ, ಸಿದ್ಧಪಡಿಸಿ ವಿತರಣೆ ಮಾಡುವಂತಹ ಗುರುತರ ಕೆಲಸಗಳನ್ನು ಇದು ನಿರ್ವಹಿಸುತ್ತಿತ್ತು. ಇದಲ್ಲದೆ, ಕಾಲಕಾಲಕ್ಕೆ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ತತ್ವ ಮತ್ತು ಉದ್ದೇಶಗಳನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸುವುದು ವಿಚಾರಗೋಷ್ಠಿ, ಸಮ್ಮೇಳನಗಳನ್ನು ಏರ್ಪಡಿಸುವುದು. ಆಯಾ ಪ್ರಾದೇಶಿಕ ಅವಶ್ಯಕತೆಗಳಿಗನುಗುಣವಾಗಿ ಬೋಧನಾ ಸಾಮಗ್ರಿಗಳನ್ನು ತಯಾರಿಸುವುದು ಮತ್ತು ವಯಸ್ಕರ ಶಿಕ್ಷಣ ಕಾರ್ಯಕ್ರಮದ ಮುನ್ನಡೆಗೆ ಅನುಕೂಲವಾಗುವಂತಹ ಕೆಲಸಗಳನ್ನು ಉತ್ತಮ ರೀತಿಯಲ್ಲಿ ನಡೆಸಲು ಬೇಕಾದ ತರಬೇತಿ ವ್ಯವಸ್ಥೆಯನ್ನು ಅದು ನೀಡಲಾರಂಭಿಸಿತು.

ತರಬೇತಿ: ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವ ಮುಂದಿಗೆ ತರಬೇತಿ

ನೀಡಲು, ರಾಷ್ಟ್ರಮಟ್ಟದಲ್ಲಿ ಒಂದು ಸಂಸ್ಥೆ ರೂಪುಗೊಂಡಿತು. ಇಲ್ಲಿ ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಡಿಪ್ಲೋಮೊ ತರಗತಿಗಳನ್ನೂ ಆರಂಭಿಸಲಾಯಿತು. ಪ್ರಾರಂಭದಲ್ಲಿ ಈ ಡಿಪ್ಲೋಮೋ ತರಗತಿಗಳ ಅವಧಿ ಒಂದು ವರ್ಷ ಆಗಿದ್ದಿತು. ಕ್ರಮೇಣ ಇದನ್ನು ಎರಡು ವರ್ಷ ಮಾಡಲಾಯಿತು. ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಅಭಿರುಚಿಯುಳ್ಳ ಯಾರಾದರೂ ಇಲ್ಲಿ ಪ್ರವೇಶವನ್ನು ಪಡೆಯುವ ಸೌಲಭ್ಯವಿತ್ತು. ಈ ಸಂಸ್ಥೆಯೂ ವಯಸ್ಕರ ಶಿಕ್ಷಣ ಸರ್ವಸ್ವತಂತ್ರವಾಗಿದ್ದು, ಪ್ರಕಟಣ ವಿಭಾಗ, ರೇಡಿಯೊ ವಿಭಾಗಗಳನ್ನು ಹೊಂದಿತ್ತು. ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ಬೇಕಾಗುವ ಬೋಧನ ಸಾಮಗ್ರಿಗಳನ್ನು ಕಾರ್ಯಕ್ರಮ ಗಳನ್ನು ರೂಪುಗೊಳಿಸುವುದರಲ್ಲಿ ಇವರದ್ದೂ ಮಹತ್ವದ ಪಾತ್ರವಿತ್ತು. ಇಲ್ಲಿ ಸಾಮಗ್ರಿಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕ ಅನುಭವ ಪಡೆದಿರುವ ತಜ್ಞರ ಸಲಹೆ ಸೂಚನೆ ಗಳನ್ನು ಅದು ತಪ್ಪದೆ ಪಡೆಯುತ್ತಿತ್ತು. ಆಯಾ ಪ್ರಾಂತೀಯ ಆವಶ್ಯಕತೆ ಗಳಿಗನುಗುಣವಾಗಿ ಆಕಾಶವಾಣಿ ಕಾರ್ಯಗಳನ್ನು ರೂಪಿಸಿ ಪ್ರಸಾರಕ್ಕೆ ಸಹಾಯ ಮಾಡುತ್ತಿತ್ತು. ಆಗಾಗ ವಯಸ್ಕರ ಶಿಕ್ಷಣ ಶಿಬಿರಗಳನ್ನೂ ಈ ಸಂಸ್ಥೆಯೂ ನಡೆಸುತ್ತದೆ.

ನವ ಸಾಕ್ಷರರ ವಿದ್ಯಾಭ್ಯಾಸ: ವಯಸ್ಕರ ಶಿಕ್ಷಣ ಕಲಿಕೆ ಕ್ರಮದ ನಾಲ್ಕು ಹಂತಗಳನ್ನು ಮುಗಿಸಿ ಅಕ್ಷರಸ್ಥರಾದ ಮಂದಿಗೆ ಅವರ ಜ್ಞಾನ ಜ್ಯೋತಿಯನ್ನು ಇನ್ನೂ ಹೆಚ್ಚಿಸಿಕೊಳ್ಳಲು ರಾಷ್ಟ್ರಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಒಂದು ಕರೆಸ್ಪಾಂಡೆನ್ಸ್ ಸಂಸ್ಥೆಯು ೧೯೭೦ರಲ್ಲಿ ಜನ್ಮ ತಾಳಿತು. ಜನಸಾಮಾನ್ಯರು ರಾಷ್ಟ್ರ ಹಾಗೂ ರಾಜ್ಯಮಟ್ಟದಲ್ಲಿ ಆಗುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ಅರಿತು ಅವುಗಳಲ್ಲಿ ಭಾಗವಹಿಸಲು ನೆರವನ್ನು ನೀಡುವುದು ಈ ಸಂಸ್ಥೆಯ ಘನ ಉದ್ದೇಶಗಳಲ್ಲಿ ಒಂದು. ನವಸಾಕ್ಷರರು ತಮಗೆ ಇಷ್ಟಬಂದ ಒಂದು ವಿಷಯ ವನ್ನು ಆರಿಸಿಕೊಂಡು, ಅದರಲ್ಲಿ ಇನ್ನೂ ಹೆಚ್ಚಿನ ಪ್ರಾವೀಣ್ಯತೆಯನ್ನು ಇಲ್ಲಿ ಪಡೆಯಬಹುದಾದಂತಹ ಸೌಕರ್ಯಗಳನ್ನು ಇಲ್ಲಿ ನೀಡಲಾಗುತ್ತಿತ್ತು. ಇಲ್ಲಿಯ ವರೆಗೂ ೧೧,೦೦೦ ಮಂದಿ ನವ ಸಾಕ್ಷರರು ಇಲ್ಲಿನ ಶಿಕ್ಷಣ ಕ್ರಮದಿಂದ ಮುಂದೆ ಬಂದು ಸ್ವಾವಲಂಬಿಗಳಾಗಿ ಆದರ್ಶ ಜೀವನವನ್ನು ನಡೆಸುತ್ತಿರುವುದುಂಟು. ೧೫-೬೦ ವರ್ಷ ವಯೋಮಿತಿಯ ನವ ಸಾಕ್ಷರರಿಗೆ ಇಲ್ಲಿ ಅವಕಾಶವನ್ನು ಕಲ್ಪಿಸಿಕೊಡಲಾಗಿದ್ದರೂ ಹೆಚ್ಚಾಗಿ ೨೧-೩೯ ವರ್ಷ ವಯೋಮಿತಿಯ ನವ ಸಾಕ್ಷರರು ಇದರ ಪ್ರಯೋಜನವನ್ನು ಪಡೆದುಕೊಂಡುದಾಗಿ ತಿಳಿದುಬಂದಿದೆ.

ಇವರಲ್ಲಿ ಶೇ. ೭೬ ಮಂದಿ ಪಟ್ಟಣ ಪ್ರದೇಶಗಳಿಂದಲೂ ಶೇ. ೨೪ ಮಂದಿ ಗ್ರಾಮ ಪ್ರದೇಶಗಳಿಂದಲೂ ಬಂದವರಾಗಿದ್ದು, ಅವರಲ್ಲಿ ಶೇ. ೧೬ ಮಂದಿ ಸ್ತ್ರೀಯರು ಇಲ್ಲಿನ ಶಿಕ್ಷಣ ಸೌಲಭ್ಯವನ್ನು ಪಡೆದುದು ಗಮನಾರ್ಹವಾಗಿದೆ.

ವೃತ್ತಪತ್ರಿಕೆಗಳು : ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ವೃತ್ತ ಪತ್ರಿಕೆ ಹಾಗೂ ಗ್ರಾಮ ಪುಸ್ತಕ ಭಂಡಾರಗಳ ಪತ್ರ ಬಹು ಮುಖ್ಯವಾದುದು. ತಾಂಜಾನಿಯಾದಲ್ಲಿ ವಯಸ್ಕರ ಶಿಕ್ಷಣಕಾರ್ಯವನ್ನು ಆರಂಭಿಸಿದ ಪ್ರಾರಂಭದಲ್ಲಿ ಅಲ್ಲಿನ ವೃತ್ತ ಪತ್ರಿಕೆಗಳು ಈ ಒಂದು ಬೃಹತ್ ಕಾರ್ಯಕ್ಕೆ ನೆರವಾದುದು ಪ್ರಶಂಸನೀಯವಾದುದೇ ಆಗಿದೆ. ನವ ಸಾಕ್ಷರರಿಗೆ ಪ್ರತ್ಯೇಕವಾದ ಒಂದು ಪುಟ ವನ್ನು ಅಲ್ಲಿನ ವೃತ್ತಪತ್ರಿಕೆ ಪ್ರತಿದಿನ ಪ್ರಕಟಿಸುತ್ತಿತ್ತು. ಅದೇ ರೀತಿ ಗ್ರಾಮಾಂತರ ಪ್ರದೇಶಗಳಿಂದ ಪ್ರಕಟವಾಗುವ ವೃತ್ತಪತ್ರಿಕೆಗಳೂ ಈ ಕ್ರಮವನ್ನು ಅನುಕರಿಸಿ ದುವು. ಪುಟ ವಿನ್ಯಾಸವನ್ನು ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕ ಅನುಭವ ಪಡೆದ ಮುಖಂಡರುಗಳಿಂದ ಮತ್ತು ಸಂಸ್ಥೆಗಳ ನೆರವಿನೊಂದಿಗೆ ರಚಿಸುತ್ತಿತ್ತು. ಆರಂಭದಲ್ಲಿ ಉಚಿತವಾಗಿ ಇಂತಹ ಪತ್ರಿಕೆಗಳನ್ನು ನವ ಸಾಕ್ಷರರಿಗೆ ಹಂಚ ಲಾಗುತ್ತಿದ್ದು, ೧೯೭೬ ರ ನಂತರ ಬೆಲೆಗೆ ಮಾರಲು ನಿರ್ಧರಿಸಿದರು. ಮೊದಲ ಹಂತದಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳ ಸಂಖ್ಯೆ ೧ ಲಕ್ಷ. ನವ ಸಾಕ್ಷರರು ಓದುವ ಶಕ್ತಿಯನ್ನು ಈ ಪತ್ರಿಕೆಯನ್ನು ಓದುವುದರಿಂದ ಹೆಚ್ಚಿಸಿಕೊಳ್ಳು ತ್ತಿದ್ದರು. ಜೊತೆಗೆ ಪ್ರಪಂಚದ ಆಗುಹೋಗುಗಳನ್ನು ಅರಿಯಲು ಈ ಪತ್ರಿಕೆ ನೆರವಾಗುತ್ತಿತ್ತು.

ಪುಸ್ತಕಭಂಡಾರಗಳು : ನಿರಕ್ಷರತಾ ನಿವಾರಣೆಗೆ ಗ್ರಾಮೀಣ ಪುಸ್ತಕ ಭಂಡಾರಗಳ ಯೋಜನೆಯೂ ಮುಖ್ಯವಾದುದು. ಗ್ರಾಮದಲ್ಲಿನ ಎಲ್ಲ ಬಗೆಯ ಜನರಿಗೆ ಓದಲು ಪುಕ್ಕಟೆಯಾಗಿ ಅವರಿಗೆ ಪುಸ್ತಕಗಳು ಇಲ್ಲಿ ಸಿಗುತ್ತವೆ. ಶಾಲೆ ಯನ್ನು ಓದಿ ಬಿಟ್ಟವರು ವಯಸ್ಕರ ಶಿಕ್ಷಣ ಶಾಲೆಯಲ್ಲಿ ತೇರ್ಗಡೆಯಾದ ನವಸಾಕ್ಷರರು ಮತ್ತಿತರ ವಿದ್ಯಾವಂತ ಮಂದಿಗೆ ಅವರ ಜ್ಞಾನದ ಹಸಿವನ್ನು ಇಂಗಿಸಿಕೊಳ್ಳಲು ಇದು ಅಮೃತವಾದುದು. ತಾಂಜಾನಿಯಾದಲ್ಲಿ ವಿಭಾಗೀಯ ಕೇಂದ್ರಗಳಲ್ಲಿ ಪುಸ್ತಕ ಭಂಡಾರಗಳನ್ನು ತೆರೆಯಲಾಯಿತು. ಪ್ರತಿ ಪುಸ್ತಕ ಭಂಡಾರವು, ತಲಾ ೧೦೦ ಶೀರ್ಷಿಕೆಗಳ ತಲಾ ೨೦೦ ಪುಸ್ತಕಗಳನ್ನು ಹೊಂದಿರು ತ್ತಿತ್ತು. ಇದರ ಜೊತೆಗೆ ಸಂಚಾರಿ ಪುಸ್ತಕ ಭಂಡಾರಗಳೂ ಮತ್ತು ಸೈಕಲ್ ಮೇಲೆ ಹೊತ್ತು ತಿರುಗುವ ಪುಸ್ತಕ ಭಂಡಾರಗಳೂ ಕಾರ್ಯನಿರ್ವಹಿಸಿದುದು ತಿಳಿದು ಬರುತ್ತದೆ. ಆದರೆ ಇವುಗಳ ಕ್ಷೇತ್ರ ಸೀಮಿತವಾದುದು. ಒಟ್ಟಾರೆ, ರಾಷ್ಟ್ರದ ಅಭಿವೃದ್ಧಿ

ಕಾರ್ಯಕ್ರಮಗಳನ್ನು ಪರಿಚಯ ಮಾಡಿಕೊಟ್ಟು ಅವುಗಳಲ್ಲಿಗ್ರಾಮಸ್ಥರು ಸಕ್ರಿಯವಾಗಿಪಾಲ್ಗೊಳ್ಳುವಂತೆ ಮಾಡುವುದೇ ಇವುಗಳ ಉದ್ದೇಶವಾಗಿತ್ತು.

ತೊಡಕುಗಳು : ತಾಂಜಾನಿಯಾ ದೇಶದಲ್ಲಿಯೂ ವಯಸ್ಕರ ಶಿಕ್ಷಣ ಕಾರ್ಯದಂತಹ ರಾಷ್ಟ್ರಮಟ್ಟದ ಕಾರ್ಯವನ್ನು ನಡೆಸುವುದರಲ್ಲಿ ಅನೇಕ ತೊಡಕುಗಳು ಉಂಟಾದವು. ಅವುಗಳಲ್ಲಿ ಮುಖ್ಯವಾದುವು ಈ ರೀತಿ ಇವೆ.

—ಬೋಧನ ಸಾಮಗ್ರಿಗಳ ಅಭಾವ

—ತರಗತಿಗಳನ್ನು ಮಧ್ಯದಲ್ಲಿಯೇ ಬಿಟ್ಟು ಬಿಡುವುದು.

—ವಯಸ್ಕರ ಶಿಕ್ಷಣ ಕೇಂದ್ರಗಳ ಶಿಕ್ಷಕರು ಬೇರೆಕಡೆ ಉದ್ಯೋಗಗಳನ್ನು ಹುಡುಕಿ ಕೇಂದ್ರಗಳನ್ನು ಮಧ್ಯದಲ್ಲಿ ಬಿಡುವುದು.

—ಕೇಂದ್ರಗಳಲ್ಲಿ ಪಾಠ ಹೇಳಲು ಬರುವ ಶಿಕ್ಷಕ ವೃಂದಕ್ಕೆ ಹಣ ರೂಪದಲ್ಲಿ ಪ್ರತಿಫಲ ನೀಡದೆ, ವೃತ್ತಿ ಹಾಗೂ ವಿದ್ಯಾಭ್ಯಾಸ ಕ್ಷೇತ್ರಗಳಲ್ಲಿ ಸವಲತ್ತು ಹಾಗೂ ಪ್ರಾಮುಖ್ಯತೆಯನ್ನು ನೀಡುವುದು.

ಈ ಕಾರಣಗಳು ಅವರಿಗೆ ಬಹುಮುಖ್ಯವಾದ ತೊಡಕನ್ನುಂಟು ಮಾಡಿದವು. ಆದರೂ ಅಲ್ಲಿನ ಜನತೆಯ ಸಹನೆ ಅಪಾರ. ಸಾಧನೆಯೂ ಅಷ್ಟೆ.

ಅನುಕರಣೀಯ :

ಸರಕಾರದ ಎಲ್ಲ ಅಭಿವೃದ್ಧಿ ಇಲಾಖೆಗಳೂ ಶಾಶ್ವತ ಹಾಗೂ ಕಡ್ಡಾಯ ಕ್ರಮದಲ್ಲಿ ವಯಸ್ಕರ ಶಿಕ್ಷಣ ವಿಭಾಗವನ್ನು ಪ್ರತ್ಯೇಕವಾಗಿ ತೆರೆದು, ವಯಸ್ಕರ ಶಿಕ್ಷಣ ಇಲಾಖೆ ನೇರ ಸಹಯೋಗದೊಂದಿಗೆ ಪಾಲ್ಗೊಳ್ಳುವುದು.

ಸಮೂಹ ಮಾಧ್ಯಮಗಳೆಲ್ಲವನ್ನೂ ಸಮರ್ಥವಾಗಿ ಬಳಸಿಕೊಳ್ಳುವುದು. ಅದರಲ್ಲಿಯೂ ಆಕಾಶವಾಣಿ ಹಾಗೂ ವೃತ್ತ ಪತ್ರಿಕೆಗಳನ್ನು ವಯಸ್ಕರ ಶಿಕ್ಷಣ ಕ್ಷೇತ್ರಕ್ಕೆ ಅನುವಾಗುವಂತೆ ಮಾರ್ಪಡಿಸಿಕೊಳ್ಳುವುದು.

ರಾಜಕೀಯ ಪಕ್ಷಗಳು, ಸೇವಾಸಂಸ್ಥೆಗಳು ತಂತಮ್ಮ ಚಟುವಟಿಕೆಗಳ ಜೊತೆಗೆ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ಕಡ್ಡಾಯವಾಗಿ ನಡೆಸಬೇಕೆಂಬ ಒತ್ತಾಯ ತರುವುದು. ವಿಶ್ವವಿದ್ಯಾನಿಲಯಗಳು ವಯಸ್ಕರ ಶಿಕ್ಷಣ ಡಿಪ್ಲೊಮಾ ಹಾಗೂ ಪದವಿ ತರಗತಿಗಳನ್ನು ತೆರೆಯುವ ದಿಕ್ಕಿನಲ್ಲಿ ಕಾರ್ಯತತ್ಪರವಾಗುವುದು.

ಯಾವುದೇ ಹೊಸ ಮಾರ್ಗವನ್ನು ನಾವು ಅನುಸರಿಸಬಹುದಾದರೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಿಡದೆ, ಕಾರ್ಯಕ್ರಮವನ್ನು ಸಂಪೂರ್ಣ ಬದ್ಧತೆಯಿಂದ ನಡೆಸುವ ಒಂದು ಶಾಶ್ವತ ಏರ್ಪಾಡನ್ನು ನಾವು ಕೈಗೊಂಡರೆ ಈ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸುವುದರಲ್ಲಿ ಸಂದೇಹವಿಲ್ಲ.

ಅಂಚೆಪೇಟೆ ದಕ್ಷಿಣಾಮೂರ್ತಿ

ಏಕಾಂತದ ಮೌನ ಸಂತೋಷ

"ನಮ್ಮ ಬದುಕು ಕಾಲಗಳಿದ್ದಂತೆ, ಏಕಾಂತತೆಯೆಂಬ ಛಳಿಗಾಲ ನಮ್ಮನ್ನು ಆವರಿಸಿದಾಗ, ಅದು ಹೊಸ ಬದುಕೊಂದನ್ನು ಆವಿಷ್ಕಾರಗೊಳಿಸಿಕೊಳ್ಳುವ ಕ್ರಿಯೆಯ ಮೊದಲ ಹಂತವಾಗುತ್ತದೆ."

ಜನವರಿ ತಿಂಗಳು, ಮಳೆ ಬೀಳುತ್ತಿದ್ದಂತೆಯೇ ಅದು ಹಿಮವಾಗಿ ಮಾರ್ಪಡುತ್ತಿತ್ತು. ನಾನು ನನ್ನ ಮನೆಯಲ್ಲಿ ಡೆಸ್ಕಿನ ಬಳಿ ಮೌನಿಯಾಗಿ ಕುಳಿತ್ತಿದ್ದೆ. ಗುಬ್ಬಿಗಳು ನನ್ನ ಮನೆಯ ಛಾವಣಿಗೆ ಎರಗುವುದರಿಂದ ಉಂಟಾಗುವ ಧ್ವನಿ ಮಾತ್ರ ಕೇಳುತ್ತಿತ್ತು. ಆ ಛಳಿಯಲ್ಲಿ ಯಾರೊಬ್ಬರ ಸಂಚಾರವೂ ಇರಲಿಲ್ಲ. ರಾತ್ರಿ ಊಟಕ್ಕಾಗಿ ಒದರಾಟ ಇರಲಿಲ್ಲ. ನನ್ನನ್ನು ಯಾರೊಬ್ಬರೂ ಬಂದು ಹೊರಗಡೆಗೆ ಕರೆಯಲಿಲ್ಲ. ಹಿಮ ಬರ್ಚ ಮರಗಡಗಳನ್ನೆಲ್ಲ ಆವರಿಸಿತ್ತು. ಯಾರೂ ತಮ್ಮ ಕುತೂಹಲಕ್ಕೆ "ನೀನು ಈ ದಿನ ಸಾಕಷ್ಟು ಕೆಲಸ ಮಾಡಿದಿಯಾ?" ಎಂದು ಪ್ರಶ್ನಿಸುವುದರ ಮೂಲಕ ನನ್ನ ಮೌನಕ್ಕೆ ಭಂಗ ತರಲಿಲ್ಲ.

ಈ ಪ್ರಶಾಂತ ಮೌನ ಪ್ರಾಪ್ತವಾದದ್ದು ಏಳು ವರ್ಷಗಳ ಕೆಳಗೆ ಆ ಸಂದರ್ಭದಲ್ಲಿ ಸುಂದರವಾದ ವಸಂತವಿತ್ತು. ಜುಳು-ಜುಳು ಹರಿವ ನೀರಿನ ಸದ್ದು ಆಹ್ಲಾದಕರವಾಗಿತ್ತು. ಗೋಲ್ಫ್ ಆಡಲು ತೆರಳುವ ತರಾತುರಿಯಲ್ಲಿದ್ದ ನನ್ನ ಪತಿ ಹೆಬ್ಬಾಗಿಲಿನ ಬಳಿಯಲ್ಲೇ ನನ್ನನ್ನು ಒಲವಾಗಿ ಅಪ್ಪಿಕೊಂಡು ಬಿಟ್ಟರು. ಅನಂತರ ಹೊರಕ್ಕೆ ಕರೆದು "ಮನೆಯನ್ನು ಸ್ವಲ್ಪ ಕಾಲ ನೋಡಿಕೋ ನಾನು ಮೂರಕ್ಕೆ ಹಿಂದಿರುಗುತ್ತೇನೆ" ಎಂದು ತಿಳಿಸಿದರು. ಆದರೆ ಹಾಗೆ ಹಿಂದಿರುಗುವುದಕ್ಕೆ ಬಹಳ ಮೊದಲೇ ಅವರು ಹೃದಯಾಘಾತದಿಂದ ನೆಲಕ್ಕೆ ಕುಸಿದಿದ್ದರು. ಅನಂತರ ಅವರೆಂದೂ ಮನೆಗೆ ಹಿಂದಿರುಗಲಿಲ್ಲ.

ನನ್ನ ಅನುಭವಗಳು ನನಗೆ ಅನನ್ಯ ಭಾವವನ್ನು ನೀಡಿವೆ. ನಮ್ಮಲ್ಲಿ ಬಹಳ ಜನ ಒಂಟಿಯಾದ ವಿಧುರರು ಮತ್ತು ವಿಧವೆಯರು ಇದ್ದಾರೆ ಅಥವಾ ಪ್ರೀತಿಸಲ್ಪಟ್ಟವರ ಸಾವು ಅವರನ್ನು ಏಕಾಂತವ ಸಾಮ್ರಾಜ್ಯಕ್ಕೆ ತಳ್ಳಿದ್ದೂ ಉಂಟು. ಜನರು ಉಳಿದ ಜನಸಮುದಾಯದೊಂದಿಗೆ ತಮ್ಮ ಕೊಂಡಿ ಕಳಚಿಕೊಳ್ಳಲು ಅನೇಕ ಕಾರಣಗಳಿವೆ. ಕೆಲವೊಂದು ಸ್ಥಳಗಳಲ್ಲಿ ಇಂಥವರ ಸಂಖ್ಯೆ

ನವೆಂಬರ್ ೧೯೮೩ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಆರ್ಡಿಸ್ ವಿಟ್‌ಮನ್ನಳ ಲೇಖನ "ಸೀಕ್ರೇಟ್ ಬಾಯ್ಸ್ ಆಫ್ ಸೊಲಿಟ್ಯೂಡ್"ದ ಭಾಷಾಂತರ ಲೇಖನ.

ಏರುತ್ತಿದೆ. ನಾವು ಬಹಳ ಕಾಲ ಬದುಕಿದ್ದರೆ ನಮ್ಮ ಬದುಕಿನ ಅನೇಕ ಸಂದರ್ಭಗಳಲ್ಲಿ ನಾವು ಒಂಟಿಯಾಗುವ ಪರಿಸ್ಥಿತಿ ಪ್ರಾಪ್ತವಾಗುವುದನ್ನು ಕಾಣಬಹುದು. ನಾವು ಏಕಾಂತತೆಯಲ್ಲಿರುವವರು ಕಾಲಕಾಲಕ್ಕೆ ಅದರಿಂದ ಧೈರ್ಯೋತ್ಸಾಹಗಳನ್ನು ಪಡೆಯುತ್ತೇವೆ. ನಾವು ಬದುಕಿನ ದಾರುಣ ಘಳಿಗೆಯಲ್ಲಿ ಛಿದ್ರಗೊಳ್ಳುತ್ತೇವೆ. ಆಗ, ನಾವೇನು ಮಾಡಬೇಕು?––ಯಾರೂ ನಮ್ಮನ್ನು ರಕ್ಷಿಸುವುದಿಲ್ಲ–ಎನ್ನುವುದು ವಿಪರೀತವಾಗಿ ನಮ್ಮನ್ನು ಕಾಡುತ್ತದೆ. ನಾವು ದಾಂಪತ್ಯ ಬದುಕಿಗೆ ಅಥವಾ ಕುಟುಂಬ ಜೀವನಕ್ಕೆ ಒಗ್ಗಿಕೊಂಡಿದ್ದೇವೆ. ಅದಕ್ಕೆ ಕಾರಣ ಪರಸ್ಪರ ಸುಖ-ಸಂತೋಷಗಳನ್ನು ಹಂಚಿಕೊಳ್ಳುವುದೇ ಆಗಿದೆ.

ಉದ್ದೀಪನಕ್ಕೊಳಗಾದ ತಿಳುವಳಿಕೆ: ಸಂತೋಷ-ತೃಪ್ತಿಯನ್ನು ಪಡೆಯಬಹುದಾದ ಜೀವನದ ಅನೇಕ ಮಾರ್ಗಗಳಲ್ಲಿ ಏಕಾಂತತೆಯೂ ಒಂದು. ಇದು ನಮಗೆ ಉತ್ಸಾಹ ಮತ್ತು ಖುಷಿಯ ಅನುಭವಗಳನ್ನು ನೀಡಬಲ್ಲದು. ಆದರೆ ಬಹುತೇಕವಾದ ನಮಗೆ ಏಕಾಂತತೆ ಪ್ರಾಪ್ತವಾಗುವುದು. ನಾವು ಅದಕ್ಕೆ ಸಿದ್ಧವಾಗಿರದ ಸಂದರ್ಭಗಳಲ್ಲಿಯೇ ಸರಿ. ಏಕಾಂತತೆ ನಾವು ಹೇಗೆ ಸಂತೋಷವನ್ನು ಕಂಡುಕೊಳ್ಳಬಹುದು ಎಂಬುದನ್ನು ಕಲಿಸುತ್ತದೆ. ಆದ್ದರಿಂದ ನಾವು ಗೌರವ ಹಾಗೂ ರಮ್ಯತೆಯಿಂದಲೂ ಒಂಟಿಯಾಗಿ ಬದುಕಬಹುದು.

ನಾವು ಗತಿಸಿದ ವರ್ಷಗಳನ್ನು ನೆನಪಿಸಿಕೊಂಡಾಗ, ಈ ಏಕಾಂತತೆಯು ನೀಡಿದ ಸಿಹಿ ಅನುಭವಗಳು ಹರಳುಗಟ್ಟುತ್ತವೆ. ಅದು ಹೇಗೆಂದರೆ ಸೂರ್ಯನ ಬೆಳಕಿನ ಅನಂತರ ಮಳೆ ಇದ್ದಂತೆ. ಅದು ಸತ್ವವಿಲ್ಲದ್ದಾದರೂ ಬೆಚ್ಚಗಿನ ವಾತಾವರಣ ನಿರ್ಮಿಸಬಲ್ಲದ್ದು. ಆದರೆ ಏಕಾಂತತೆಗೆ ಮನಸ್ಸು ಸಿದ್ಧವಾಗದಿದ್ದಾಗ ಮಾತ್ರ ಅದರಿಂದ ದೊರಕುವುದು ದುಃಖ ಮಾತ್ರ.

ಎಲ್ಲಿಂದ ಈ ಉತ್ಸಾಹ ಉದ್ಭವಿಸಿತು?

ಮೊದಲನೆಯದಾಗಿ ಅದು ನೆನಪುಗಳಿಂದ. ಈ ನೆನಪು ಬದುಕಿನ ದಿನಗಳನ್ನು ಪರಸ್ಪರ ತಳಿಕೆಹಾಕಬಲ್ಲದಾಗಿದೆ.

ಏಕಾಂತತೆ ನಮ್ಮ ನೆನಪಿನ ಶಕ್ತಿಯನ್ನು ಉದ್ದೀಪನಗೊಳಿಸುತ್ತದೆ. ಕುತೂಹಲವೆಂದರೆ ಹೀಗೆ ಉದ್ದೀಪನಗೊಂಡ ನೆನಪಿನಿಂದ ಹೊಸ ಬಗೆಯ ತಿಳಿವಳಿಕೆ ನಮ್ಮಲ್ಲಿ ಜನ್ಮತಾಳುತ್ತದೆ. ನಮ್ಮ ಬದುಕು ದುಃಖದಿಂದ ಆವೃತ್ತವಾಗುವ ವೇಳೆಯಲ್ಲೇ ಅದು ಬದುಕನ್ನೇ, ಅದು ಮುಂದುವರಿಯುವುದಕ್ಕೆ ಗಟ್ಟಿತನವನ್ನು ನೀಡುತ್ತದೆ.

ನಮ್ಮ ನೆನಪುಗಳಿಂದ ಹೇಳುವುದಾದರೆ, ಏಕಾಂತತೆ ನಮಗೆ ಉತ್ಸಾಹ

ನೀಡುವುದರ ಜೊತೆಗಾಗಿ ಇದು ನಮ್ಮ ಇಂದ್ರಿಯಗಳಲ್ಲಿ ಸಂವೇದನಾಶಕ್ತಿಯನ್ನು ಹೆಚ್ಚಿಸುತ್ತದೆ. ಆ ಮೂಲಕ ನಮ್ಮ ಅಸ್ತಿತ್ವಕ್ಕೊಂದು ಅರ್ಥವನ್ನು ನೀಡುತ್ತದೆ.

ನಾನು ಕೆಲವು ವಾರಗಳ ಕಾಲ ಏಕಾಂತವಾಗಿದ್ದ ಅನಂತರ ನನಗನ್ನಿಸಿದ್ದೆನೆಂದರೆ, ನನ್ನಲ್ಲಿ ಅನೇಕ ಬಗೆಯ ಅಂತರ್ಗತ ಸಂಭಾಷಣೆಗಳು ಹುಟ್ಟಿಕೊಂಡಿವೆ. ಸಾಯಲು ಸಿದ್ಧವಾದ ಮತ್ತು ಬದುಕಲು ಹವಣಿಸುವ; ಅಸ್ತಿತ್ವದಲ್ಲಿ ನಂಬಿಕೆಯುಳ್ಳ ಮತ್ತು ನಂಬಿಕೆಯಿಂದ ದೂರವಾದ; ಒಂದು ಪ್ರೀತಿಗೊಳಗಾದದ್ದು ಮತ್ತು ಪ್ರೀತಿಯಿಲ್ಲದ್ದು ಹೀಗೆ ಪರಸ್ಪರ ವಿರುದ್ಧವಾದ ವಿಚಾರಗಳ ದ್ವಂದ್ವ ಕಾಳಗ ಮನದಲ್ಲಿ ನಡೆಯುತ್ತಿತ್ತು. ಇವೆಲ್ಲ ನನ್ನನ್ನು ತುಂಬ ಘಾಸಿಗೊಳಿಸಿದವು.

ನಮಗೆ ಸಮೂಹ ಜೀವಿಗಳಲ್ಲಿ ಪರಸ್ಪರ ಭಿನ್ನತೆಯಿರುವುದು ಗೊತ್ತು ತಾನೆ ಇಲ್ಲಿ ಅನುಕಂಪವುಳ್ಳ ಮತ್ತು ಕ್ರೂರತನವುಳ್ಳ, ಪ್ರಬುದ್ಧರಾದ ಮತ್ತು ಬಾಲಿಶರಾದ, ಬುದ್ಧಿವಂತರಾದ ಮತ್ತು ಜೊಳ್ಳಾದ, ಎಲ್ಲ ರೀತಿಯವರು ಯಾವಾಗಲೂ ಇದ್ದದ್ದು ತಿಳಿದಿದೆ ತಾನೆ? ನಮ್ಮ ನಮ್ಮಲ್ಲಿನ ಕ್ರೂರತನ ನಮ್ಮನ್ನೇ ಕಿತ್ತು ತಿನ್ನಲು ಪ್ರಯತ್ನಿಸುತ್ತಿದೆ—ಸರಿತಾನೆ.

ಈ ಎಲ್ಲ ಜಂಜಾಟದಲ್ಲಿ, ತುಮುಲಗಳಲ್ಲಿ ಕೂಡ ನಾನು ನನ್ನ ಭಾವನೆಗೆ ಮೀರಿ ಅವರ್ಣನೀಯವಾದ, ಅನಿರ್ವಚನೀಯವಾದ ಹಿಡಿತವನ್ನು ಪಡೆದಿದ್ದೆ ಜೊತೆಗೆ ನನ್ನನ್ನು ಕಂಗೆಡಿಸಿದ, ಅಸ್ಪಷ್ಟಗೊಳಿಸಿದ, ಅನೇಕ ಪ್ರಶ್ನೆಗಳಿಗೆ ಉತ್ತರಿಸುವ ಧಾಷ್ಟ್ಯ ಹೊಂದಿದ್ದೆ. ನಾನೇಕೆ ಈ ಕೆಲಸವನ್ನು ಮಾಡಬೇಕು ಅಥವಾ ಮಾಡಬಾರದು? ನನ್ನಲ್ಲಿ ಏನು ಕೇಳಲ್ಪಟ್ಟಿದೆ? ನಾನು ನನ್ನ ಬದುಕಿನೊಂದಿಗೆ ಮಾಡಬೇಕಾದ್ದೇನಿದೆ? ಎಂಬಿವೇ ಅಂಥ ಪ್ರಶ್ನೆಗಳು.

ನಾವು ಕೆಲವೊಂದು ರೀತಿಯ ಸೆಳೆತ ಮತ್ತು ಅಂತರ್ಗತ ದೃಷ್ಟಿ ಹೊಂದಿದ್ದರೆ ಆಗ ಮಗ್ಗುಲಲ್ಲೇ ಸುತ್ತುವರಿದ ಜನ ಸಮುದಾಯವನ್ನು ಹೊಂದಿದ್ದು ಅವರು ತಮ್ಮ ಸಣ್ಣ ಮಾತಿನ ಜರಡಿಯಲ್ಲಿ ನಮ್ಮನ್ನು ಹೊರದಬ್ಬುವ ಸಾಧ್ಯವಿದೆ. ಈ ಕುರಿತು ನಾವು ಒಂಟಿಯಾಗಿ, ನಮಗೊದಗಿದ ಪ್ರಶ್ನೆಗಳ ಬಗ್ಗೆ ಗಂಭೀರವಾಗಿ ಲಕ್ಷ್ಯಹಾಕುವ ಅಗತ್ಯ ಇದ್ದು ಅದಕ್ಕೆ ನಮ್ಮ ಅನುಭವ ಉತ್ತರವನ್ನು ನೀಡುತ್ತದೆ.

ಆಧ್ಯಾತ್ಮಿಕ ಬೆಳೆವಣಿಗೆ: ಏಕಾಂತತೆ ನಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುವ ಸ್ಥಾನವೂ ಹೌದು. ಅಲ್ಲಿ ನಾವು ಅಂಜಿಕೆಯಿಂದ ಮುಕ್ತರಾಗ

ವುದನ್ನು ಕಲಿಯುತ್ತೇವೆ. ನಾನು ಏಕಾಂತತೆಗೆ ಒಗ್ಗಿಕೊಳ್ಳುವುದಕ್ಕೆ ಪೂರ್ವದಲ್ಲಿ ಎಷ್ಟೊಂದು ರೀತಿಯಲ್ಲಿ ಹೆದರಿಕೆಗೊಳಗಾಗುತ್ತಿದ್ದೆ ? ಬಹಳ ದೂರ ಒಬ್ಬಳೇ ಹೋಗಬೇಕಾದಾಗ ಉಂಟಾಗುತ್ತಿದ್ದ ಭಯ; ಹೀಗೆ ಆ ಭಯಗಳನ್ನು ನಾನು ಇನ್ನೆಂದಿಗೂ ಪ್ರೀತಿಸಲು ಇಚ್ಛಿಸುವುದಿಲ್ಲ. ಏಕಾಂಗಿಯಾದ ಮನುಷ್ಯ ಪ್ರತಿ ದಿನವೂ ಸಹ ಮನುಷ್ಯನಾಗಿ ಬೆಳೆವ ದಿಕ್ಕಿನಲ್ಲಿ ಹೋರಾಟವನ್ನು ನಡೆಸುತ್ತಲೇ ಇರುತ್ತಾನೆಯಾದ್ದರಿಂದ ಯಾವಾಗಲೂ ಹೊಸತೊಂದನ್ನು ಕಂಡುಕೊಳ್ಳಬೇಕೆಂಬುದರ ಜೊತೆಗೆ ಸಂಬಂಧವನ್ನು ಹೊಂದಿರುತ್ತಾನೆ. ಇದರಿಂದ ತಕ್ಷಣ ಮತ್ತು ನೋವಿನಲ್ಲಿ ನೀವು ಯಾವ ಬಗೆಯ ವ್ಯಕ್ತಿ ಎಂಬುದನ್ನು ಕಂಡುಕೊಳ್ಳಲೂ ಸಾಧ್ಯ. ನಾವು ಯಾವೆಲ್ಲ ರೀತಿಯ ಜ್ಞಾನವನ್ನು ಒಳಗೊಂಡಿದ್ದೀರಿ ಎಂದು ತಿಳಿದುಕೊಳ್ಳಲೂ ಸಾಧ್ಯ. ಜರ್ಮನ್ ಕವಿ ರೈನರ್ ಮರಿಯಾ ರಿಲ್ಕರು ಒಮ್ಮೆ ಹೇಳಿದಂತೆ "ಏಕಾಂತತೆಯಲ್ಲಿ ನಮ್ಮನ್ನು ನೋಡಿಕೊಳ್ಳಲಾರದ್ದಕ್ಕೆ ಸ್ಥಳವೇ ಇಲ್ಲ." ಅದಕ್ಕೆ ಪ್ರಾಮಾಣಿಕತೆಯೊಂದೇ ಸಾಕು. ನಮ್ಮ ಆಧ್ಯಾತ್ಮಿಕ ಬೆಳವಣಿಗೆಯ ಸಂದರ್ಭದಲ್ಲಿ ಈಗ ಏನು ನಡೆಯುತ್ತಿದೆಯೋ ಅದೇ ಮನುಷ್ಯನು ಮಾಡಬಹುದಾದ ಕೊನೆಯ ಕೆಲಸ ಎಂದು ನಂಬಿಕೊಳ್ಳುತ್ತೀ ನಿಜ. ಏಕಾಂತತೆಯ ಸೋಗಿನಡಿಯಲ್ಲಿ ಅನೇಕ ನಾಸ್ತಿಕವಾದಿಗಳೂ ಇದ್ದಾರೆ. ಬಹಳ ಕಾಲ ಒಬ್ಬಂಟಿಗಳಾಗಿ ಉಳಿದಿರುವುದರಿಂದಲೇ ಅದನ್ನು ಪಡೆದಿದ್ದಾರೆ. ಅದಕ್ಕೆ ಹೊರತಾಗಿ, ಈ ಏಕಾಂತತೆಯಲ್ಲಿ ಏನೋ ಒಂದು ಅನುಭವವಿದೆ. ಅದು ನಮ್ಮತನ ಬೆಳವಣಿಗೆಯಲ್ಲಿ ಪ್ರಮುಖ ಕೆಲಸ ನಿರ್ವಹಿಸುತ್ತದೆ. ನಮ್ಮ ಏಕಾಂತತೆಯ ಕುರಿತಂತೆ ಅನೇಕ ಮುಖಗಳನ್ನು ಕ್ರೈಸ್ತೀಯ ಮಿತ್ರ ಸಂಘದ ಸಭಾಸದರು ಗುರುತಿಸಿದ್ದಾರೆ. ಅದರಲ್ಲಿ ಮುಖ್ಯವಾದವೆಂದರೆ "ದೈವತ್ವ ಎಲ್ಲರಲ್ಲೂ ಇದೆ."

ಇವೆಲ್ಲವಕ್ಕಿಂತ ಮಿಗಿಲಾಗಿ ಏಕಾಂತತೆ ಜನರಿಂದಲೇ ಪುಷ್ಟಿಗೊಂಡದ್ದು. ಮತ್ತು ನಮ್ಮ ನೂತನ ತಿಳಿವಳಿಕೆಯನ್ನು ಆಧರಿಸಿದ್ದು. ಅದು ಒಂದು ರೀತಿಯ ವಿರೋಧಾಭಾಸ ಎಂದು ನಾನು ತಿಳಿದಿದ್ದೇನೆ. ನೀವು ಬೇಕಿದ್ದರೆ ಕೇಳಬಹುದು, ಒಂಟಿತನ ಏಕಾಂತತೆಯ ಒಂದು ಗುಣವಲ್ಲವೇ ? ಅದು ಇನ್ನೊಬ್ಬರ ಜೊತೆಗಿನ ನಮ್ಮ ಸಂಬಂಧವನ್ನು ಕುಂಠಿತಗೊಳಿಸುವುದಿಲ್ಲವೇ ?

ಅದಕ್ಕೆ ಪರ್ಯಾಯವಾಗಿ ಏಕಾಂಗಿತ್ವವೆನ್ನುವುದು ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸುವಂತಹದ್ದು. ಅದಕ್ಕೆ ಸುಸ್ಪಷ್ಟವಾದ ಕಾರಣವೆಂದರೆ ಅದು ಕೇವಲ ಅವನ ಅವಶ್ಯಕತೆ. 'ಒಂಟಿತನ', ಸ್ವೀಡನ್ನಿನ ಮನಶಾಸ್ತ್ರಜ್ಞ

ಕಾರ್ಲ್‌ಜಂಗ್ ಬರೆದಿದ್ದಾನೆ "ಇದು ಸಂಗಾತಿತನಕ್ಕೆ ವಿರುದ್ಧವಾದದ್ದಾಗೇನೂ ಇರಬೇಕಾದ್ದಿಲ್ಲ. ಯಾವೊಬ್ಬನೂ ಒಂಟಿಯಾಗಿದ್ದವನಿಗಿಂತ ಹೆಚ್ಚಿನದಾಗಿ ಸಂಗಾತಿತನಕ್ಕೆ ಸ್ಪಂದಿಸುವುದಿಲ್ಲ."

ನಾವು ಜೊತೆಯಾಗಿದ್ದೇವೆ. ಕಾರಣ ಅದನ್ನು ತೆರೆಯಬೇಕಾಗಿದೆ. ಕೇವಲ ಒಂದೇ ಬಗೆಯ ಪ್ರೀತಿಯಿಂದ ಹೃದಯ ಪೂರ್ವಾಗ್ರಹಪೀಡಿತವಾಗಿರಬೇಕಾದ್ದಿಲ್ಲ. ನಾವು ಅಪರಿಚಿತರನ್ನೂ ಭೇಟಿಯಾಗಲು ಸ್ವಾತಂತ್ರ್ಯ ಹೊಂದಿದ್ದೇವಷ್ಟೆ ಅಲ್ಲದೆ ಅದರೊಂದಿಗೆ ಆಳವಾಗಿ (ಗಾಢವಾಗಿ) ಮಾತುಕತೆ ನಡೆಸಲೂ ಸ್ವತಂತ್ರರಾಗಿದ್ದೇವೆ.

ಭಾವುಕ ಅನುಭವ :

ಬೇರೆಯವರ ದುಃಖ ನಿಮ್ಮ ಏಕಾಂತತೆಗೆ ಪ್ರವೇಶಿಸಿದ ಹಾಗೆ ಕೆಲವೊಮ್ಮೆ ನಿಮಗೆ ಅನ್ನಿಸಬಹುದು. ಆದರೆ ಅವುಗಳ ಶಿಲ್ಪ ರೂಪುಗೊಂಡದ್ದು ನಿಮ್ಮೊಳಗಿನ ದ್ವಂದ್ವಗಳಿಂದ ಮಾತ್ರ.

ಹಾಗೆಯೇ, ನಾವು ಬೇರೆಯವರೊಟ್ಟಿಗೆ ಕಡಿಮೆ ವೇಳೆಯನ್ನು ಕಳೆದಾಗ್ಯೂ ನಾವಲ್ಲಿ ಕಳೆದ ಕ್ಷಣಗಳು ನೂತನ ಮತ್ತು ವಿಶೇಷವಾದ ಗುಣ ಉಳ್ಳದ್ದಾಗಿರುತ್ತದೆ. ಹಿಂದಿನಕ್ಕೆ ಹೋಲಿಸಿದರೆ ಇಂದು ಬಹಳ ಸಲ ನಾನು ನನ್ನ ಗೆಳೆಯರೊಂದಿಗೆ ಗಾಢವಾಗಿ ಒಡನಾಟನಾಡಬಲ್ಲೆ. ಯಾಕೆಂದರೆ, ಬಹುಶಃ ನಾನೀಗ ಅವರೊಂದಿಗೆ ಹೆಚ್ಚು ಸ್ವತಂತ್ರವಾಗಿ ಮತ್ತು ಪ್ರಾಮಾಣಿಕವಾಗಿರಬಲ್ಲೆ. ಮನೋರೋಗ ಚಿಕಿತ್ಸಕರೊಬ್ಬರು ನನಗೆ ಕೆಲವು ವರ್ಷಗಳ ಹಿಂದೆ ಹೇಳಿದ ಹಾಗೆ "ನೀವು ನಿಮ್ಮಲ್ಲೇ ಆಳಕ್ಕಿಳಿದ ಹಾಗೆ, ನೀವು (ಬೇರೆಯವರಿಗೆ) ಹೆಚ್ಚು ಹತ್ತಿರವಾಗಬಲ್ಲಿರಿ."

ಏಕಾಂತತೆಯೆನ್ನುವುದು ನಮ್ಮ ಪ್ರಬುದ್ಧಾವಸ್ಥೆಯ ಸಂದರ್ಭದಲ್ಲಿ. ತಪ್ಪಿಸಿಕೊಳ್ಳಲಾಗದ ಒಂದು ಸಾಹಸಕಾರ್ಯವೇ ಆಗಿದೆ. ಏಕಾಂತತೆಯನ್ನು ಸಮರ್ಥವಾಗಿ ಬಳಸಿಕೊಂಡಲ್ಲಿ ಅದು ದಿಕ್ಕೆಟ್ಟ ಬದುಕಿನ ಪ್ರವಾಹಕ್ಕೊಂದು ಮಾರ್ಗೋಪಾಯವಾಗಬಹುದು. ಇದು ನಿಮ್ಮ ಮುಂದಿನ ಬದುಕಿನ ಅನುಭವದ ಭಾಗವನ್ನು ಬೆಳಗಿಸುವ ಸಾಮರ್ಥ್ಯವುಳ್ಳದ್ದು. ಇದು ನಿಶ್ಚಲವಾಗಿರುವಂತಹದ್ದಲ್ಲ. ಬದುಕಿನ ಒಳ ಪದರಗಳ ಮೇಲೆ ಭಾವನೆಗಳ ಒತ್ತಡವನ್ನು ಹೆಚ್ಚಿಸುತ್ತದೆ. ನನ್ನ ಗುಮಾನಿಯ ಪ್ರಕಾರ, ಏಕಾಂತತೆ ನಮಗೆ ಲಭಿಸುವಷ್ಟೇ ಸಹಜವಾಗಿ ಅನಂತರ ದೂರವಾಗಲೂ ಬಲ್ಲದ್ದು. ನೀವು ಅದಕ್ಕೆ ಒಳಗಾಗಬಹುದಾದ್ದು

ಸಿಟ್ಟಿನ ಮೂಲಕ ಅಥವಾ ಸೌಮ್ಯದಿಂದ; ಕಾಠಿಣ್ಯದಿಂದ ಅಥವಾ ಅನುಕಂಪದಿಂದ; ಹೆಚ್ಚು ಕಡಿಮೆಯಾದ್ದರಿಂದ ಅಥವಾ ಹೆಚ್ಚಿನ ಪ್ರೀತಿಯಿಂದ; ಅಂಥರ್ಮುಖವಾದ್ದರಿಂದ ಅಥವಾ ಅತಿಯಾದ ಒಡನಾಟ (ಸಂಪರ್ಕ)ದಿಂದ; ಆದರೆ ಯಾವಾಗಲೂ ಒಂದರಿಂದಲೇ ಅಲ್ಲ.

ಮುಖ್ಯವಾದದ್ದನ್ನೂ ಕಲಿಯುವಾಗ ಪಡೆವ ಕಷ್ಟದಾಯಕ ಅನುಭವವನ್ನೇ ಏಕಾಂತತೆಯನ್ನು ಕಲಿಯುವಾಗಲೂ ನಾವು ಪಡೆಯಬೇಕಾಗುತ್ತದೆ. ಯಾವುದೇ ಬಗೆಯ ಕಠಿಣವಾಗಿದ್ದಾದರೂ ಅದು ನಮ್ಮ ಬದುಕಿಗೆ ಅಷ್ಟು ಸುಲಭವಾಗಿ ಒಗ್ಗಿಕೊಳ್ಳಲಾರದ್ದು, ನಾವು ತುಂಬ ಜಾಣ್ಮೆ ಮತ್ತು ಧೈರ್ಯದಿಂದ ಅದನ್ನು ಕಲಿಯಬೇಕಾಗುತ್ತದೆ.

ನಿಮ್ಮ ಬಗ್ಗೆ ನೀವು ಸದಾ ಪಶ್ಚಾತ್ತಾಪ ಪಡಬೇಡಿ. ಸ್ವ-ವಿಷಾದದಷ್ಟು ಶೀಘ್ರವಾಗಿ ನಮ್ಮನ್ನು ಬೇರೆಯವರಿಂದ ಬೇರ್ಪಡಿಸುವ ವಸ್ತು ಬೇರೊಂದಿಲ್ಲ. ಏಕಾಂಗಿಗಳಾಗಿ ಬದುಕುವ ನಾವೆಲ್ಲ ಎದುರಿಸಬೇಕಾದ ತೊಂದರೆ ಅಂದರೆ ನಮ್ಮ ಭಾವನೆಗಳೇ ನಮ್ಮ ಬದುಕಿನ ಮುಖ್ಯ ವಸ್ತುವಾಗಿರುವುದು. ನಾವು ಉಳಿದವರ ಜೊತೆ ಹೊಂದಿಕೊಳ್ಳುವುದಕ್ಕೆ ಬದಲಾಗಿ ಕೋಪಗೊಳ್ಳಬಹುದು; ನಾವು ಅದನ್ನು ಬಳಸುವ ವಿಧಾನದ ಕುರಿತಂತೆ ಉತ್ಪ್ರೇಕ್ಷೆ ಮಾಡಬಹುದು. ಆದರೆ ಅದು ವಾಸ್ತವಿಕವಾಗಿ ಬಳಸುವ ವಿಧಾನವನ್ನು ಅವಲಂಬಿಸಿದೆ ಮತ್ತು ಪ್ರಸ್ತುತ ನಮ್ಮ ಬದುಕಿಗೊಂದು ಎಚ್ಚರಿಕೆಯಾಗಬಲ್ಲಂತಹದ್ದು.

ಇದನ್ನು ನಿಮ್ಮ ಪರಿಧಿಗೆ ಎಳೆದುಕೊಳ್ಳುವುದು ಸುಲಭವಲ್ಲವಾದಾಗ್ಯೂ ನೀವು ನಿಮ್ಮ ಬದುಕನ್ನು ಮತ್ತು ಸುತ್ತಲಿನವರನ್ನು ಗಾಢವಾಗಿ ಪ್ರೀತಿಸುವುದಕ್ಕೋಸ್ಕರವಾದರೂ (ಏಕಾಂತತೆಯನ್ನು) ಸಾಧಿಸಬೇಕು. ನೀವು ಈಗ ತೋರುವ ಪ್ರೀತಿಯೇ ಯಾವಾಗಲೂ ಉಳಿದಿರುತ್ತದೆ ಎಂದು ಭಾವಿಸಲು ಸಾಧ್ಯವಿಲ್ಲ ಎನ್ನುವುದು ತಿಳಿದಿರಲಿ, ಸ್ಥಿತಿಸ್ಥಾಪಕತ್ವವುಳ್ಳ ಮನುಷ್ಯ ಚೇತನವನ್ನು ಮಾತ್ರ ಉತ್ಪ್ರೇಕ್ಷಿಸಲು ಸಾಧ್ಯವಿಲ್ಲ.

ಏಕಾಂತತೆಯಲ್ಲಿ ಸಂತೋಷವನ್ನು ಸಂಶೋಧಿಸಿರಿ. ನಾನು ಒಂಟಿಯಾದ ಅನೇಕರು ಹೇಳುವುದನ್ನು ಕೇಳಿದ್ದೇನೆ—"ಯಾವೊಂದು ಒಳ್ಳೆಯ ಘಟನೆಯೂ ನನ್ನ ಬದುಕಿನಲ್ಲಿ ಘಟಿಸಿಲ್ಲ." ನೀವು ನಿಮ್ಮ ದಿನಚರಿ ಪುಸ್ತಕ ಹೊಂದಿದ್ದರೆ ಈ ರೀತಿ ಚಿಂತಿಸುವ ಪ್ರಮೇಯ ಇಲ್ಲ. ಪ್ರತಿದಿನ ನಾನು ನನ್ನ ಪುಸ್ತಕವಲ್ಲಿ ನನಗುಂಟಾದ ವಿಶೇಷ ಸಂತೋಷವನ್ನು ದಾಖಲಿಸುತ್ತೇನೆ. "ಇಂದು ನನ್ನ ಸ್ನೇಹಿತನೊಬ್ಬ ನಾನು ನಿರೀಕ್ಷಿಸದಿದ್ದ ಉಡುಗೊರೆಯನ್ನು ನಾನಿದ್ದಲ್ಲಿಗೇ

ತಂದುಕೊಟ್ಟೆ; ನಾನು ಇಂದು ಬಹಳ ದೂರ ಓಡಾಡಿ ಬಂದೆ; ಅದರಿಂದ ಉತ್ಸಾಹ ಪಡೆದೆ." ದಿನಚರಿಯ ಹಾಳೆಗಳನ್ನು ಹಿಂದಕ್ಕೆ ತಿರುವಿದಂತೆಲ್ಲ ನಾನು ಬೆಳೆಯುತ್ತಿರುವ ಲಕ್ಷಣಗಳನ್ನು ಗುರುತಿಸುತ್ತೇನೆ ಮತ್ತು ಈ ಬದುಕೆಷ್ಟು ಅದ್ಭುತವಾದದ್ದು ಮತ್ತು ನಿಗೂಢವಾದದ್ದು ಎಂಬುದು ಬೆಳಕಿಗೆ ಬರಲು ಪ್ರಾರಂಭಿಸುತ್ತದೆ.

ನೀವು ಬೆಳೆಯಲಿಕ್ಕೊಂದು ಸದವಕಾಶವೆಂದು ಏಕಾಂತತೆಯನ್ನು ಸ್ವೀಕರಿಸಿ. ದುಃಖತಪ್ತರಾದ ಅನೇಕ ಒಂಟಿ ಜನರಲ್ಲಿ ಇರುವ ತೊಂದರೆಯೆಂದರೆ, ಅವರು ತನ್ನ ಏಕಾಂತತೆಯಲ್ಲಿ ಮಹತ್ವವಾದದ್ದೇನನ್ನೂ ಗುರುತಿಸಿಕೊಳ್ಳುವುದೇ ಇಲ್ಲ. ನಮ್ಮ ಬದುಕು ಬದಲಾಗುವ ಗತಿಯುಳ್ಳ ಕಾಲದಂತಹದ್ದು ಅಥವಾ ಹಾಗಿರಬೇಕಾದದ್ದು. ಇದರ ಗತಿಯು ಒಳ ಹೊರಗು, ಬೆಳಕು-ಕತ್ತಲು; ಮಳೆ ಬಿಸಿಲಿನಂತೆಯೇ ಸರಿ ಏಕಾಂತತೆಯೆನ್ನುವುದು ಬಾಳಿನ ಮಧ್ಯಾಂತರ ವಿರಾಮ ವಲ್ಲ. ಬದಲಾಗಿ ಅದು ನಮ್ಮ ಬದುಕಿನ ನಿರಂತರತೆಯನ್ನು ಸುಸಂಬದ್ಧಗೊಳಿಸುವ ಕೊಂಡಿ. ಇದನ್ನು ರೂಢಿಸಿಕೊಂಡರೆ—ಬೆಳೆಯುವ ಅವಕಾಶ; ನಮ್ಮ ಬದುಕಿನ ಭೂತ ಕಾಲವನ್ನು ನೋಡುವ ಮತ್ತು ಭವಿಷ್ಯತ್ತನ್ನು ಸರಿಯಾದ ದಿಕ್ಕಿನಲ್ಲಿ ಹೊಸ ದೃಷ್ಟಿಯಿಂದ ನೋಡುವ ಕಾಲವಾಗಬಲ್ಲದು. ಏಕಾಂತತೆಯನ್ನು ಸ್ವೀಕರಿಸಿ ಇದನ್ನೂ ಶಾಶ್ವತ ಅಥವಾ ಕ್ಷಣಿಕ ಎಂದು ಪರಿಭಾವಿಸಬೇಡಿ. ಬದಲಾಗಿ ಇದು ಈ ಕ್ಷಣದ್ದು. ಬಹುಶಃ ನೀವು ನಿಮ್ಮ ಬದುಕಿನ ಕೊನೆಯ ಭಾಗವನ್ನು ಒಂಟಿಯಾಗಿ ಕಳೆಯಬೇಕಾಗಿ ಬರಬಹುದು—ನೀವು ಅದಕ್ಕೆ ಸಿದ್ಧರಾಗಿರಿ. ಆದರೆ ನೀವು ಏನನ್ನಾದರೂ ಬಯಸಿದರೆ—ಪುನರ್ವಿವಾಹ; ಹೊಸ ಬಗೆಯ ಕೆಲಸ; ಹೊಸ ಗೆಳೆಕಾರರು;—ನೀವು ಯೋಗ್ಯವಾದದ್ದಕ್ಕೆ ಮಾತ್ರ ನಿಮ್ಮ ಬಯಕೆಯನ್ನು ರೂಪಾಂತರಗೊಳಿಸಿ.

ನಿಮ್ಮ ಬದುಕನ್ನು ಭದ್ರಪಡಿಸಿಕೊಳ್ಳಿ—ಎಲ್ಲವನ್ನೂ ತಿಳಿವಳಿಕೆಯ ಪರಿಧಿಯ ಹೆಚ್ಚಳಕ್ಕೆ ಬಳಸಿ. ಇದು ಏಕಾಂತತೆಯ ವಿಶೇಷ ವರ್ಚಸ್ಸು. ಬದುಕುವ ಶಕ್ತಿ ಅಂತರಂಗದಿಂದ ಬರುವಂತಹದ್ದು. ಅದ್ದರಿಂದ ಅತ್ತ ಲಕ್ಷ್ಯ ಹರಿಸಿ. ಪ್ರಾರ್ಥಿಸಿ: ಧ್ಯಾನಿಸಿ. ನಿಮ್ಮಲ್ಲಡಗಿರುವ ತೇಜೋಮಂಡಲವನ್ನು ಕಂಡುಕೊಳ್ಳಿ. ಎಲ್ಲಿ ನೀವು ನಿಮ್ಮ ಬದುಕಿನ ಬಹುಕಾಲದಿಂದಲೂ ಅಪರಿಚಿತರಾಗಿ. ಉಳಿದಿದ್ದೀರೋ ಅತ್ತ ಲಕ್ಷ್ಯ ಹರಿಸಿ. ನಿಮ್ಮನ್ನು ನೀವು ಪ್ರೀತಿಸಿ. ಗೌರವಿಸಿ ಮತ್ತು ಆ ಮೂಲಕ ಸಂತೋಷಿಸಿ. ಅದು ನಿಮ್ಮ ಒಂಟಿತನಕ್ಕೆ ಸಹಾಯ ನೀಡದಿದ್ದರೂ ಸಹ ಅಪರಾಧಗಳಿಂದ ನಿಮ್ಮನ್ನು ನೀವು ದಂಡಿಸಿಕೊಳ್ಳಬೇಡಿ. ವಿಶ್ರಾಂತಿಯನ್ನು

ಪಡೆಯಿರಿ; ಚೆನ್ನಾಗಿ ಊಟ ಮಾಡಿ; ನಿದ್ದೆ ಮಾಡಿ; ನಿಮಗೆ ನೀವೇ ಬಹುಮಾನ ನೀಡಿಕೊಳ್ಳಿ. "ನಾನು ಗಾಯಗೊಂಡಿದ್ದೇನೆ. ಆದರೆ ಅದರಿಂದ ದೂರವಾಗಲು ಪ್ರಯತ್ನಿಸವೆ ಮತ್ತು ಸ್ವಾಸ್ಥ್ಯವಾಗುತ್ತೇನೆ" ಎಂದು ನಿಶ್ಚಯಿಸಿಕೊಳ್ಳಿ.

ಆಯ್ಕೆಯನ್ನು ನೀಡಿದರೆ, ಕೆಲವು ಜನರು ಏಕಾಂತತೆಯನ್ನೇ ಖಾಯಂ ಆಗಿ ಸ್ವೀಕರಿಸಬಹುದು. ಆದರೆ ನಾನು ಹಾಗೆ ಮಾಡುವುದಿಲ್ಲ. ಅದಕ್ಕೆ ಬದಲಾಗಿ ನಾನು ಅದನ್ನು ನನ್ನ ಬದುಕಿನ ಒಂದು ಭಾಗವನ್ನಾಗಿ ಮಾತ್ರ ಆಯ್ಕೆಮಾಡಿಕೊಳ್ಳುತ್ತೇನೆ. ಇದನ್ನು ಹೊರತುಪಡಿಸಿದಾಗ ಈ ಬದುಕು ಪರಿಪೂರ್ಣವಾಗುವುದಿಲ್ಲ. ಬ್ರಿಟೀಷ್ ನಾಟಕಕಾರ ಕ್ರಿಸ್ಟೋಫರ್ ಫ್ರೈ ಹೇಳುತ್ತಾನೆ. "ತನ್ನ ಸ್ವಂತ ಒಂಟಿತನದ ಬಗ್ಗೆ ಯಾವನು ಪ್ರಶ್ನಿಸಿಕೊಳ್ಳುವ ಸಾಹಸವನ್ನು ತೋರುವುದಿಲ್ಲವೋ ಅವನು ಸ್ವತಂತ್ರ ವ್ಯಕ್ತಿ ಅನ್ನಿಸಿಕೊಳ್ಳಲಾರ."

ನೆನಪಿರಲಿ. ನಾವು ಬಹಳಷ್ಟು ಜನರಿಂದ ತುಂಬಿದ ಮನೆಯಲ್ಲಿದ್ದರೂ ನಾವೆಲ್ಲ ಒಂಟಿಗಳು. ಪ್ರತಿಯೊಬ್ಬನೂ ಒಂಟಿಯಾಗಿ ಜನ್ಮ ಪಡೆದಿದ್ದಾನೆ. ತನ್ನ ಬದುಕಿನ ಅರ್ಥವನ್ನು ಒಂಟಿಯಾಗಿಯೇ ಕಂಡುಕೊಳ್ಳುತ್ತಾನೆ. ತನ್ನ ಗೋರಿಯನ್ನು ಒಬ್ಬಂಟಿಗನಾಗಿಯೇ ಹೋಗುತ್ತಾನೆ. "ಧೈರ್ಯದಿಂದ, ವಿನಯದಿಂದ ಮತ್ತು ಸುಂದರವಾಗಿ ನಮ್ಮ ಮಟ್ಟಿಗೆ ಬದುಕಲು ಕಲಿಯುವುದನ್ನು ಅರಿಯುವುದೇ ನಾವು ಮಾಡಬಹುದಾದ ಬಹು ದೊಡ್ಡ ಸಾಧನೆ."

ರವೀಂದ್ರ ಭಟ್ಟ ಕುಳಿಬೀಡು

ಬಹುಜನಕ್ಕೆ ಸುಖವನ್ನು ಕೊಡುವ ಕೆಲಸವೇ ಶ್ರೇಷ್ಠವಾದ ಕೆಲಸ.

—ಹಚಿಸನ್

ಪಾಪವನ್ನು ದ್ವೇಷಿಸಿ, ಪಾಪಿಯನ್ನು ಕರುಣೆಯಿಂದ ನೋಡಿ.

—ಸಿ. ಎಫ್. ಆಂಡ್ರ್ಯೂಸ್

ಮನುಷ್ಯ ಹೇಗೆ ಸಾಯುವನೆಂಬುದು ಮುಖ್ಯವಲ್ಲ, ಹೇಗೆ ಬದುಕುವನೆಂಬುದು ಮುಖ್ಯ.

—ಸಾಮ್ಯುಯೆಲ್ ಜಾನ್‌ಸನ್

ಎಷ್ಟೆಂದರೂ ಕ್ಷೌರಿಕ

ಆತ ಅಂಗಡಿ (ಸೆಲೂನ್) ಯೊಳಗೆ ಬರುವಾಗ ಏನೂ ಹೇಳಲಿಲ್ಲ.

ನಾನಾಗ ನನ್ನ ಅತ್ಯುತ್ತಮ ಕ್ಷೌರದ ಕತ್ತಿಯನ್ನು ಚರ್ಮದ ಪಟ್ಟಿಯ ಮೇಲೆ ಹರಿತಗೊಳಿಸುತ್ತಿದ್ದೆ. ಅವನನ್ನು ಕಾಣುತ್ತಲೇ ಗುರುತಿಸಿಬಿಟ್ಟೆ. ಮತ್ತೆ ಒಮ್ಮೆಲೇ ನಡುಗಿದೆ. ಆದರೆ ಆತನಿಗೆ ನನ್ನ ಗಾಬರಿ ತಿಳಿಯಲಿಲ್ಲ. ನಾನೀಗ ನನ್ನ ಆಂತರಿಕ ಉದ್ವೇಗವನ್ನು ಮರೆಯಿಸಲು ಕತ್ತಿಯನ್ನು ಇನ್ನಷ್ಟು ತೀವ್ರವಾಗಿ ಮಸೆಯತೊಡಗಿದೆ. ಬಳಿಕ ಅದರ ಧಾರೆಯನ್ನು ಪರೀಕ್ಷಿಸಿದೆ. ಅದಕ್ಕಾಗಿ ನನ್ನ ಹೆಬ್ಬೆರಳ ಮೇಲೆ ತಿಕ್ಕಿ ನೋಡಿದೆ. ಆ ವೇಳೆ ಆತ ತನ್ನ ಪಿಸ್ತೂಲು ಹಾಗೂ ಗುಂಡುಗಳ ಪೆಟ್ಟಿಗೆಯನ್ನು ಕಳಚಿ ಗೂಟಕ್ಕೆ ತೂಗುಹಾಕುತ್ತಿದ್ದ. ಅದರ ಮೇಲೆ ತನ್ನ ಸೈನಿಕ ಹ್ಯಾಟನ್ನೂ ಇಟ್ಟು, ಟೈ ಗಂಟನ್ನು ಸಡಲಿಸುತ್ತ—

"ಹಜಾಮತಿ ಮಾಡಿಸಬೇಕಾಗಿದೆ!"— ಎಂದ.

ಆತ ಕುರ್ಚಿಯ ಮೇಲೆ ಕುಳಿತ.

ಅವನ ಗಡ್ಡ ಕಳೆದ ನಾಲ್ಕು ದಿನಗಳಿಂದ ಕ್ಷೌರ ಕಂಡಿಲ್ಲ—ಎಂದು ಊಹಿಸಿದೆ ನಾನು. ಆ ಬಗ್ಗೆ ಪ್ರಶ್ನಿಸಿದೆ.

"ಕಳೆದ ನಾಲ್ಕು ದಿನಗಳು? ಈ ಅವಧಿಯಲ್ಲಿ ನಮ್ಮ ಸೇನೆಯನ್ನು ಹುಡುಕಲು ವಿದ್ರೋಹಿಗಳ ತಂಡವೊಂದು ಪ್ರಯತ್ನಿಸುತ್ತಿತ್ತು."

ಅವನ ಮುಖಾಕೃತಿ ಕೆಂಪಾಗಿತ್ತು. ಅದು ಬಿಸಿಲಿನಲ್ಲಿ ಸುಟ್ಟಂತೆ ತೋರುತ್ತಿತ್ತು. ನಾನು ಬೇಗಬೇಗನೆ ಸಾಬೂನಿನ ನೊರೆ ತಯಾರಿಸತೊಡಗಿದೆ. ನಾಲ್ಕಾರು ತುಂಡುಗಳನ್ನು ಕಪ್‌ಗೆ ಹಾಕಿ, ಬಿಸಿ ನೀರು ಹೊಯ್ದು ಮತ್ತು ಬ್ರಶ್ ಹಿಡಿದು ಅದರೊಳಗೆ ಚಲಾಯಿಸಿದೆ. ನೊರೆ ಬರಹತ್ತಿತು.

"ನಿಮ್ಮ ಸೇನೆಯ ಉಳಿದ ಸೈನಿಕರ ಗಡ್ಡವೂ ನಾಲ್ಕು ದಿನಗಳಿಂದ ಕ್ಷೌರ ಕಂಡಿಲ್ಲ, ಅಲ್ಲವೆ?"—ಎಂದೆ.

"ನಾವು ಎಷ್ಟೊಂದು ತೀವ್ರವಾಗಿ ಕಾರ್ಯಾಚರಣೆ ನಡೆಸಿದ್ದೇವೆಂದು ಗೊತ್ತೆ ನಿನಗೆ? ಎಲ್ಲ ವಿದ್ರೋಹಿಗಳನ್ನೂ ಸೆರೆಹಿಡಿದೆವು. ಕೆಲವರು ಈ ಹೋರಾಟದಲ್ಲಿ ಸತ್ತೇಹೋದರು. ಜೀವಂತ ಇದ್ದವರನ್ನು ಬಹುಬೇಗನೆ ಗುಂಡಿಕ್ಕಿ ಕೊಲ್ಲಲಾಗುವುದು."

'ಸವನೀತ' ಹಿಂದೀ ಮಾಸಪತ್ರಿಕೆಯ ಸೆಪ್ಟಂಬರ್ ೧೯೬೯ರ ಸಂಚಿಕೆಯಲ್ಲಿ ಅಚ್ಚಾದ **'ಹಸಲ್ ದೋತಲ್'** ರವರ 'ನಿರಾನಾಯಿಮಾ' ಎಂಬ ಸ್ಪೇನಿಶ್ ಕಥೆಯ ಅನುವಾದ.

“ನೀವು ಇದುತನಕ ಎಷ್ಟು ಜನರನ್ನು ಸೆರೆ ಹಿಡಿದಿದ್ದೀರಿ ?”

“ಒಟ್ಟು ೧೪ ಮಂದಿ. ಅವರಿಗಾಗಿ ನಾವು ಬಹುದೂರದವರೆಗೆ ಕಾಡುಗಳಲ್ಲಿ ಅಲೆಯಬೇಕಾಯಿತು. ಉಳಿದವರನ್ನೂ ಇದೇ ರೀತಿ ಹಿಡಿದು ಶಿಕ್ಷಿಸುವೆವು. ನಮ್ಮಿಂದ ಯಾರೊಬ್ಬನೂ ತಪ್ಪಿಸಿಕೊಳ್ಳಲಾರ.”

ನನ್ನ ಕೈಯಲ್ಲಿ ನೊರೆ ತುಂಬಿದ ಬ್ರಶ್ ನೋಡಿ ಆತ ಹಿಂದಕ್ಕೆ ಬಾಗಿದ. ಇದುವರೆಗೂ ನಾನು ಬಿಳಿಬಟ್ಟೆಯನ್ನು ಅವನ ಕೊರಳಿಗೆ ಹಾಕಿರಲಿಲ್ಲ. ನಾನು ಆ ವೇಳೆ ತುಂಬ ಗಾಬರಿಯಾಗಿದ್ದೆ. ಮೇಜಿನ ‘ಅರೆ’ ಯಿಂದ ಬಿಳಿ ಬಟ್ಟೆ ಹೊರ ತೆಗೆದು, ತುಂಬ ಆತ್ಮವಿಶ್ವಾಸದಿಂದ ಅವನ ಎದೆಯ ಮೇಲೆ ಹಾಸಿದೆ. ಮತ್ತೆ ಅವನ ಹಿಂದೆ ಹೋಗಿ ಬಟ್ಟೆಯ ತುದಿಗಳನ್ನು ಕಟ್ಟತೊಡಗಿದೆ. ಅವನು ಒಂದೇ ಸಮನೆ ಮಾತಾಡುತ್ತಿದ್ದ. ನಾನು ಅವನ ಸೈನ್ಯದ ಶುಭಚಿಂತಕನೆಂದು ಆತ ಭ್ರಮಿಸಿರಬೇಕು.

“ನಾವು ಇತ್ತೀಚೆಗೆ ನಡೆಸಿದ ಕಾರ್ಯಾಚರಣೆಯಿಂದಾಗಿ ನಗರವು ಒಳ್ಳೆ ಪಾಠ ಕಲಿತಿರಬೇಕು, ಅಲ್ಲವೆ ?”

“ಹೌದು....ಅವನ ಕೊರಳ ಹಿಂಭಾಗದಲ್ಲಿ ಬಟ್ಟೆಯ ತುದಿಗಳನ್ನು ಕಟ್ಟಿ ನುಡಿದೆ.”

ಬಹುಶಃ ಅತ್ಯಧಿಕ ದಣಿವಿನಿಂದಾಗಿ ಆತ ಕಣ್ಣು ಮುಚ್ಚಿಕೊಂಡ; ಮತ್ತು ಮೃದು ಸಾಬೂನಿನ ಸುಖಕರ ಸ್ಪರ್ಶಕ್ಕಾಗಿ ಕಾದುಕುಳಿತ. ನಾನು ಅವನನ್ನು ಇಷ್ಟು ಹತ್ತಿರದಿಂದ ಎಂದೂ ಕಂಡಿರಲಿಲ್ಲ. ಎಲ್ಲ ನಗರನಿವಾಸಿಗಳೂ ಶಾಲೆಯ ವಠಾರದಲ್ಲಿ ನೆರೆದು ನಾಲ್ವರು ವಿದ್ರೋಹಿಗಳಿಗೆ ಕೊಡುವ ಗಲ್ಲಿನ ಮನೋರಂಜಕ ಶಿಕ್ಷೆಯನ್ನು ನೋಡಿ ಆನಂದಪಡಲಿ—ಎಂದು ಆತ ಇಡೀ ನಗರದಲ್ಲೇ ಆಜ್ಞೆ ಹೊರಡಿಸಿದಾಗ, ನಾನು ಕ್ಷಣಕಾಲ ಅವನನ್ನು ಕಂಡಿದ್ದೆ. ಆದರೆ ಅಂದು ತೂಗಾಡುವ ಹೆಣಗಳ ಭಯಂಕರ ದೃಶ್ಯವೇ ನನ್ನ ಮನದಲ್ಲಿ ತುಂಬಿ ಹೋಗಿದುದರಿಂದ ಈ ವ್ಯಕ್ತಿಯ ಮುಖಭಾವ ಅರಿಯುವ ಅವಕಾಶವೇ ನನಗೊದಗಲಿಲ್ಲ. ಗಲ್ಲಿನ ಆಜ್ಞೆಯನ್ನು ಇವನೇ ನೀಡಿದ್ದ.

ಈಗ ಅದೇ ಮುಖವನ್ನು ಕೈಯಿಂದ ಮುಟ್ಟುತ್ತಲಿದ್ದೆ. ವಾಸ್ತವವಾಗಿ ಈ ಮುಖ ಕ್ರೂರವಾಗಲೀ ಅನಾಕರ್ಷಕವಾಗಲೀ ಇರಲಿಲ್ಲ....ಬೆಳೆದ ಗಡ್ಡದಿಂದ ಅವನ ವಯಸ್ಸು ಒಂದಿಷ್ಟು ಹೆಚ್ಚಾಗಿ ತೋರುತ್ತಿದ್ದರೂ ಮುಖ ವಿಕಾರಗೊಂಡಿರಲಿಲ್ಲ. ಅವನ ಹೆಸರು ತೋರಸ್‌ಕಪ್ತಾನ್ ತೋರಸ್ !

ಅವನು ಕಠೋರ ಹೃದಯದ ವ್ಯಕ್ತಿ. ಇಲ್ಲದಿದ್ದರೆ ಮೊದಲು ವಿದ್ರೋಹಿಗಳ

ಕೊರಳಿಗೆ ನೇಣುರುಳು ಬಿಗಿದು, ಅವರ ನಿರ್ಜೀವ ದೇಹಕ್ಕೆ ಮತ್ತೆ ಗುಂಡಿಕ್ಕಿ ತೂತು ಮಾಡುತ್ತಿದ್ದನೆ! ಎಂಥ ಎಂಟೆದೆ ಅವನದು! ನಾನು ಸಾಬೂನಿನ ನೊರೆಯಲ್ಲಿ ಬ್ರಶ್ ಅದ್ದಿ ಅವನ ಮೋರೆಯ ಮೇಲೆ ಸವರತೊಡಗಿದಾಗ, ಆತ ಕಣ್ಣು ಮುಚ್ಚಿಕೊಂಡೇ...."ನಾನೀಗ ಆರಾಮವಾಗಿ ಗಾಢನಿದ್ರೆ ಮಾಡಬಲ್ಲೆ.... ಆದರೆ ನನಗಿಂದು ಮಧ್ಯಾಹ್ನ ಬಹಳಷ್ಟು ಕೆಲಸಗಳಿವೆ"—ಎಂದ.

ನಾನು ಗಡ್ಡಕ್ಕೆ ಸಾಬೂನು ಸವರುವುದನ್ನು ನಿಲ್ಲಿಸಿ, ಭಯಮಿಶ್ರಿತ ಉತ್ಸುಕತೆಯಿಂದ—'ಇಂದು ಮತ್ತೆ ಫಯರಿಂಗ್ ನಡೆಯುವುದೆ?' ಎಂದೆ.

"ಹೌದು....ಆದರೆ ಕಳೆದ ಸಲದಷ್ಟು ಜೋರಾಗಿ ಅಲ್ಲ."

ನಾನು ಪುನಃ ಅವನ ಗಡ್ಡಕ್ಕೆ ಬ್ರಶ್ ಸವರತೊಡಗಿದೆ. ನನ್ನ ಕೈ ಮತ್ತೊಮ್ಮೆ ನಡುಗಿತು. ಅದು ನನ್ನ ಆಂತರಿಕ ಉದ್ವೇಗದ ಪರಿಣಾಮ. ಆದರೆ ಸುದೈವದಿಂದ ಆತ ನನ್ನ ಕೈಗಳ ಕಂಪನವನ್ನರಿತಿರಲಿಲ್ಲ. ನಿಜಕ್ಕೂ ಇದು ನನ್ನ ಸೌಭಾಗ್ಯವಲ್ಲವೆ? ನನ್ನ ಸೆಲೂನ್‌ಗೆ ಆತ ಬರದಿರುತ್ತಿರುತ್ತಿದ್ದರೆ ಇನ್ನಷ್ಟು ಚೆನ್ನಾಗಿರುತ್ತಿತ್ತು. ಆತ ನನ್ನಲ್ಲಿಗೆ ಬಂದುದನ್ನು ನನ್ನ ಸಂಗಾತಿಗಳು ನೋಡಿದ್ದರು. ನಾನು ವಿದ್ರೋಹಿಗಳ ಹಿತಚಿಂತಕನೆಂಬುದನ್ನು ಈತ ಅರಿಯ. ಆದರೆ ಮನೆಗೆ ಬಂದ ಶತ್ರುವಿಗೂ ನಾನು ಕೆಡುಕು ಮಾಡುವಂತಿರಲಿಲ್ಲ. ಏಕೆಂದರೆ ವೃತ್ತಿಯ ಪವಿತ್ರತೆಯನ್ನು ನಾನು ಕಾಯ್ದುಕೊಳ್ಳಬೇಕಿತ್ತು. ನಾನೀಗ ಈ 'ವಿಶಿಷ್ಟ' ಗಡ್ಡವನ್ನೂ ಇತರ ಗಡ್ಡಗಳಂತೆಯೇ ಎಚ್ಚರಿಕೆಯಿಂದ ಬೋಳಿಸಬೇಕಿತ್ತು. ಅಲ್ಲದೆ, ರಕ್ತದ ಒಂದು ಹನಿ ಕೂಡ ಹೊರಹೊರಡದಂತೆ ಅತಿ ಹೆಚ್ಚು ಲಕ್ಷ್ಯ ವಹಿಸಬೇಕಿತ್ತು. ಗಡ್ಡ ಸ್ವಚ್ಛವೂ ಮೃದುವೂ ಪ್ರಭಾವಶಾಲಿಯೂ ಆದಾಗ ತುಂಬ ಎಚ್ಚರಿಕೆಯಿಂದ ಮುಖದ ಮೇಲೆ ಕೈಎಳೆದು ಒಂದೆ ಒಂದು ಕೂದಲೂ ಉಳಿದಿಲ್ಲವೆಂಬುದನ್ನು ಪರೀಕ್ಷಿಸಿ ಖಾತ್ರಿಪಡಿಸಿಕೊಳ್ಳಬೇಕು.

ನಾನೊಬ್ಬ ಗುಪ್ತ ವಿದ್ರೋಹಿ; ಜೊತೆಗೆ ಹೆಸರಾಂತ ಹಜಾಮನೂ ಹೌದು. ನನ್ನ ಉದ್ಯೋಗ ಹಾಗೂ ಕಲೆಯಲ್ಲಿ ನನಗಿರುವ ಅಸಾಧಾರಣ ಯೋಗ್ಯತೆಯ ಬಗ್ಗೆ ತುಂಬ ಅಭಿಮಾನ. ಆದ್ದರಿಂದ ನಾಲ್ಕುದಿನ ಬೆಳೆದ ಈ ಗಡ್ಡ ನನಗೊಂದ ಆಹ್ವಾನದಂತಿತ್ತು. ನಾನು ಕ್ಷೌರದ ಕತ್ತಿ ತೆರೆದು ಸರಿಯಾಗಿ ಹಿಡಿದುಕೊಂಡು ಒಂದು ಗಲ್ಲದ ಮೇಲೆ ಮೇಲಿಂದ ಕೆಳಗೆ ಚಲಾಯಿಸಿದೆ. ಕತ್ತಿ ತುಂಬ ಸುಲೀಸಾಗಿ ಚಲಿಸಿತು. ಅವನ ಕೂದಲುಗಳು ದೊಡ್ಡವಿರದಿದ್ದರೂ ದಟ್ಟ ಹಾಗು ಬಿರುಸಾಗಿದ್ದವು. ಮೆಲ್ಲಮೆಲ್ಲನೆ ಸ್ವಚ್ಛ ಚರ್ಮ ಕಾಣಿಸತೊಡಗಿತು. ಕತ್ತಿ ಸಾಗ

ತ್ತಲೇ ಇತ್ತು. ಕತ್ತಿ, ನೊರೆ ಹಾಗೂ ಕೂದಲುಗಳ ಸೇರ್ಪಡೆಯಿಂದ ಹೊರಡುವ ವಿಲಕ್ಷಣ ಶಬ್ದ ಕೇಳಿಸುತ್ತಿತ್ತು.

ನಾನು ಕತ್ತಿಯನ್ನು ಸ್ವಚ್ಛಗೊಳಿಸಲೆಂದು ಕ್ಷಣಕಾಲ ತಡೆದೆ. ಇನ್ನೊಮ್ಮೆ ಅದನ್ನು ಚರ್ಮದ ಪಟ್ಟಿಯ ಮೇಲೆ ಹರಿತಗೊಳಿಸತೊಡಗಿದೆ. ಎಷ್ಟೆಂದರೂ ನಾನು ಪ್ರಖ್ಯಾತ ಹಜಾಮ. ನನ್ನ ಕೆಲಸವನ್ನು ಬಲುಚೆನ್ನಾಗಿ ಮಾಡುವವನು. ಈಗ ಅವನೂ ಕಣ್ಣು ತೆರೆದ. ಬಟ್ಟೆಯೊಳಗಿಂದ ಕೈತೆಗೆದು ಕ್ಷೌರಮಾಡಿದ ಜಾಗ ವನ್ನು ಮುಟ್ಟಿನೋಡಿದ.

"ಇಂದು ಸಂಜೆ ಆರು ಗಂಟೆಗೆ ಪುನಃ ಆ ಶಾಲಾ ಮತಾರಕ್ಕೆ ಬಂದುಬಿಡು."

"ಅಂದರೆ ಮತ್ತೆ ಆ ಘಟನೆಯನ್ನು ಆವರ್ತಿಸಲಾಗುವುದೆ?"—ನಾನು ಭಯಭೀತನಾಗಿ ಪ್ರಶ್ನಿಸಿದೆ. "ಹೌದು"—ಅವನೆಂದ.

"ನೀವು ಅವರೊಡನೆ ಹೇಗೆ ನಡೆದುಕೊಳ್ಳುವಿರಿ.?"

"ಇದು ತನಕ ಯಾವ ನಿರ್ಧಾರವನ್ನೂ ಕೈಗೊಂಡಿಲ್ಲ. ಆದರೆ ಎಲ್ಲವೂ ತುಂಬ ಮನೋರಂಜಕವಾಗಿರುವುದು."

"ನೀವು ಅವರೆಲ್ಲರನ್ನೂ ಕೊಂದುಹಾಕುವಿರಾ?" "ಹೌದು ; ಎಲ್ಲರನ್ನೂ"

ನೊರೆ ಮೋರೆಯ ಮೇಲೆ ಮೆಲ್ಲಮೆಲನೆ ಒಣಗುತ್ತಿತ್ತು. ನಾನು ಕನ್ನಡಿಯ ಮೂಲಕ ಗಲ್ಲಿಯನ್ನು ನೋಡಿದೆ. ಹೊರಗೆ ಎಲ್ಲವೂ ಇತರ ದಿನಗಳಂತೆ ಇತ್ತು. ಕಿರಾಣಿ ಅಂಗಡಿಯಲ್ಲಿ ೨–೩ ಗಿರಾಕಿಗಳು ನಿಂತಿದ್ದರು. ಮತ್ತೆ ನಾನು ಗಡಿಯಾರ ನೋಡಿದೆ. ಮಧ್ಯಾಹ್ನ ೨–೨೦. ಕತ್ತಿ ಮೋರೆಯ ಕೆಳಭಾಗದಲ್ಲಿ ಚಲಿಸುತ್ತಿತ್ತು. ಈಗ ಅವನ ಇನ್ನೊಂದು ಕೆನ್ನೆ ನುಣ್ಣಗಾಗುತ್ತಿತ್ತು. ಆತ ಗಡ್ಡವನ್ನು ಪೂರ್ತಿಯಾಗಿ ಬೆಳೆಸುತ್ತಿದ್ದರೆ ಕವಿ ಇಲ್ಲವೆ ಪಾದ್ರಿಯಂತೆ ತುಂಬ ಸುಂದರನಾಗಿ ಕಾಣಿಸುತ್ತಿದ್ದ. ಎಷ್ಟೋ ಜನಕ್ಕೆ ಅವನ ಗುರುತು ಕೂಡ ಹತ್ತುತ್ತಿರಲಿಲ್ಲ. ಇದು ಅವನಿಗೂ ಕ್ಷೇಮಕರವೇ.

ನಾನು ಕೊರಳಿನ ಭಾಗವನ್ನು ಬೋಳಿಸುತ್ತಿದ್ದಾಗ, ನನಗೆ ಆ ವಿಚಾರ ಹೊಳೆಯಿತು. ಕೊರಳಿನ ಈ ಭಾಗದಲ್ಲಿ ಕತ್ತಿಯನ್ನು ತುಂಬ ಎಚ್ಚರಿಕೆ ಹಾಗೂ ಕುಶಲತೆಯಿಂದ ಚಲಾಯಿಸಬೇಕಿತ್ತು. ಇಲ್ಲಿ ಕೂದಲುಗಳು ಸಣ್ಣಸಣ್ಣ ಗಂಟು ಗಳಾಗಿ ಬೆಳೆದಿರುತ್ತವೆ. ಕತ್ತಿ ತುಸು ಹೆಚ್ಚುಕಡಿಮೆ ಆದರೆ ಗಾಯವಾಗುವ ಭಯವಿದೆ. ನನ್ನಂತಹ ಪ್ರಸಿದ್ಧ ಹಜಾಮ ಈ ರೀತಿಯ ತಪ್ಪನ್ನು ಖಂಡಿತ ಮಾಡಲಾರ. ವಿಶಿಷ್ಟ ಗಿರಾಕಿಗಳಿಗೆ ಮಾಡಿದರೆ ನನ್ನ ಪ್ರತಿಷ್ಠೆಗೆ ಭಂಗ ಬರದೆ? ಇವನಂತೂ ಪ್ರಥಮ ದರ್ಜೆಯ ಗಿರಾಕಿ. ಈತ ನಮ್ಮಲ್ಲೇ ಎಷ್ಟೋ ಜನರ

ಕೊಲೆಗೆ ಆಜ್ಞೆ ಹೊರಡಿಸಿದ್ದ. ಉಳಿದವರನ್ನೂ ಕೊಲೆಗೈಯಲು ಹಾತೊರೆಯುತ್ತಿದ್ದ.

ಈಗ ಈ ಬಗ್ಗೆ ಯೋಚಿಸುವುದೂ ವ್ಯರ್ಥ. ನಾನು ತನ್ನ ಶತ್ರುವೆಂಬುದನ್ನು ಕಪ್ತಾನ್ ತೋರಸ್ ಅರಿಯ. ಒಳಿತೇ ಆಯಿತು. ಅವನಾಗಲೀ ಅವನ ಸಂಗಾತಿಗಳಾಗಲೀ ನನ್ನ ಬಗ್ಗೆ ಅರಿಯದಿರುವುದೇ ಲೇಸು. ಈ ಗುಟ್ಟನ್ನು ಅರಿತವರು ಬಲು ಕಡಿಮೆ. ಕಪ್ತಾನ್ ತೋರಸ್ ಏನು ಮಾಡಲೆಳಸಿದ್ದಾನೆಂದೂ ಮುಂದಿನ ಯೋಜನೆ ಏನೆಂದೂ ನಾನು ಸುಲಭವಾಗಿ ನನ್ನ ಸಂಗಾತಿಗಳಿಗೆ ಸೂಚನೆ ಕಳುಹಿಸಬಲ್ಲೆ. ಆದರೆ ನನ್ನ ಕೈಗೆ ಸಹಜವಾಗಿ ಸಿಕ್ಕ ತೋರಸ್‌ನನ್ನು ನಾನು ಅದೇಕೆ ಜೀವಂತ ಬಿಟ್ಟುಕೊಟ್ಟೆನೆಂಬ ಪ್ರಶ್ನೆಗೆ ಸಮರ್ಪಕ ಉತ್ತರ ಮಾತ್ರ ನನ್ನ ಬಳಿ ಇರಲಿಲ್ಲ.

ಈಗ ಹಿಂದಿಗಿಂತಲೂ ಎಷ್ಟೋ ಕಡಿಮೆ ವಯಸ್ಸಿನವನಾಗಿ ತೋರುತ್ತಿದ್ದನಾತ. ಹಜಾಮರ ಬಳಿ ಹೋಗುವ ಎಲ್ಲರಲ್ಲೂ ಇಂಥ ಭಾವನೆ ಮೂಡುತ್ತದೆಂದು ನನ್ನೆಣಿಕೆ. ನನ್ನ ಕತ್ತಿಯ ಚಮತ್ಕಾರ ಕಪ್ತಾನ್ ತೋರಸ್‌ನ ಮೋರೆಯ ಮೇಲೆ ಹೊಸಕಳೆ ಮೂಡಿಸಿತ್ತು. ಎಷ್ಟೆಂದರೂ ನಾನು ಹೆಸರಾಂತ ಕ್ಷೌರಿಕನಲ್ಲವೆ ?

ಈಗ ಸೆಕೆ ಹೆಚ್ಚುತ್ತಿತ್ತು. ನನ್ನಂತೆಯೇ ತೋರಸ್‌ನಿಗೂ ಬೆವರು ಸುರಿಯುತ್ತಿರಬಹುದು. ಆದರೆ ಆತ ಭಯಭೀತನಾಗಿರಲಿಲ್ಲ. ತುಂಬ ಶಾಂತನಾಗಿದ್ದ.

ನನ್ನ ಸ್ಥಿತಿಯೋ ಬೇರೆ....ಕತ್ತಿ ನನ್ನ ಕೈಯಲ್ಲಿದೆ....ನಾನದನ್ನು ಚರ್ಮದ ಮೇಲೆ ಚಲಾಯಿಸಿ, ರಕ್ತ ಹೊರಟೀತೆಂದು ಭಯ ಪಡುತ್ತಿದ್ದೇನೆ. ನನ್ನ ವಿಚಾರಶಕ್ತಿಯೇ ಉಡುಗಿಹೋಗಿದೆ. ನನ್ನ ಅಂಗಡಿಗೆ ಬಂದ ಅವನಿಗೆ ಧಿಕ್ಕಾರ! ನಾನು ಕ್ರಾಂತಿಕಾರ....ಹಂತಕನಲ್ಲ....ಈ ವೇಳೆ ಅವನನ್ನು ಕೊಲೆಗೈಯುವುದು ಎಷ್ಟೊಂದು ಸುಲಭ! ಅವನ ತಪ್ಪಿಗೆ ತಕ್ಕ ಶಿಕ್ಷೆಯದು....

ಎಂಥ ಪೈಶಾಚಿಕ ಕೃತ್ಯವಿದು! ಇತರರನ್ನು ಕೊಲೆಗೈಯುವ ಅಧಿಕಾರ ಯಾರಿಗೂ ಇಲ್ಲ. ಇದರಿಂದ ಸಿಗುವ ಲಾಭವಾದರೂ ಏನು? ಒಬ್ಬನನ್ನು ಕೊಂದ ಬಳಿಕ ಇನ್ನೂ ಹಲವರನ್ನು ಕೊಲ್ಲುವ ಆಸೆ ಮನದಲ್ಲಿ ಮೂಡುತ್ತದೆ. ದಿನಗಳೆದಂತೆ ಈ ಸಂಖ್ಯೆ ಹೆಚ್ಚುತ್ತ ಹೋಗುತ್ತದೆ....ಎಲ್ಲೆಡೆಯಲ್ಲೂ ವೈರಿಗಳೇ ಕಣ್ಣಿಗೆ ಬೀಳುತ್ತಾರೆ....ಪರಿಣಾಮವಾಗಿ ನೆತ್ತರ ಹೊಳೆಯೇ ಹರಿಯತೊಡಗುತ್ತದೆ.

ನಾನು ಕ್ಷಣಮಾತ್ರದಲ್ಲಿ ಅವನ ಕೊರಳು ಕಡಿದುರುಳಿಸಬಲ್ಲೆ. ಬಾಕಿ

ಯಿಂದ ಶಬ್ದ ಹೊರಡುವ ಮೊದಲೇ ಆತ ಸತ್ತುಬೀಳುವ....ಸುದೈವದಿಂದ ಈ ವೇಳೆ ಕಣ್ಣು ಮುಚ್ಚಿ ಕುಳಿತಿದ್ದಾನೆ....ನನ್ನ ಕತ್ತಿಯ ಹೊಳಪು ಹಾಗೂ ನನ್ನ ಕಂಗಳ ಕಾಂತಿ—ಎರಡೂ ಅವನಿಗೆ ಕಾಣಿಸುತ್ತಿಲ್ಲ. ಆದರೆ ಈ ವಿಚಾರ ನಿರರ್ಥಕ....ನಾನೀಗ ಹಂತಕನಂತೆಯೇ ನಡುಗುತ್ತಿದ್ದೇನೆ. ಅವನ ಕೊರಳಿನಿಂದ ನೆತ್ತರ ಕಾರಂಜಿ ಪುಟಿದು ಬಟ್ಟೆ, ಕುರ್ಚಿ, ನೆಲ ಹಾಗೂ ನನ್ನ ಕೈತುಂಬ ಹರಡಿ ಕೊಳ್ಳುವುದು....ಮತ್ತೆ ರಕ್ತದ ಕಲೆಗಳನ್ನು ಅಳಿಸುವುದು ಕಷ್ಟಕರ....ರಕ್ತ ನೆಲದ ಮೇಲೆ ಹರಿಯುತ್ತ ಅಂಗಡಿಯ ಹೊರಹೊರಡುವುದು.

ಒಮ್ಮೆ ಜೋರಾಗಿ ಹೊಡೆದೆನೆಂದರೆ ಈತನ ಕೊರಳು ಕಡಿದುರುಳುವುದು.... ನೋವಿನ ಅರಿವು ಕೂಡ ಆಗಲಾರದು....ಆದರೆ ಇವನ ಹೆಣವನ್ನು ನಾನೇನು ಮಾಡಲಿ ? ಅದನ್ನೆಲ್ಲಿ ಅಡಗಿಸಿಡಲಿ ? ಆಗ ನಾನು ಎಲ್ಲವನ್ನೂ ಬಿಟ್ಟು ಬಹು ದೂರ ಓಡಬೇಕಾದೀತು. ಆದರೆ ಅವನ ಸಂಗಾತಿಗಳು ನನ್ನನ್ನು ಖಂಡಿತ ಹಿಂಬಾಲಿಸಿ ಬರುವರು....ಕಪ್ತಾನ್ ತೋರಸ್‌ನ ಹಂತಕನೆಂಬ ಅಪಖ್ಯಾತಿ ನನಗೆ ಶಾಶ್ವತವಾಗಿ ಅಂಟಿಕೊಳ್ಳುವುದು. ಕ್ಷೌರ ಮಾಡುವ ವೇಳೆ ಕೊಲೆ ಮಾಡಿ ದಂತಹ ಹೇಡಿಯಾತ....ವೃತ್ತಿಗೆ ಕಳಂಕ ಬರಿಸಿದ—ಎಂದೂ ಜನ ಹೇಳ ತೊಡಗುವರು.

ಆಗ ನನ್ನವರು ಏನು ಹೇಳುವರು ? ಸೇಡು ತೀರಿಸಿಕೊಂಡ ಮಹಾವ್ಯಕ್ತಿ ಯೆಂದು ಕ್ರಾಂತಿಕಾರಿಗಳು ಪ್ರಶಂಸಿಸುವರು. ನನ್ನ ಹೆಸರು ತುಂಬಾ ಪ್ರಸಿದ್ಧ ವಾಗುವುದು. ಸಾಮಾನ್ಯ ಕ್ಷೌರಿಕನಾದರೂ ಆದರ್ಶಗಳ ರಕ್ಷಣೆಗಾಗಿ ಈ ರೀತಿ ಮಾಡಿದ ವೀರ....ಎಂದೆಲ್ಲ ಹೇಳುವರು.

ಈಗ ನನ್ನ ಮನದಲ್ಲಿ ಹೊಸದೊಂದು ಸಂದೇಹ ಮೂಡುತ್ತದೆ—ನಾನು ಹಂತಕನೆ ? ವೀರನೆ ? ನನ್ನ ಭಾಗ್ಯವೀಗ ಕತ್ತಿಯ ಹರಿತ ಧಾರೆಯ ಮೇಲೆ ನಿಂತಿದೆ....ನಾನು ಕತ್ತಿಯನ್ನು ಹೆಚ್ಚು ಒತ್ತಿದೆನೆಂದರೆ ಅವನ ಕತೆ ಮುಗಿಯು ತ್ತದೆ. ಮನುಷ್ಯನ ಚರ್ಮದಷ್ಟು ಮೃದುವಾದ ವಸ್ತು ಬೇರೊಂದಿಲ್ಲ. ರಕ್ತ ಹೊರಬರಲು ಯಾವಾಗಲೂ ಸಿದ್ಧವಾಗಿರುತ್ತದೆ. ನನ್ನ ಕತ್ತಿ ನನ್ನಿಚ್ಛೆಗೆ ವಿರುದ್ಧವಾಗಿ ವರ್ತಿಸುವಂತೆಯೇ ಇಲ್ಲ....ಇದು ನನ್ನ ಅತಿ ನೆಚ್ಚಿನ ಕತ್ತಿ.

ಆದರೆ ನಾನು ಹಂತಕನೆನಿಸಬಯಸುವುದಿಲ್ಲ. ಸರ್ವಥಾ ಬಯಸಲಾರೆ. ಯಾರೇ ಕ್ಷೌರ ಮಾಡಿಸಲು ಬಂದರೂ ನನ್ನ ಕೆಲಸವನ್ನು ಪ್ರಾಮಾಣಿಕತೆ ಯಿಂದ ಮಾಡಬೇಕಾದುದು ನನ್ನ ಧರ್ಮ. ಕೈಗಳನ್ನು ರಕ್ತರಂಜಿತವಾಗಿ ಮಾಡಲಾರೆ. ನೊರೆ ಹೊರಡಿಸುವುದಷ್ಟೇ ನನ್ನ ಕೆಲಸ, ಪ್ರತಿಯೊಬ್ಬರಿಗೂ

ತಮ್ಮ ತಮ್ಮ ವೃತ್ತಿಯ ಬಗ್ಗೆ ಗೌರವವಿರಬೇಕು. ಅದಕ್ಕೆ ಕಳಂಕ ಹಚ್ಚ ಬಾರದು.

ಈಗ ಕೊರಳ ಭಾಗದ ಕ್ಷೌರವೂ ಮುಗಿಯಿತು. ಆತ ಎದ್ದು ಕುಳಿತ. ಕನ್ನಡಿಯಲ್ಲಿ ತನ್ನ ಮೋರೆ ನೋಡಿಕೊಂಡ. ಮತ್ತೆ ಮೋರೆಯ ಮೇಲೊಮ್ಮೆ ಕೈಯಾಡಿಸಿ ನುಣ್ಣಗಾಗಿದೆಯೆ ?—ಎಂದು ಪರೀಕ್ಷಿಸಿದ.

'ಧನ್ಯವಾದ'—ಎನ್ನುತ್ತ ಆತ ಗೂಟದತ್ತ ನಡೆದ. ಹ್ಯಾಟನ್ನೂ ಪಿಸ್ತೂಲು ಮತ್ತು ಗುಂಡುಗಳ ಪೆಟ್ಟಿಗೆಯನ್ನೂ ತೆಗೆದುಕೊಂಡ. ಇತ್ತ ನಾನು ಭಯದಿಂದ ಬಿಳಿಚಿಕೊಂಡಿದ್ದೆ. ನನ್ನ ಅಂಗಿ ಬೆವರಿನಿಂದ ಪೂರ್ತಿ ತೊಯ್ದುಹೋಗಿತ್ತು.

ಕಪ್ತಾನ್‌ತೋರಸ್ ಪಿಸ್ತೂಲು ಕಟ್ಟಿಕೊಂಡ. ಪ್ಯಾಂಟಿನ ಗುಂಡಿಗಳನ್ನು ಸರಿಪಡಿಸಿಕೊಂಡ. ತಲೆಗೂದಲುಗಳನ್ನು ನೇರಗೊಳಿಸಿ ಹ್ಯಾಟ್ ಧರಿಸಿದ. ಮತ್ತೆ ಹಣ ಕೊಡಲು ಪ್ಯಾಂಟಿನ ಕಿಸೆಗೆ ಕೈಹಾಕಿದ. ಕೆಲವು ಹೊಳಪು ನಾಣ್ಯಗಳನ್ನು ನನ್ನತ್ತ ಎಸೆದು ಬಾಗಿಲಿನತ್ತ ನಡೆದ. ಮತ್ತೆ ಸರಕ್ಕನೆ ನನ್ನತ್ತ ತಿರುಗಿ ಗಂಭೀರವಾಗಿ ಹೀಗೆಂದ :—

"ನೀನು ನನ್ನನ್ನು ಕೊಂದುಹಾಕುವಿಯೆಂದು ಜನ ನನಗೆ ಹೇಳಿದ್ದರು. ಅದನ್ನು ಪರೀಕ್ಷಿಸಲೆಂದೇ ನಾನು ಬಂದಿದ್ದೆ. ಕೊಲೆ ಮಾಡುವುದು ಸುಲಭವಲ್ಲ. ಅದೇನೂ ಆಟವಲ್ಲ—ಎಂಬುದು ನಿನಗೀಗ ಮನವರಿಕೆಯಾಗಿರಬಹುದು....

ಮರುಕ್ಷಣವೇ ಆತ ಗಲ್ಲಿಯತ್ತ ತಿರುಗಿಬಿಟ್ಟಿದ್ದ.

ಬಿ. ಸುಬ್ರಾಯ ಅಡಿಗ



ಆವ ಕುಲವಾದರೇನು ? ಆವ ಕೆಲಸವಾದರೇನು ಆತ್ಮಭಾವವರಿತ ಮೇಲೆ ?
—ಪುರಂದರದಾಸರು

ಮಹಿಳೆಯರು : ಖೊಮೇನಿಯ ಇರಾನಿನಲ್ಲಿಯ ಪ್ರಾಣಿಗಳು

"ಅಮೆರಿಕಾ ಸಾಯಲಿ! ಇರಾಕ್ ಸಾಯಲಿ! ಮುಜಾಹೆದೀನ್ ಗೆರಿಲ್ಲಾಗಳು ಸಾಯಲಿ! ಸಾಯಲಿ! ಸಾಯಲಿ! ಸಾಯಲಿ!"

ಕ್ರಾಂತಿಕಾರಿ ರಾಷ್ಟ್ರವಾದ ಇರಾನ್‌ನಲ್ಲಿ ಇಂದು ಮಹಿಳೆಯರಿಗೆ ಕಡ್ಡಾಯ ಸಮವಸ್ತ್ರವಾಗಿರುವ 'ಹೆದ್‌ಜಾಬ್'ಅನ್ನೇ ಆ ಚಿಕ್ಕ ಹುಡುಗಿಯೂ ತೊಟ್ಟಿದ್ದಳು. ಬಿಗಿಯಾಗಿ ಕಟ್ಟಿದ್ದ ಸ್ಕಾರ್ಫ್ ಅವಳ ಅಂದವಾದ ತಲೆಗೂದಲನ್ನು ಮುದ್ದುಮುಖದ ಬಹುಭಾಗವನ್ನೂ ಮರೆ ಮಾಡಿತ್ತು. ಬಾಲ್ಯಸಹಜವಾದ ಉತ್ಸಾಹದಿಂದ ಕೋಣೆಯಲ್ಲೆಲ್ಲ ಅವಳು ಜಿಗಿದಾಡುತ್ತಿದ್ದಳು. ಆದರೆ ಸಂತೋಷ ಎಂಬುದನ್ನು ಏಳು ವರ್ಷ ವಯಸ್ಸಿನ ಅವಳ ಮೆದುಳಿನಿಂದ ಹಿಂಡಿ ಕಿತ್ತೊಗೆಯಲಾಗಿತ್ತು. ಅವಳನ್ನು ಒಂದು ಬಗೆಯ ಬಾಲ-ಯಂತ್ರ ಮಾನವಳನ್ನಾಗಿ ಪುನರ್‌ರೂಪಿಸಲಾಗಿತ್ತು. ಇಂದು ಇರಾನಿನಲ್ಲಿ ಆಡಳಿತ ನಡೆಸುತ್ತಿರುವ ಧಾರ್ಮಿಕ ಮತಭ್ರಾಂತರ ವಿಕಾರಚಿತ್ತದ ಗೀಳಿನ ಮಾತುಗಳನ್ನಷ್ಟೇ ಅವಳು ಪುನರುಚ್ಚರಿಸುತ್ತಿದ್ದಳು.

ಗಾಬರಿ ನನ್ನಲ್ಲಿ ಮಡುಗಟ್ಟಿತು. "ನನ್ನ ಮಗಳನ್ನು ಇವರೇನು ಮಾಡುತ್ತಿದ್ದಾರೆ?"

೧೯೮೨ರ ವಸಂತಮಾಸ ಅದು. ಟೆಹರಾನಿನ ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಮಗಳು ಪಾರ್ವಿನಸ್ ಮಾತ್ರ ಇದ್ದೆವು. ಇರಾನ್ ವಾಯುಯಾನ ಸಂಸ್ಥೆಯಲ್ಲಿ ವಿಮಾನ ಚಾಲಕರಾಗಿರುವ ನನ್ನ ಪತಿ ಫೆರೇದೂನ್ ಅಂತರರಾಷ್ಟ್ರೀಯ ಯಾನಕ್ಕಾಗಿ ಟೆಹರಾನಿನಿಂದ ಹೊರಹೋಗಿದ್ದರು. ನಾವು ಇರಾನನ್ನು ಬಿಟ್ಟು ಹೊರಡಬೇಕೆಂದು ಅವರು ಕಳೆದ ಕೆಲವು ತಿಂಗಳುಗಳಿಂದಲೂ ನನ್ನೊಡನೆ ವಾದಿಸುತ್ತಲೇ ಇದ್ದರು. ಅವರ ಆಲೋಚನೆ ಸರಿಯಾಗಿತ್ತು ಎಂಬುದು ಭಯಂಕರವೆನಿಸುವಂಥ ಸ್ಪಷ್ಟತೆಯೊಂದಿಗೆ ಇದೀಗ ಮೊದಲ ಬಾರಿಗೆ ನನಗೆ ಮನವರಿಕೆಯಾಯಿತು.

ಅಯಾತೊಲ್ಲಾ ಖೊಮೇನಿಯವರ ಆಳ್ವಿಕೆಯಲ್ಲಿ ಇರಾನ್ ಇಂದು ಒಂದು

'ರೀಡರ್ಸ್ ಡೈಜೆಸ್ಟ್' ಪತ್ರಿಕೆಯ ಮಾರ್ಚ್ ೧೯೮೪ರ ಸಂಚಿಕೆಯಲ್ಲಿ ಪ್ರಕಟವಾಗಿರುವ "ವಿಮೆನ್: ಅನಿಮಲ್ಸ್ ಆಫ್ ಖೊಮೇನೀಸ್ ಇರಾನ್" ಎಂಬ ಖಾಂದಾನ್ ಆರ್ಯನ್ ಅವರ ಲೇಖನದ ಅನುವಾದ.

ವಿಚಿತ್ರ ದೇಶವಾಗಿ ಬಿಟ್ಟಿದೆ. ಪವಿತ್ರ ಖುರಾನ್ ಹಾಗೂ ಇಸ್ಲಾಮ್ ಧರ್ಮಕ್ಕೆ ಮುಲ್ಲಾಗಳು ನೀಡುತ್ತಿರುವ ವಿಕೃತ ವ್ಯಾಖ್ಯಾನಕ್ಕೆ ಅನುಗುಣವಾಗಿ, ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ವಿವರಗಳೊಂದಿಗೆ ಬಾಳಿನ ಒಂದೊಂದು ಮುಖವೂ ಹೀಗೆ ಹೀಗೇ ಇರಬೇಕೆಂದು ಆಜ್ಞಾಪಿಸಲಾಗುತ್ತಿದೆ. ವಸ್ತುತಃ ಇಸ್ಲಾಮ್ ಧರ್ಮ ಶಾಂತಿ,ಪ್ರೇಮ ಮತ್ತು ಕ್ಷಮೆಯನ್ನು ಬೋಧಿಸುವ ಧರ್ಮವೆಂಬುದೇನೋ ನಿಜ. ಆದರೆ, ಮುಲ್ಲಾಗಳ ವಿಕೃತ ವ್ಯಾಖ್ಯಾನ ಅದರ ನಿಜರೂಪವನ್ನೇ ಹಾಳುಗೆಡವಿದೆ.

ಸಂಪೂರ್ಣ ರಾಜಕೀಯ ಪ್ರಭುತ್ವದಿಂದಷ್ಟೇ ತೃಪ್ತರಾಗದ ಈ ಮುಲ್ಲಾಗಳು ಮಕ್ಕಳ ಬುದ್ಧಿಭ್ರಷ್ಟತೆ ಮಾಡುವ ಕೆಲಸದಲ್ಲಿ ತೊಡಗಿದ್ದಾರೆ—ಮಕ್ಕಳು ತಮ್ಮ ತಂದೆ ತಾಯಿಯರಿಗೆ ತಿರುಗಿ ಬೀಳುವಂತೆ ಮಾಡುತ್ತಿದ್ದಾರೆ; ರಣಾಂಗಣದಲ್ಲಿ ಹೋಗಿ ಸಾಯುವಂತೆ ಮಾಡುತ್ತಿದ್ದಾರೆ. ನನ್ನ ಕರುಳಿನ ಕುಡಿಯೇ ಆದ ಪಾರ್ವಿಜ್ ನನ್ನ ಕಣ್ಣೆದುರಿನಲ್ಲಿ ಬದಲಾಗುತ್ತಿದ್ದುದನ್ನೇ ಕಂಡಾಗ, ಆಯತೊಲ್ಲಾ ಅವರ ಕ್ರಾಂತಿಕಾರಿ ಆದರ್ಶದ ವಿಷಯದಲ್ಲಿ ನಾನು ಮತ್ತು ಇರಾನಿನ ನನ್ನ ಸಹಜೀವಿಗಳು ಇರಿಸಿಕೊಂಡಿದ್ದ ಆಶೋತ್ತರಗಳೆಲ್ಲ ಮಣ್ಣುಗೂಡಿವೆ ಎಂದು ನನಗೆ ಅರಿವಾಯಿತು.

ಕ್ರಾಂತಿಕಾರಿಗಳು ಟೆಹರಾನ್ ವಿಶ್ವವಿದ್ಯಾಲಯವನ್ನು ಮುಚ್ಚುವುದಕ್ಕೆ ಮೊದಲು, ನಗರ ಯೋಜನೆ ವಿಷಯದಲ್ಲಿ ನಾನು ಮಾಸ್ಟರ್-ಪದವಿಯನ್ನು ಪಡೆದಿದ್ದೆ. ರಾಷ್ಟ್ರೀಯ ದೂರದರ್ಶನ ಜಾಲಕ್ಕೆ ಆರ್ಥಿಕ ವಿಶ್ಲೇಷಣಜ್ಞಳಾಗಿ ಕೆಲಸ ಮಾಡುತ್ತಿದ್ದೆ. ನನ್ನ ಇಲಾಖೆಗೆ ಮುಖ್ಯಸ್ಥನನ್ನಾಗಿ ಮುಲ್ಲಾಗಳು ಒಬ್ಬ ತರುಣನನ್ನೇ ನೇಮಿಸುವವರೆಗೆ, ಆ ಹುದ್ದೆಯ ಬಗ್ಗೆ ನನಗೆ ಯಾವುದೇ ದೂರು ಇರಲಿಲ್ಲ. ಅಗತ್ಯ ಅರ್ಹತೆ ಯಾವುದೂ ಆ ತರುಣನಲ್ಲಿರಲಿಲ್ಲ. ಅವನು ತುಂಬ ಧಾರ್ಮಿಕ ಪ್ರವೃತ್ತಿಯವನಾಗಿದ್ದ. ಮುಲ್ಲಾಗಳಿಗೆ ಬೇಕಾಗಿದ್ದುದು ಇದೇ. ಮೂವತ್ತರ ಅಂಚಿನಲ್ಲಿದ್ದ ಅವನು ಯಾವ ಹೆಂಗಸನ್ನು ಕಣ್ಣೆತ್ತಿ ನೋಡುತ್ತಿರಲಿಲ್ಲ: ಅವರ ಕೈಕುಲುಕುತ್ತಿರಲಿಲ್ಲ; ಅವರನ್ನು ತನ್ನ ಕಚೇರಿಯ ಒಳಗೆ ಬರಲೂ ಬಿಡುತ್ತಿರಲಿಲ್ಲ. ಅವನು ಮಾಡಿದ ಮೊದಲ ಕೆಲಸಗಳಲ್ಲಿ ಒಂದು ಎಂದರೆ ಕ್ಯಾಮರಾದ ಮುಂದೆ ಬಂದು ನಿಲ್ಲಬೇಕಾಗುತ್ತಿದ್ದ ಎಲ್ಲ ಮಹಿಳೆಯರನ್ನೂ ಕೆಲಸದಿಂದ ತೆಗೆದುಹಾಕಿದ್ದು. ಅವರು ಅದಕ್ಕೆ ಅರ್ಹರಲ್ಲ ಎಂದು ಅವನು ಘೋಷಿಸಿದ. ಅನಂತರ, ಮಹಿಳೆಯರೆಲ್ಲರೂ ಇಸ್ಲಾಮಿನ ಸಾಂಪ್ರದಾಯಿಕ ಉಡುಗೆಯನ್ನೇ ಹಾಕಿಕೊಳ್ಳಬೇಕೆಂದು ಅವನು ನಿರೂಪ ಹೊರಡಿಸಿದ.

ಭಯೋತ್ಪಾದನೆ ಮತ್ತು ತೇಜೋವಧೆ: ಸಾರ್ವಜನಿಕ ನೈತಿಕತೆಯ ಪುನಸ್ಸ್ಥಾಪನೆಯ ದಿಕ್ಕಿನಲ್ಲಿ ಹೊಸ ಸರ್ಕಾರಕ್ಕೆ ನೆರವಾಗುತ್ತದೆ ಎಂದಿದ್ದಲ್ಲಿ 'ಹೆದ್‌ಜಾಬ್'ಅನ್ನು ಧರಿಸಲು ಸಿದ್ಧವಾಗಿರುತ್ತಿದ್ದಂಥ ಮಹಿಳೆಯರಲ್ಲಿ ನಾನೂ ಒಬ್ಬಳಾಗುತ್ತಿದ್ದೆ. ಮಂಡಿಯುವರೆಗೆ ಬರುವ ಕುಡತಾ, ಪೈಜಾಮ ಮತ್ತು ತಲೆಯ ಮೇಲೆ ಕಟ್ಟಿಕೊಳ್ಳುವ ಸ್ಕಾರ್ಫ್–ಇವನ್ನೊಳಗೊಂಡ ಸಮವಸ್ತ್ರವೇ 'ಹೆದ್‌ಜಾಬ್.' ಹಣೆ ಪೂರ್ತಿ ಮುಚ್ಚುವಂತೆ ಹಾಗೂ ನಮ್ಮ ಗದ್ದಗಳನ್ನು ಸಂಪೂರ್ಣವಾಗಿ ಮರೆಯಾಗಿಸುವಂತೆ ಸ್ಕಾರ್ಫನ್ನೇ ಕಟ್ಟಿಕೊಳ್ಳಬೇಕೆಂದು ನಮ್ಮ ವಿಭಾಗ ಮುಖ್ಯಸ್ಥ ಒತ್ತಾಯ ಪಡಿಸಿದ. ತಲೆಕೂದಲಿನ ಒಂದೇ ಒಂದು ಕುರುಳು ಈಚೆ ಕಂಡರೂ ಅವನು ಸಿಡಿದೇಳುತ್ತಿದ್ದ. ಅಷ್ಟೇ ಅಲ್ಲ, ಅವನು ಬಾಗಿಲುಗಳನ್ನು ಮಹಡಿ ಮೆಟ್ಟಿಲುಗಳನ್ನೂ ಕೆಲಸದ ಕೋಣೆಗಳನ್ನೂ ಪ್ರತ್ಯೇಕಿಸಿದ: ಹೆಂಗಸರು ಕಟ್ಟಡದ ಹಿಂಬದಿಯಿಂದ ಒಳಬಂದು ತಮ್ಮ ಕಛೇರಿಗಳಿಗೆ ನಡೆದೇ ಹೋಗಬೇಕಾಯಿತು; ಮುಂಬದಿಯ ಪ್ರವೇಶ ಹಾಗೂ ಲಿಫ್ಟಿನ ಬಳಕೆ ಗಂಡಸರಿಗೆ ಮಾತ್ರವೇ ಮೀಸಲಾಯಿತು.

ಉಸಿರು ಕಟ್ಟಿಸುವಂಥ ಉರಿಬೇಸಿಗೆಯ ಒಂದು ದಿನ, ಹಿಂಬದಿಯ ಬಾಗಿಲ ಬಳಿ ನಮ್ಮನ್ನು ಪರೀಕ್ಷಿಸಿ ಒಳಕ್ಕೆ ಬಿಡುತ್ತಿದ್ದ ಕಾವಲು ದಳದವರು ನನ್ನ ಒಬ್ಬ ಗೆಳತಿಯನ್ನು ತಡೆದು ನಿಲ್ಲಿಸಿದರು. ಅಡಿಯಿಂದ ಮುಡಿಯುವರೆಗೆ ಅವಳು ಕಪ್ಪು ಬುರ್ಖಾವನ್ನೇ ಧರಿಸಿದ್ದಳು. ಆದರೆ, ಸೆಖೆಯನ್ನು ತಾಳಲಾರದೆ, ಅವಳು ಕಡ್ಡಾಯವಾಗಿಸಿದ್ದ ಕಪ್ಪು ಉಣ್ಣೆಯ ಕಾಲು ಚೀಲಗಳನ್ನು ಹಾಕಿಕೊಂಡಿರಲಿಲ್ಲ. ಹಿಮ್ಮಡಿಯ ಒಂದು ಚೂರಿನಷ್ಟು ಜಾಗ ಕಾಣುತ್ತಿತ್ತು. ಕಾವಲು ದಳದವನು ಅವಳನ್ನು ಸೂಳೆ ಎಂದು ಬಯ್ದುದಲ್ಲದೆ, ಅವಳನ್ನು ಸೆರೆಮನೆಗೆ ದೂಡುವುದಾಗಿಯೂ ಬೆದರಿಸಿದ. ಅವಳು ತನ್ನ ಕೆಲಸವನ್ನೇ ಬಿಟ್ಟಳು, ಮತ್ತೆಂದೂ ಆ ಕಛೇರಿಗೆ ಕಾಲಿಡಲಿಲ್ಲ.

ಇರಾನಿನಲ್ಲಿ ಇಂದು ಕಾರ್ಯನಿರತ ಮಹಿಳೆಯರನ್ನು ಹೀಗೆ ಅದೆಷ್ಟು ಮಟ್ಟಿಗೆ ಹೆದರಿಸಿ, ತೇಜೋವಧೆ ಮಾಡಿ, ಕೀಳಾಗಿ ನಡೆಸಿಕೊಳ್ಳಲಾಗುತ್ತಿದೆಯೆಂದರೆ ಬಹುಪಾಲು ಮಹಿಳೆಯರು ಕೊನೆಗೆ ತಮ್ಮ ಕೆಲಸವನ್ನೇ ಬಿಟ್ಟು ಮನೆಯಲ್ಲಿಯೇ ಉಳಿಯತೊಡಗಿದ್ದಾರೆ. ಖೊಮೇನಿ ಆಡಳಿತದ ಗುರಿಯೇನೋ ಇದೇ.

ಒಂದು ವರ್ಷಕ್ಕೂ ಸ್ವಲ್ಪ ಕಡಿಮೆ ಕಾಲ ದೂರದರ್ಶನದ ನನ್ನ ಕೆಲಸದಲ್ಲಿ ನಾನು ಉಳಿದಿದ್ದೆ. ಕಿರುಕುಳ ಮತ್ತು ತೇಜೋವಧೆ ಅತಿಯಾಗಿ ಪರಿಣಮಿಸಿದಾಗ ರಾಷ್ಟ್ರೀಯ ಆಕಾಶವಾಣಿ ಕೇಂದ್ರಕ್ಕೆ ವರ್ಗ ಮಾಡಿಸಿಕೊಂಡೆ. ಇಲ್ಲಿ

ಯಾದರೂ ಪರಿಸ್ಥಿತಿ ಉತ್ತಮವಾಗಿರಬಹುದೆಂಬ ಆಸೆಯಿಂದ ನಾನು ಹಾಗೆ ಮಾಡಿದ್ದೆ. ಆದರೆ, ದೂರದರ್ಶನ ಕೇಂದ್ರದಲ್ಲಿ ಇದ್ದುದಕ್ಕಿಂತಲೂ ಇಲ್ಲಿಯ ಇಸ್ಲಾಮಿಕ್ ಸಂಪ್ರದಾಯ ಬದ್ಧತೆ ಮತ್ತಷ್ಟು ಭಯಂಕರವಾಗಿತ್ತು. "ಪ್ರಚೋದಕ"ವಾದ ತಮ್ಮ ತೆರೆದ ಕೈಗಳನ್ನು ತೋರದಿರಲಿ ಎಂದು, ಬೆರಳಚ್ಚು ಮಾಡುವಾಗ ತಮ್ಮ ಕೈಗಳಿಗೆ ಕಪ್ಪನೆಯ ಕೈಗವುಸನ್ನು ಹಾಕಿಕೊಳ್ಳುವಂತೆ ಕಾರ್ಯದರ್ಶಿನಿಯರನ್ನು ಒತ್ತಾಯಪಡಿಸಲಾಗುತ್ತಿತ್ತು.

ಬೇಸರಗೊಂಡಿದ್ದ ಹಾಗೂ ನಿರಾಶೆಗೊಂಡಿದ್ದ ನಾನೂ ನನ್ನ ಕೆಲಸಕ್ಕೆ [ಗೆಳೆಯರ ಬೇಸಿಗೆಯಲ್ಲಿ] ತಿಲಾಂಜಲಿಯನ್ನಿತ್ತೆ. ಇದರ ಅರ್ಥ ಸತತವಾದ ತೇಜೋವಧೆಯಿಂದ ನಾನು ಮುಕ್ತಳಾದೆ ಎಂದೇನೂ ಅಲ್ಲ. ಸಂಪೂರ್ಣ ಶರಣಾಗತಿಯ ಹೊರತು ಬೇರೇನೂ ಮುಲ್ಲಾಗಳಿಗೆ ಮತ್ತು ಇಸ್ಲಾಮಿಕ್ ಕಾವಲು ದಳದವರಿಗೆ ತೃಪ್ತಿಯನ್ನುಂಟು ಮಾಡುವಂತೆ ಕಾಣುವುದಿಲ್ಲ. ಟೆಹೆರಾನಿನ ಗೋಡೆಗಳ ಮೇಲಿದ್ದ ಮೃದು ಪಾನೀಯ ಅಥವಾ ಬಟ್ಟೆ ಒಗೆಯುವ ಯಂತ್ರಗಳನ್ನು ಕುರಿತ ಜಾಹೀರಾತುಗಳ ಬದಲಿಗೆ ಈ ಬಗೆಯ ಘೋಷಣೆಗಳು ಕಾಣಿಸಿಕೊಂಡುವು: "ಹೆದ್‌ಜಾಬನ್ನು ಧರಿಸದ ಮಹಿಳೆಯ ಗಂಡನಿಗೆ ಮೂರುಕಾಸಿನ ಮಾನವೂ ಇರುವುದಿಲ್ಲ''. ಅಥವಾ "ಕತ್ತೆಗಳು ಮತ್ತು ಹಸುಗಳು ಹೆದ್‌ಜಾಬನ್ನು ಧರಿಸುವುದಿಲ್ಲ–ಅವು ಪ್ರಗತಿಶೀಲವಾಗಿವೆಯೇನು?"

ನೀವು ಇರಾನಿನಲ್ಲಿ ಎಲ್ಲಿಗೆ ಹೋಗಿ, ಅಲ್ಲೆಲ್ಲ ಮುಲ್ಲಾಗಳ ಗೂಢಚಾರರು ಇದ್ದೇ ಇರುತ್ತಾರೆ. ಆರ್ಥಿಕತೆ ಕುಸಿದುಬಿದ್ದಿರುವುದರಿಂದ, ಆಹಾರಕ್ಕಾಗಿ ಮಹಿಳೆಯರೂ ಬೆಳಗ್ಗೆ ಐದು ಘಂಟೆಗೆಲ್ಲ ಸಾಲುಗಟ್ಟಿ ನಿಲ್ಲಬೇಕಾಗಿ ಬಂದಿದೆ. ಮಾರುಕಟ್ಟೆಯಲ್ಲಿಯೂ ಕ್ರಾಂತಿಕಾರಿ ಕಾವಲು ದಳದವರು ನಿಮ್ಮ ಮೇಲೆ ಕಣ್ಣಿಟ್ಟಿರುತ್ತಾರೆ, ನಿಮ್ಮ ಮಾತುಗಳನ್ನು ಕದ್ದು ಕೇಳುತ್ತಿರುತ್ತಾರೆ. ನೀವೇನಾದರೂ ಗೊಣಗಿದರೆ, "ಸಮಾಜಕ್ಕೆ ಕಿರಿಕಿರಿ"ಯನ್ನುಂಟು ಮಾಡುತ್ತಿದ್ದೀರೆಂದು ನಿಮ್ಮನ್ನು ಸೆರೆಮನೆಗೆ ಎಳೆದೊಯ್ಯುತ್ತಾರೆ.

ಕೌಟುಂಬಿಕ ಮನರಂಜನೆ: ಕಾವಲುದಳದ ವಾಹನ–ಸಂಚಾರಿ ಗಸ್ತು ತಂಡ ಇವರನ್ನು "ಮೋಟರ್‌ಸೈಕಲ್ ಮನುಷ್ಯರು" ಎಂದು ಕರೆಯುತ್ತೇವೆ– ಒಮ್ಮೆ ನಮ್ಮ ಬೀದಿಯಲ್ಲಿ ಮಹಿಳೆಯೊಬ್ಬಳು ತುಟಿರಂಗನ್ನು ಹಚ್ಚಿಕೊಂಡಿದ್ದುದನ್ನು ಪತ್ತೆಮಾಡಿತು. ಚಾಕುವಿನಿಂದ ಅವರು ಆಕೆಯ ತುಟಿಗಳನ್ನೇ ಕತ್ತರಿಸಿ ಹಾಕಿದರು. ಉಳಿದ ನಮಗೆಲ್ಲ ಅದೊಂದು ಪಾಠವಾಗಬೇಕೆಂಬುದು ಅವರ ಇಚ್ಛೆಯಾಗಿತ್ತು. ಇರಾನಿನಲ್ಲಿ ತನ್ನ ಗಂಡನ ಜೊತೆಯಲ್ಲಿ ಗಾಳಿ ಸಂಚಾರ

ಮಾಡುತ್ತಿರುವ ಹೆಣ್ಣಿಗೂ ಇಂದು ಯಾವುದೇ ರಕ್ಷಣೆ ಇಲ್ಲ. ಇಸ್ಲಾಮಿ ಕಾವಲು ದಳದವರು ಇಂಥ ಜೋಡಿಗಳನ್ನು ನಿಲ್ಲಿಸಿ, ನಿಮ್ಮ ಮದುವೆಯ ಕಾಗದ ಪತ್ರಗಳನ್ನು ತೋರಿಸಿ ಎಂದು ಒತ್ತಾಯ ಪಡಿಸಬಹುದು. ೧೯೮೨ ರ ವಸಂತದಲ್ಲಿ ಒಮ್ಮೆ ಈ ಕಾವಲುದಳದವರು, ತಮ್ಮೊಡನೆ ಮದುವೆಯ ಕಾಗದ ಪತ್ರಗಳನ್ನು ಇಟ್ಟುಕೊಂಡಿರದಿದ್ದ ಜೋಡಿಯೊಂದಕ್ಕೆ ಈ ರೀತಿ ಸವಾಲು ಹಾಕಿದರು. ಹೆಂಡತಿಯನ್ನು ಅಲ್ಲೇ ಬಂಧನದಲ್ಲಿರಿಸಿಕೊಂಡರು. ಕಾಗದ ಪತ್ರಗಳನ್ನು ತರುವ ಸಲುವಾಗಿ ಗಂಡ ಮನೆಗೆ ಹೋದ. ಹಿಂದಿರುಗಿ ಬರುವಾಗ ಅವನ ಕಾರು ಅಪಘಾತಕ್ಕೊಳಗಾಯಿತು. ಆಸ್ಪತ್ರೆಯಿಂದ ಹಿಂದಿರುಗಿದಾಗ, ಮದುವೆ ಕಾಗದ ಪತ್ರಗಳು ಇಲ್ಲದಿದ್ದುದರ ಹಿನ್ನೆಲೆಯಲ್ಲಿ ಆಕೆಯನ್ನು ಸೂಳೆಯೆಂದು ಪರಿಗಣಿಸಿ, ಕೊಲ್ಲಲಾಯಿತು ಎಂದು ಅವನಿಗೆ ತಿಳಿದುಬಂತು.

ಖೊಮೇನಿಯ ಇರಾನ್‌ನಲ್ಲಿ ಮಹಿಳೆ ಸರ್ಕಾರದಲ್ಲಾಗಲೀ, ಪೌರ-ಸೇವಾ ವಿಭಾಗದಲ್ಲಾಗಲೀ ಯಾವುದೇ ಕಾರ್ಯಪಾಲಕ ಹುದ್ದೆಯನ್ನೇ ಹೊಂದಿರುವಂತಿಲ್ಲ, ನ್ಯಾಯಾಲಯ ನಡೆವಳಿಗಳಲ್ಲಿಯೂ ಪರಸ್ಪರ ಪೂರಕವಾಗಿರುವ ಇಬ್ಬರು ಮಹಿಳೆಯರ ಸಾಕ್ಷ್ಯಕ್ಕಿಂತ ಒಬ್ಬ ಪುರುಷನ ಸಾಕ್ಷ್ಯಕ್ಕೆ ಹೆಚ್ಚಿನ ಮಾನ್ಯತೆ ಕೊಡಲಾಗುತ್ತಿದೆ; ಮುಲ್ಲಾಗಳ ದೃಷ್ಟಿಯಲ್ಲಿ ಗಂಡಸರು ಮತ್ತು ಹೆಂಗಸರು ಒಂದೇ ಜನಾಂಗಕ್ಕೆ ಸೇರಿದವರಲ್ಲ. ಅಷ್ಟೇ ಅಲ್ಲ, ಖೊಮೇನಿ ಹೇಳುತ್ತಾನೆ: ಮಾನವ ಹೆಣ್ಣುಪ್ರಾಣಿಯೊಂದನ್ನು ಮದುವೆಯಾಗುತ್ತಾನೆ. ಮಹಿಳೆಯರು ಇಂದು ಖೊಮೇನಿಯ ಇರಾನ್‌ನಲ್ಲಿ ಪ್ರಾಣಿಗಳು ಮಾತ್ರವಾಗಿದ್ದಾರೆ.

ಸಾಂಪ್ರದಾಯಿಕವಾಗಿ ಇಸ್ಲಾಮ್ ಧರ್ಮ ಕುಟುಂಬಕ್ಕೆ ತುಂಬ ಹೆಚ್ಚಿನ ಗೌರವವನ್ನು ತೋರುತ್ತದೆ. ಆದರೆ, ಇಂದು ಇರಾನ್‌ನಲ್ಲಿ ಇದಾವುದಕ್ಕೂ ಬೆಲೆಯೇ ಇಲ್ಲ. ಸಂಪರ್ಕ ಮಾಧ್ಯಮಗಳಲ್ಲಿ ಇದೇ ಮಾತನ್ನು ಮತ್ತೆ ಮತ್ತೆ ಪುನರುಚ್ಚರಿಸಲಾಗುತ್ತದೆ. ಆಡಳಿತದ ವಿರುದ್ಧ ಮಾತನಾಡುವ ತಂದೆ ತಾಯಿಯರನ್ನು ಮಕ್ಕಳು ತಿರಸ್ಕರಿಸಬೇಕು; ಮಕ್ಕಳು ಕ್ರಾಂತಿ ವಿರೋಧಿಗಳಂತೆ ಕಂಡುಬಂದಲ್ಲಿ ತಂದೆತಾಯಿಗಳು ಸ್ವಯಂಪ್ರೇರಣೆಯಿಂದಲೇ ಅಂಥ ಮಕ್ಕಳನ್ನು ತ್ಯಜಿಸಬೇಕು. ಒಬ್ಬ ಮುಲ್ಲಾನಂತೂ ತನ್ನ ಇಬ್ಬರು ಮಕ್ಕಳನ್ನು ನೇಣುಗಂಬಕ್ಕೆ ಹಾಕಿಸಿದ. ಸಾರ್ವಜನಿಕವಾಗಿ ನೇಣುಶಿಕ್ಷೆಯನ್ನು ಜಾರಿ ಮಾಡುವುದು ಮುಲ್ಲಾನ ದೃಷ್ಟಿಯಲ್ಲಿ ಕೌಟುಂಬಿಕ ಮನರಂಜನೆಯ ಒಂದು ಬಗೆ. ಇದನ್ನು ನೋಡಲು ಮಕ್ಕಳನ್ನೂ ಕರೆತನ್ನಿ ಎಂದು ಅವರು ಹೇಳುತ್ತಾರೆ. ನಿರ್ವಾಣ

ಕಾರ್ಯದ ಕ್ರೇನಿಗೆ ಬಲಿಪಶುಗಳನ್ನು ನೇಣುಹಾಕಿ, ಎಲ್ಲರಿಗೂ ಸರಿಯಾಗಿ ಕಾಣುವಂತಾಗಲೆಂದು ಅತ್ತಿಂದಿತ್ತ ಅವರ ಹೆಣವನ್ನು ತೂಗಾಡಲಾಗುತ್ತದೆ.

ನಮ್ಮ ಮಗುವನ್ನು ಇಂಥ ಭಯಂಕರ ಅನುಭವಗಳಿಂದ ದೂರವಾಗಿಡಲು ನಾನು ಮತ್ತು ಫರೀದೂನ್ ಪ್ರಯತ್ನಿಸಿದೆವು. ಆದರೆ, ಹೆಜ್ಜೆ ಹೆಜ್ಜೆಯಾಗಿ ಮುಲ್ಲಾಗಳು ಅವಳ ಮೇಲೆ ವಿಜಯವನ್ನೇ ಸಾಧಿಸಿದರು. ಶಾಲೆಯಲ್ಲಿನ ಬೆಳಗ್ಗೆ ತರಗತಿಗಳ ಮೊದಲ ಘಂಟೆ ಘೋಷಣೆಗಳ ಘೋಷಕ್ಕೆ ಮೀಸಲಾಗಿರುತ್ತಿತ್ತು. ಈ ಘೋಷಣೆಗಳೆಲ್ಲ ಸಾವಿಗೆ ಸಂಬಂಧಿಸಿದವೇ ಆಗಿರುತ್ತಿದ್ದುವು.

ಕೆಲವೊಮ್ಮೆ ಪಾರ್ವಿಸ್ ಮತ್ತು ಅವಳ ಸಹಪಾಠಿಗಳನ್ನು ಕತ್ತಲ ಕೋಣೆಯಲ್ಲಿ ಕೂರಿಸಿ, ಅಧ್ಯಾಪಕರು ಸಮಾಧಿಶಿಲೆಯನ್ನು ತರುವುದನ್ನು ನೋಡುವಂತೆ ಮಾಡಲಾಗುತ್ತಿತ್ತು. ಇರಾಕಿನೊಡನೆ ನಡೆದ ಯುದ್ಧದಲ್ಲಿ ಹತರಾದ ಸೈನಿಕರ ಚಿತ್ರಗಳನ್ನು ಗೋಡೆಯ ಮೇಲೆ ಪಿನ್ನಿಸಲಾಗುತ್ತಿತ್ತು: ಕತ್ತರಿಸಿದ ತಲೆಗಳು, ಭಯಂಕರವಾಗಿ ವಿರೂಪಗೊಂಡಿದ್ದಂಥ ಶವಗಳು, ಕೈಕಾಲುಗಳು, ಅಂಗಾಂಗಗಳು ಇಲ್ಲದೆ ಇರುತ್ತಿದ್ದ ನಿದರ್ಶನಗಳು–ಇವೆಲ್ಲ ಅದರಲ್ಲಿ ಸೇರಿರುತ್ತಿದ್ದುವು. ಒಬ್ಬರಾದ ಮೇಲೆ ಒಬ್ಬರಂತೆ ಪ್ರತಿಯೊಂದು ಮಗುವೂ ಈ ಚಿತ್ರಗಳನ್ನು ನೋಡಬೇಕಾಗಿತ್ತು; ಹಾಗೂ ಅನಂತರದಲ್ಲಿ ಆ ಧರ್ಮವೀರ ಹುತಾತ್ಮರ ಸಮಾಧಿಶಿಲೆಯ ಬಳಿ ನಿಂತು, ಸೇಡು ತೀರಿಸಿಕೊಳ್ಳುವ ಆಶಯದ ಪ್ರಾರ್ಥನೆಯನ್ನು ಹೇಳಬೇಕಾಗುತ್ತಿತ್ತು.

ಅನಾಗರಿಕ ವರ್ತನೆ: ಇರಾನಿನ ಬಾಲಕರನ್ನು ರಣರಂಗಕ್ಕೆ ಅಟ್ಟುವ ಮುಂದಿನ ತಾರ್ಕಿಕ ಕ್ರಮವನ್ನು ಮುಲ್ಲಾಗಳು ಕೈಗೊಂಡರು. ಇಂದು ಒಂಬತ್ತು ವರ್ಷ ವಯಸ್ಸಿನ ಬಾಲಕರನ್ನು ರಣರಂಗದ ಮುಂಚೂಣಿಗೆ ಅಟ್ಟಲಾಗುತ್ತಿದೆ. ಸಿಡಿಮದ್ದುಗಳನ್ನು ಸ್ಫೋಟಿಸುವ ಕಾರ್ಯಕ್ಕಾಗಿ ಅವರನ್ನು ಕೆಲವೊಮ್ಮೆ ಸೇನಾಪಡೆಗಳ ಮುಂಚೂಣಿ ದಳವಾಗಿ ಅಟ್ಟುವುದೂ ಉಂಟು. ಅವರು ಈ ಮಕ್ಕಳಿಗೆ ಪುಟ್ಟ ಬೀಗದ ಕೈಗಳನ್ನು ಕೊಟ್ಟು, ಅದರಿಂದ ಸ್ವರ್ಗದ ಬಾಗಿಲನ್ನು ತೆಗೆಯಬರುತ್ತದೆಂದು ಹೇಳುತ್ತಾರೆ.

ಇರಾನಿನ ಮಹಿಳೆಯರು ಸಿಡಿದೇಳತೊಡಗಿದ್ದಾರೆ. ಪುರುಷನೊಂದಿಗೆ ಓಡಾಡುತ್ತಿದ್ದಳೆಂಬ ಕಾರಣಕ್ಕಾಗಿಯೇ ಚಾಟಿ ಏಟನಿಂದ ಸಾಯುವಂತೆ ಮಾಡುವುದಾದರೆ–ಉತ್ತರ ಭಾಗದಲ್ಲಿನ ಚಾಲುಸ್‌ನಗರದಲ್ಲಿನ ಒಬ್ಬ ಹುಡುಗಿಗೆ ಇಂಥ ಶಿಕ್ಷೆಯನ್ನು ವಿಧಿಸಲಾಗಿತ್ತು, ತುಟಿರಂಗನ್ನು ಹಚ್ಚಿಕೊಂಡಿದ್ದಕ್ಕಾಗಿ ತುಟಿಗಳನ್ನೇ ಕತ್ತರಿಸಿ ಹಾಕುವುದಾದರೆ, ಹತ್ತರ ಹರೆಯದ ಮಕ್ಕಳನ್ನು ರಣ

ರಂಗಕ್ಕೆ ಎಳೆದೊಯ್ಯುತ್ತ ಇದ್ದರೆ, ನೀವು ಇನ್ನೇನು ತಾನೇ ಮಾಡಲು ಸಾಧ್ಯ? ನೀವು ತೆಪ್ಪಗಿರಬಹುದು ಹಾಗೂ ಇದನ್ನೆಲ್ಲ ಒಪ್ಪಿಕೊಳ್ಳಬಹುದು. ದಿನಗಳೆದಂತೆ ನೀವೂ ಒಬ್ಬ ಕಿರುಯಂತ್ರ ಮಾನವನಾಗಿಬಿಡಬಹುದು. ಅಥವಾ ಫೆರೇದೂನ್ ಮತ್ತು ನಾನು ಮಾಡಿದಂತೆ ನಾಡನ್ನು ಬಿಟ್ಟು ಓಡಿಹೋಗಬಹುದು. ಅಥವಾ ತಿರುಗಿಬೀಳಬಹುದು.

ಒಮ್ಮೆ ನಮ್ಮ ಕಟ್ಟಡದ ಬಳಿಯಿದ್ದ ಇನ್ನೊಂದು ಕಟ್ಟಡದಲ್ಲಿ ಇಸ್ಲಾಮಿ ಕಾವಲು ದಳದವರು ಖೊಮೇನಿ ವಿರೋಧಿ ಗೆರಿಲ್ಲಾಗಳಾದ ಇಬ್ಬರು ಮುಜಾಹೆದೀನ್‌ಗಳನ್ನು ಸಿಕ್ಕಿಸಿಕೊಂಡರು. ಕಾವಲುದಳದವರು ಸೈನಿಕಪಡೆಯವರನ್ನು ಕರೆತಂದು ಆ ಕಟ್ಟಡವನ್ನು ಸುತ್ತುವರಿದರು. ಹಾಗೂ ಆರು ಘಂಟೆಗಳ ಕಾಲ ಗುಂಡಿನ ಸುರಿಮಳೆಗರೆದರು. ಗುಂಡಿನ ಸುರಿಮಳೆ ಕೊನೆಗೂ ನಿಂತು, ಮುಜಾಹೆದೀನ್‌ಗಳನ್ನು ಹೊರಗೆಳೆದು ತಂದಾಗ ಅಲ್ಲಿದ್ದವರು ಇಬ್ಬರೇ ಇಬ್ಬರು ಎಂಬುದನ್ನು ಆ ಇಬ್ಬರೂ ಹುಡುಗಿಯರಾಗಿದ್ದರೆಂಬುದನ್ನು ಕಂಡು ನಾವು ಆಶ್ಚರ್ಯ, ಚಕಿತರಾದೆವು. ಒಬ್ಬಳು ಆ ಹೊತ್ತಿಗಾಗಲೇ ಸತ್ತಿದ್ದಳು. ಇನ್ನೊಬ್ಬಳು ಬದುಕಿದ್ದರೂ ಗೆರಿಲ್ಲಾಗಳು ಅನೇಕವೇಳೆ ತಮ್ಮೊಡನೆ ಇಟ್ಟುಕೊಂಡಿರುವ ಸೈಯೆನ್ಯೆಡ್ ಗುಳಿಗೆಯನ್ನು ನುಂಗಿದ್ದಳು.

ತರುಣ ಮಹಿಳಾಗೆರಿಲ್ಲಾಗಳು ಬಂಧಿತರಾದಾಗ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಏಕೆಂದರೆ, ತಮಗಾಗಿ ಚಿತ್ರಹಿಂಸೆ ಮತ್ತು ಅತ್ಯಾಚಾರವೂ ಸೇರಿದಂತೆ, ಅನಾಗರಿಕವಾದ ವರ್ತನೆ ಕಾದಿರುತ್ತದೆಂಬುದು ಅವರಿಗೆಲ್ಲ ಗೊತ್ತು. ಅತ್ಯಾಚಾರವಂತೂ ನಿತ್ಯದ ಘಟನೆಯಾಗಿಬಿಟ್ಟಿದೆ—ಇಸ್ಲಾಮಿ ಕಾವಲು ದಳದವರಿಗೆ ವಿಕೃತ ರೀತಿಯ ಸಂತೋಷವನ್ನೊದಗಿಸಬೇಕೆಂದು ಮಾತ್ರವಲ್ಲ. ಸೆರೆಯಾಗುವ ಬಹುಮಂದಿ ಮುಜಾಹೆದೀನ್ ತರುಣಿಯರು ಕನ್ಯೆಯರಾಗಿರುತ್ತಾರೆ. ಕನ್ಯೆಯರು ಮುಗ್ಧರು ಹಾಗೂ ಅವರು ನೇರವಾಗಿ ಸ್ವರ್ಗವನ್ನು ಸೇರುತ್ತಾರೆಂದು ಧಾರ್ಮಿಕ ಸಂಪ್ರದಾಯ ಹೇಳುತ್ತದೆ. ಹೀಗಾಗಿ, ಕಾವಲು ದಳವರ ದೃಷ್ಟಿಯಲ್ಲಿ, ಅವರನ್ನು ಅತ್ಯಾಚಾರಕ್ಕೆ ಒಳಪಡಿಸಿದರೆ, ಆ ಆತ್ಯಂತಿಕ ಕೃಪೆ ಅವರಿಗೆ ದೊರೆಯದಂತೆ ಮಾಡಬಹುದು.

ಇರಾನಿನಿಂದ ಹೊರಹೋಗಲು ಇದೀಗ ಸರಿಯಾದ ಕಾಲವೆಂದು ನಾನು ಮತ್ತು ಫೆರೇದೂನ್ ಒಪ್ಪಿಕೊಂಡ ಬಳಿಕ, ನಿಧಾನವಾಗಿ ಹಾಗೂ ಎಚ್ಚರಿಕೆಯಿಂದ ಫೆರೇದೂನ್ ಪ್ರಯತ್ನವನ್ನು ಆರಂಭಿಸಿದರು. ಪಾರ್ಸಿಗಳೊಂದಿಗೆ ನಮ್ಮನ್ನು ಗಡಿದಾಟಿಸಬಲ್ಲಂಥ ವ್ಯಕ್ತಿಯನ್ನು ಸಂಪರ್ಕಿಸಲು ಪ್ರಯತ್ನಿಸಿದರು.

ನಾವು ಒಮ್ಮೆ ಕ್ಷೇಮವಾಗಿ ಗಡಿದಾಟಿದೆವೆಂದು ಗೊತ್ತಾದರೆ, ತಮ್ಮ ಯಾವುದಾದರೂ ಒಂದು ಅಂತರರಾಷ್ಟ್ರೀಯ ಯಾನದ ತರುವಾಯ ನಮ್ಮನ್ನು ಕೂಡಿಕೊಳ್ಳುವುದಾಗಿ ಅವರು ನಮಗೆ ತಿಳಿಸಿದ್ದರು. ಆ ವಸಂತದ ಉತ್ತರಾರ್ಧದಲ್ಲಿ, ತಮ್ಮ ನೆಚ್ಚಿನ ಗೆಳೆಯನೊಬ್ಬನನ್ನು "ಕ್ರಾಂತಿವಿರೋಧಿ ಚಟುವಟಿಕೆಗಳ" ಆರೋಪದ ಮೇಲೆ ಬಂಧಿಸಿ, ನೇಣಿಗೇರಿಸಿದಾಗ, ಇನ್ನೂ ಹೆಚ್ಚು ತಡಮಾಡಬಾರದೆಂದು ಸತ್ಯ ನನಗೆ ಮನದಟ್ಟಾಯಿತು.

ಜೂನ್ ತಿಂಗಳ ಕಡೆಯಲ್ಲಿ, ತಮ್ಮ ಕುಟುಂಬದೊಂದಿಗೆ ಕೆರ್‌ಮಾನನಲ್ಲಿ ಕೆಲಕಾಲ ಕಳೆಯಬಯಸಿರುವುದಾಗಿ ಫೆರೇದೂನ್ ಬಹಿರಂಗಪಡಿಸಿದರು. ಅವರ ತೀರ ಹತ್ತಿರದ ಗೆಳೆಯರಿಗೆ ಕೂಡ ಸತ್ಯವನ್ನು ತಿಳಿಸುವಂತಿರಲಿಲ್ಲ. ನಾವು ಆಯ್ದುಕೊಂಡಿದ್ದ ದಿನದಂದು ನನ್ನನ್ನು ಮತ್ತು ಪಾರ್ವಿಸಳನ್ನು ಫೆರೇದೂನ್ ಟೆಹೆರಾನಿನ ಪಶ್ಚಿಮಕ್ಕೆ ಕಾರಿನಲ್ಲಿ ಕರೆದೊಯ್ದರು. ಅಲ್ಲಿ ನಾವು ನಮ್ಮ ಮಾರ್ಗದರ್ಶಿಗಳನ್ನು ಭೇಟಿಯಾಗಬೇಕಾಗಿತ್ತು. ಒಂದು ದೀರ್ಘ ಕ್ಷಣದವರೆಗೆ ನಾನು ಮತ್ತು ಫೆರೇದೂನ್ ಒಬ್ಬರನ್ನೊಬ್ಬರು ದಿಟ್ಟಿಸಿ ನೋಡಿದೆವು: ನಾವಿಬ್ಬರೂ ಮತ್ತೆ ಒಂದುಗೂಡುತ್ತೇವೆಯೋ ಎಂಬ ಭಾವನೆ ಆ ನೋಟದಲ್ಲಿ ತುಂಬಿತ್ತು. ಅಂದು ಸಂಜೆ ಗಡಿಯ ಬಳಿಯ ಒಂದು ಮನೆಗೆ ನನ್ನನ್ನು ಪಾರ್ವಿಸಳನ್ನು ಕರೆದೊಯ್ಯಲಾಯಿತು. ಅಲ್ಲಿ ಮಲಗಿಕೊಳ್ಳುವಂತೆ ನಮಗೆ ತಿಳಿಸಲಾಯಿತು.

ಬೆಳಗಿನ ಜಾವ ಎರಡು ಗಂಟೆಯ ಹೊತ್ತಿಗೆ ನಮ್ಮ ಮುಂದಿನ ತಂಡದ ಸಂಪರ್ಕಿಗರು ಬಂದು ನಮ್ಮನ್ನೆಬ್ಬಿಸಿದರು. ಗಡಿನಾಡಿನ ಕಾವಲುದಳದವರು ನಾವು ಗಡಿಯಿಂದ ತಪ್ಪಿಸಿಕೊಳ್ಳುವ ಸಂದರ್ಭದಲ್ಲಿ ನಮ್ಮತ್ತ ಗುಂಡು ಹಾರಿಸುವ ಸಂಭವ ಇರುವುದರಿಂದ, ಸಣ್ಣ ಸದ್ದನ್ನೂ ಮಾಡಕೂಡದು ಎಂದು ಆ ಸಣ್ಣ ಕೋಣೆಯಲ್ಲಿ ನಾನು ಪಾರ್ವಿಸಳಿಗೆ ತಿಳಿಯಹೇಳಿದೆ. ಅವಳು ಗಂಭೀರವಾಗಿ ತಲೆಯಲ್ಲಾಡಿಸಿದಳು. ಆ ಹೊತ್ತಿಗೆ, ಇರಾನಿನಲ್ಲಿ ಏನೋ ಆಗಬಾರದ್ದು ಆಗಿದೆ ಎಂದು ಅವಳಿಗೆ ಅರಿವಾಗತೊಡಗಿತ್ತು. ಅವಳು ನಿಟ್ಟುಸಿರೊಂದನ್ನೆಳೆದಳು.

ಮೂರನೆಯ ದಿವಸದ ಹೊತ್ತಿಗೆ ನಾವು ಕ್ಷೇಮವಾಗಿ ಇರಾನಿನ ಗಡಿಯಿಂದ ಪಾರಾಗಿದ್ದೆವು. ಟೆಹೆರಾನಿನಲ್ಲಿದ್ದ ಫೆರೇದೂನ್‌ಗೆ ನಮ್ಮ ಸಂಪರ್ಕಿಗನೊಬ್ಬ ದೂರವಾಣಿ ಕರೆಯಲ್ಲಿ "ಒಣಗಿಸಿದ ಹಣ್ಣುಗಳ ಸರಕು ಸುಸ್ಥಿತಿಯಲ್ಲಿ ಬಂದು ಸೇರಿದೆ" ಎಂದು ತಿಳಿಸಿದ. ತಮ್ಮ ಮುಂದಿನ ಯಾನದಲ್ಲಿ- ಈ ಬಾರಿ ಅವರು

ಆವರ್‌ಸ್ಟರ್‌ಡಾಮ್‌ಗೆ ಹೋಗಬೇಕಾಗಿತ್ತು -ಫೆರೇದೂನ್ ತಮ್ಮ ವಿಮಾನದಿಂದ ಹಾಗೂ ಇರಾನ್‌ನಿಂದ–ಹೊರಬಂದು ನಮ್ಮನ್ನು ಸೇರಿಕೊಂಡರು.

ಇಂದು ನಾನು ಫೆರೇದೂನ್ ಮತ್ತು ಪಾರ್ಮಿಸ್ ಪಶ್ಚಿಮ ಯೂರೋಪಿನಲ್ಲಿ ವಾಸಿಸುತ್ತಿದ್ದೇವೆ. ನಮಗಾಗಿ ಹೊಸ ಬಾಳೊಂದನ್ನು ಕಟ್ಟಲು ನಾವು ಪ್ರಯತ್ನಿಸುತ್ತಿದ್ದೇವೆ. ಪಾರ್ಮಿಸ್ ಈಗ ನಿಜವಾಗಿಯೂ ಚಿಕ್ಕ ಹುಡುಗಿಯಾಗಿದ್ದಾಳೆ–ಆ ಮಕ್ಕಳಿಗೆ ಸಹಜವಾದ ಆಟಪಾಟಗಳು, ತಾನಾಗಿ ಉಕ್ಕಿಬರುವ ನಗೆ ಅವಳಲ್ಲಿ ಕಂಗೊಳಿಸುತ್ತಿವೆ. ನಾವು ಬಿಟ್ಟು ಬಂದ ಉಳಿದೆಲ್ಲ ವಿಚಾರಗಳ ಬಗ್ಗೆ ನನಗೆ ವಿಷಾದ ಉಂಟಾದಾಗ ಟೆಹರಾನಿನ ನಮ್ಮ ಮನೆಯಲ್ಲಿ ನಾನು ತೆಗೆದಿದ್ದ ನನ್ನ ಚಿಕ್ಕ ಮಗಳ ಭಾವಚಿತ್ರದತ್ತ ಕಣ್ಣುಹಾಯಿಸುತ್ತೇನೆ. ಹೆಡ್‌ಜಾಬನ್ನು ತೊಟ್ಟಿರುವ ತಲೆಯ ಸುತ್ತಲೂ ಸ್ಕಾರ್ಫನ್ನು ಬಿಗಿದಿರುವ, ಗಂಭೀರ ಮುಖ ಭಂಗಿಯನ್ನು ತೋರುವ ಆ ಬಾಯಿ ಹಾಗೂ ನಿರ್ಜೀವವೂ ಗಡುಸಾಗಿಯೂ ತೋರುವ ಆ ಕಣ್ಣುಗಳು ಅಚ್ಚೊತ್ತಿರುವ ಆ ಚಿತ್ರದ ಒಂದೇ ಒಂದು ನೋಟ, ನಾವು ಸಕಾಲದಲ್ಲಿ ಸುಯೋಗ್ಯ ಕ್ರಮವನ್ನು ಕೈಗೊಂಡೆವೆಂಬುದನ್ನು ಸಾರಿ ಹೇಳುತ್ತದೆ.

ಪ್ರಧಾನ್ ಗುರುದತ್ತ



ಎಡೆಗುಂದಿ ಮುಗ್ಗರಿಸದಿರು; ಸ್ವರ್ಗದ ಹಾದಿ ಸರಳವಾಗಿಯೇ ಇದೆ; ನಿರ್ಧಾರ ದೃಢವಾಗಿದ್ದರೆ ಸ್ವರ್ಗ ತಲುಪಲು ಬಹಳ ಸಮಯವೇನೂ ಬೇಕಾಗುವುದಿಲ್ಲ.

—ರದರ್ ಫೋರ್ಡ್

ಥೋರೊ—ಒಂದು ವಿಶ್ವಚೇತನ

ಬರಹಗಾರನೂ ಕವಿಯೂ ಪ್ರಕೃತಿಪ್ರೇಮಿಯೂ ಸಮಾಜಸುಧಾರಕನೂ ಮಾನವೀಯ ಹಕ್ಕುಗಳ ತೀವ್ರಪ್ರತಿಪಾದಕನೂ ಆದ ಹೆನ್ರಿ ಡೇವಿಡ್ ಥೋರೊ ೧೮೬೨ನೆ ಮೇ ೬ರಂದು ನಿಧನ ಹೊಂದಿದನು. ಅದರಿಂದಾಗಿ ಜಗತ್ತಿಗೆ ಆದ ನಷ್ಟ ಅಪಾರ.

ಥೋರೋನ ಜೀವಿತದ ವೇಳೆ ಯಾರೂ ಅವನ ಅಭಿಪ್ರಾಯಗಳಿಗೆ ಸಾಕಷ್ಟು ಗಮನ ಕೊಡಲಿಲ್ಲವೆಂದೇ ಹೇಳಬೇಕು. ಮೆಸಾಚುಸೆಟ್ ಸಂಸ್ಥಾನದ ಬಾಸ್ಟನ್ ನಗರಕ್ಕೆ ಹತ್ತಿರದಲ್ಲಿರುವ 'ಕಾನ್‌ಕಾರ್ಡ್'ನ ಜನರು ಅವನೊರ್ವ ಅತಿರೇಕ ಸ್ವಭಾವದ ಮನುಷ್ಯನೆಂದೇ ಭಾವಿಸಿದ್ದರು. ಯಾರೂ ಯಾವಾಗಲೂ ಮಾಡದ ಕೆಲಸಗಳನ್ನೇ ಅವನು ಮಾಡಿ ಅಧಿಕಾರಿಗಳೊಡನೆ ಘರ್ಷಣೆಗೆ ಇಳಿಯುತ್ತಿದ್ದ ಮತ್ತು ನಿಷ್ಠುರ ಹಾದಿಯನ್ನು ಹಿಡಿಯುತ್ತಿದ್ದ ಎಂದು ಜನರು ಅವನ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು. ಅವನು ಸತ್ತಾಗ ಜನರು ಹತ್ತಿರದ ಬಂಧುಗಳಂತೆ ದುಃಖಿಸಿದರು. ಮಕ್ಕಳು ಗುಂಪುಗಳಲ್ಲಿ ಹೋಗಿ ಅವನ ಸಮಾಧಿಯ ಮೇಲೆ ಹೂವುಗಳನ್ನು ಚೆಲ್ಲಿ ಗೌರವಿಸಿದರು. ಅವನ ಆತ್ಮೀಯ ಕವಿ-ಮಿತ್ರ ಸುಂದರವಾದ ಕವನವನ್ನು ರಚಿಸಿ ಶ್ರದ್ಧಾಂಜಲಿ ಅರ್ಪಿಸಿದರು. ಹಲಕೆಲವು ಪತ್ರಿಕೆಗಳು ನುಡಿಕಾಣಿಕೆಗಳನ್ನು ಅರ್ಪಿಸಿದವು.

ಕಳೆದ ಒಂದು ಶತಮಾನದಲ್ಲಿ ಬಹಳಷ್ಟು ಬದಲಾವಣೆಗಳು ಆಗಿವೆ. ಇಂದು ಅಮೆರಿಕೆಯ ಸಾಹಿತಿಗಳ ಸಾಲಿನಲ್ಲಿ ಥೋರೊಗೆ ಗೌರವಯುತವಾದ ಸ್ಥಾನವಿದೆ. ಅವನ ಅಭಿಪ್ರಾಯಗಳು ಒಂದು ಮೂಲೆಯಿಂದ ವಿಶ್ವದ ಎಲ್ಲೆಡೆಗೆ ಚಿಮ್ಮಿವೆ. ಜನರ ಮೇಲೆ ಅವು ಬೀರಿದ ಪ್ರಭಾವದ ಪರಿಣಾಮವಾಗಿ ಇತಿಹಾಸದ ಗತಿಯೇ ಬದಲಾಯಿಸಿತು. ಅವನು ಬದುಕಿದ್ದಾಗ ಅವನ ಪುಸ್ತಕಗಳನ್ನು ಕೊಳ್ಳುವವರೇ ಇರಲಿಲ್ಲ. ಇಂದು ಅವನ ಕೃತಿಗಳು ಇಪ್ಪತ್ತಕ್ಕೂ ಹೆಚ್ಚು ಭಾಷೆಗಳಿಗೆ ಪರಿವರ್ತನೆಗೊಂಡಿವೆ.

ಥೋರೊನನ್ನು ಅರ್ಥ ಮಾಡಿಕೊಳ್ಳುವುದು ಜನರಿಗೆ ಕಷ್ಟವೇ ಆಗಿತ್ತು. ಅವನ ನಂತರ ಜನ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ನೋಡಿದರೆ ಅವನ ಬಗ್ಗೆ ಎಂತಹ ವಿರೋಧಾಭಿಪ್ರಾಯಗಳು ಇದ್ದವು ಎಂಬುದು ನಿಜಕ್ಕೂ

ಆಧಾರ: ಭವನ್ಸ್ ಜರ್ನಲ್ಲಿನಲ್ಲಿ ಪ್ರಕಟವಾಗಿರುವ ಮ್ಯಾನಿಂಗ್ ಹಾಥ್ರೋನ್‌ರವರ 'ಥೋರೊ, ಎ ಯೂನಿವರ್ಸಲ್ ಸ್ಪಿರಿಟ್' ಎಂಬ ಲೇಖನದ ಅನುವಾದ,

ಅಚ್ಚರಿಯ ಸಂಗತಿ. ಅವನನ್ನು ಹೊಗಳಿ ಅಂತರಿಕ್ಷಕ್ಕೆ ಏರಿಸುವ ಧುರೀಣರೂ ಇದ್ದರು; ಅವನೊಬ್ಬ ಕಪಟಿ ಮತ್ತು ವೇಷಧಾರಿ ಎಂದು ಮೂದಲಿಸುತ್ತಿದ್ದವರೂ ಇದ್ದರು. ಪ್ರಸಿದ್ಧ ಬರಹಗಾರರು ಅವನು ವಿರಾಗಿಯೆಂದೂ ವಿಷಯಾಸಕ್ತನೆಂದೂ ವರ್ಣಿಸಿದರು. ಅವನಲ್ಲಿ ಪ್ರಾಂತೀಯ ಸಂಕುಚಿತ ಭಾವನೆಯಿತ್ತೆಂದು ಕೆಲವರೂ ಅವನಲ್ಲಿ ವಿಶ್ವಮಾನ್ಯ, ಕಲಾತೀತ ಮೌಲ್ಯಗಳು ಇದ್ದುವೆಂದು ಮತ್ತೆ ಕೆಲವರೂ ಅಭಿಪ್ರಾಯಪಡುತ್ತಾರೆ.

ಅಂತಹ ವಿರೋಧಾಭಿಪ್ರಾಯಗಳು ಎಲ್ಲವೂ ಸರಿಯಾಗಿ ಇರಲಾರವು. ಥೋರೋನ ಹತ್ತಿರದ ಕೆಲವು ಗೆಳೆಯರು ಅವನನ್ನು 'ನಿಗೂಢವ್ಯಕ್ತಿ'ಯೆಂದೇ ಬಗೆಯುತ್ತಾರೆ. ಮೃದುತ್ವ, ಸಹನೆ ಮತ್ತು ಅದಮ್ಯ ಶಕ್ತಿಗಳ ಹೊಂದಾಣಿಕೆ ಅವಿರತಶ್ರಮ ಮತ್ತು ಸೋಮಾರಿತನಗಳ ಕಲಬೆರಕೆಯನ್ನು ಅವನಲ್ಲಿ ಕಾಣಬಹುದಾಗಿತ್ತು. ಅವನ ಯಾವುದೇ ಒಂದು ಮುಖವನ್ನು ಪರಿಶೀಲಿಸತೊಡಗಿದರೂ ವಿಚಾರದ ಮತ್ತೊಂದು ತುದಿಯನ್ನು ನಾವು ಕಾಣುತ್ತೇವೆ. ಬೇರೆಯವರಲ್ಲಿ ಅನಿರ್ದಿಷ್ಟವಾದುದು, ಪರಿಗಣಿಸಲಾಗದ್ದು ಥೋರೋನಲ್ಲಿ ಜೀವನ ಮುಖ್ಯ ಗುರಿ ಅಥವಾ ಉದ್ದೇಶವನ್ನು ಮುಟ್ಟುತ್ತವೆ. ಅವನ ಅಭಿಪ್ರಾಯಗಳಲ್ಲಿ ಕೆಲವು ವಿಚಿತ್ರವೂ ಅಲೌಕಿಕವೂ ಆಗಿದ್ದುವೆಂದು ಕಂಡರೂ ಕಾಲಾನುಗತಿಯಲ್ಲಿ ಅವು ಸರಿಯೆಂದು ಜನ ಒಪ್ಪಿಕೊಂಡಿದ್ದಾರೆ.

ಥೋರೋನ ಶಕ್ತಿಯೆಲ್ಲವೂ ಪ್ರಕೃತಿಯಿಂದ ಪಡೆದದ್ದು. ಚಿಕ್ಕಂದಿನಿಂದಲೂ ಮನೆಯಿಂದ ಹೊರಗೆ ಕಾಲ ಕಳೆಯುತ್ತಾ ವಿರಾಮದಿಂದ ಶಾಂತಿಯುತವಾದ ಜೀವನವನ್ನು ನಡೆಸುವುದರಲ್ಲಿ ತುಂಬಾ ಆಸಕ್ತಿ. ಹಣಕ್ಕಾಗಿ ಬಡಬಡಿಸುವ, ಆತುರ ಪಡುವ ಅವನ ಸುತ್ತಣ ಪರಿಸರವನ್ನು ಅವನು ತಿರಸ್ಕರಿಸುತ್ತಿದ್ದ. ಬದಲಾಗುತ್ತಿದ್ದ ಋತುಮಾನಗಳು, ಶಬ್ದವಾಸನೆಗಳು, ವನ್ಯಮೃಗಗಳು ಅವನ ಸೂಕ್ಷ್ಮ ಸ್ವಭಾವದ ಮೇಲೆ ಪ್ರಭಾವ ಬೀರಿದವು. ಸಂತ ಫ್ರಾನ್ಸಿಸ್ಸನಂತೆ ಭೂಮಿ ಆಕಾಶದ ಮೃಗಪಕ್ಷಿಗಳ ದನಿಗೆ ಅವನು ಓಗೊಡುತ್ತಿದ್ದನು. ಅವನ ಸಾನ್ನಿಧ್ಯದಲ್ಲಿ ಪ್ರಾಣಿಗಳು ಸ್ನೇಹದಿಂದ ನಡೆದುಕೊಳ್ಳುತ್ತಿದ್ದವು; ಕುಣಿದು ಕುಪ್ಪಳಿಸಿ ಸ್ವಾಗತಿಸುತ್ತಿದ್ದವು; ಯಾವ ಅಪಾಯವೂ ಇಲ್ಲವೆಂಬ ಧೈರ್ಯದಿಂದ ಮೀನುಗಳು ಅವನ ಕೈಗೆ ಸಿಗುತ್ತಿದ್ದವು.

ಥೋರೋನಿಗೆ ಪ್ರಕೃತಿ ಸಂತಸದ ಮೂಲ ಮಾತ್ರವೇ ಆಗಿರಲಿಲ್ಲ. ಮಾನವನ ಎಲ್ಲ ವಿಧವಾದ ಸಂಕಷ್ಟಗಳನ್ನು ಸಾಂತ್ವನಗೊಳಿಸುವ ಸಾಧನವಾಗಿತ್ತು. ನವನಾಗರಿಕತೆಯ ಗದ್ದಲ ಅವನಿಗೆ ಸಾಕೆನಿಸಿತು. ನಗರವನ್ನು ತ್ಯಜಿಸಿ ಅವನು

ವನಕ್ಕೆ ಹೊರಟುಹೋದ: ಅಲ್ಲಿ ಮರದ ದಿಮ್ಮಿಗಳಿಂದ ಒಂದು ಕುಟೀರವನ್ನು ಕಟ್ಟಿಕೊಂಡ. ಅವನ ಮುಖ್ಯ ಆಹಾರವಾದ ಹುರಳಿಯನ್ನು ಬೆಳೆದುಕೊಂಡ. ಪಟ್ಟಣದ ಸಂಕುಚಿತ ಮತ್ತು ಕೃತಕ ಸಂಪರ್ಕದಿಂದ ವಿಶಾಲವಲಯಕ್ಕೆ ಹೋಗಲು ಅವನ ಅಂತರಾತ್ಮವೂ ಹಾತೊರೆಯುತ್ತಿತ್ತು. ಸ್ನೇಹಿತರನ್ನು ಬಂಧುಗಳನ್ನು ಅವನು ತಿರಸ್ಕರಿಸಿದನು. ಅವನನ್ನು ಸಮಾಜ ವಿರೋಧಿಯೆಂದು ಕೆಲವರು ಕರೆದರು. ಜನ ಸಂಪರ್ಕವನ್ನು ಕಡಿದುಕೊಂಡು ದೂರ ಹೋಗಿ ತನ್ನ ಪಾಡಿಗೆ ತಾನು ಇದ್ದುಬಿಡುವವನನ್ನು 'ಬೈರಾಗಿ' ಎಂದು ಕರೆದುದರಲ್ಲಿ ತಪ್ಪೇನು? ವಾಲ್ಡೆನ್ ಪೌಂಡ್‌ನಲ್ಲಿ ತಾನೇ ನಿರ್ಮಿಸಿಕೊಂಡ ಸ್ವರ್ಗದಲ್ಲಿ ಅವನಿದ್ದ. ಜೀವನವನ್ನಾಗಲೀ ಮಾನವನನ್ನಾಗಲೀ ಅವನು ದ್ವೇಷಿಸುತ್ತಿದ್ದನೆಂದು ಭಾವಿಸಲಾಗದು. ಅವನ ದಿಮ್ಮಿಗಳ ಮನೆ ಪುರಗಡಿಯಿಂದ ಕೇವಲ ಎರಡು ಮೈಲಿ ದೂರವಿತ್ತು. ರೈಲ್ವೆ ಮತ್ತು ಹೆದ್ದಾರಿಗೆ ಹತ್ತಿರವಾಗಿತ್ತು. ಆಗಾಗ್ಗೆ ಗೆಳೆಯರನ್ನು ಭೇಟಿ ಮಾಡಲು ಮಾತುಕತೆಗಾಗಿ ಪಟ್ಟಣಕ್ಕೆ ಹೋಗಿ ಹಿಂದಿರುಗುತ್ತಿದ್ದ.

ಎರಡು ವರ್ಷಗಳ ಕಾಲ ತನಗೆ ಇಷ್ಟ ಬಂದ ಕೆಲಸ ಮಾಡಿದ. ಓದುವುದು, ಬರೆಯುವುದು, ತೋಟದ ಕೆಲಸ ಮಾಡುವುದು ಈಜುವುದು ಮುಂತಾದ ಕೆಲಸಗಳಲ್ಲಿ ಅವನು ನಿಯುಕ್ತನಾಗಿದ್ದ. ಒಳನಾಡಿನಲ್ಲಿ ತಿರುಗಾಡಿದ, ಜೀವನದ ಹಲವು ಮುಖಗಳನ್ನು ಪರಿಚಯ ಮಾಡಿಕೊಂಡ. ಅವನು ಬದುಕಿದ ಮತ್ತು ಮಾಡಿ ತೋರಿಸಿದ ಪ್ರಸಂಗಗಳನ್ನು 'ವಾಲ್ಡೆನ್' ಕೃತಿಯಲ್ಲಿ ವಿವರಿಸಿದ. ದೇವರ ಮಾರ್ಗವನ್ನು ಸೂಚಿಸುವುದು ಮಾತ್ರವೇ ಅಲ್ಲ ಸುಖ ಶಾಂತಿಗಳನ್ನು ತರುವುದು ಎಂದು ಪುಸ್ತಕದ ಉದ್ದೇಶವನ್ನು ಸಾರಿದ.

ತನ್ನ ದುರಾದೃಷ್ಟದ ಕಾಠಿಣ್ಯದಿಂದ ಅತೃಪ್ತಿಗೊಂಡು ಥೋರೊ ಹೀಗೆ ಹೇಳುತ್ತಾನೆ. "ನಾನು ಮುಖ್ಯವಾಗಿ ಜನಸಮುದಾಯವನ್ನು ಕುರಿತು ಮಾತನಾಡುತ್ತೇನೆ. ರಿಕ್ತದೆಸೆಯಲ್ಲಿರುವ ಜನರ ಬಗ್ಗೆ ನಾನು ಯೋಚಿಸುತ್ತೇನೆ. ಐಶ್ವರ್ಯವಂತರಂತೆ ಕಾಣುವ ಜನರು ರಾಶಿ ರಾಶಿ ಹಣವನ್ನು ಸಂಗ್ರಹಿಸಿಕೊಂಡು ಹೇಗೆ ಉಪಯೋಗಿಸಬೇಕೆಂಬುದನ್ನು ತಿಳಿಯದೆ ಚಿನ್ನ ಮತ್ತು ಬೆಳ್ಳಿಯ ಸಂಕೋಲೆಗಳಿಂದ ತಮ್ಮನ್ನು ತಾವೇ ಬಾಧಿಸಿಕೊಂಡಿದ್ದಾರೆ." ಆಸೆ ಮತ್ತು ಯಶಸ್ಸಿನ ಮುನ್ನೋಟದಲ್ಲಿ ತೃಪ್ತಿಯಿರುವವರಿಗೆ 'ವಾಲ್ಡೆನ್' ಏನೂ ತಿಳಿಸುವುದಿಲ್ಲ. ಜೀವನದಲ್ಲಿ ಯಾರು ಹತಾಶರಾಗಿರುತ್ತಾರೋ ಅವರಿಗೆ 'ವಾಲ್ಡೆನ್' ಕ್ರಾಂತಿಯ ಸಂಕೇತವಾಗಿತ್ತು. ಹೃದಯಹೀನ ಮತ್ತು ಅನ್ಯಾಯ ಸ್ವರೂಪದ

ಸಮಾಜದೊಡನೆ ನಿರಂತರವಾಗಿ ಶಾಂತ ರೀತಿಯಲ್ಲಿ ಘರ್ಷಣೆಯನ್ನು ನಡೆಸುವುದು ಅವನ ಗುರಿಯಾಗಿತ್ತು.

ಅಮೆರಿಕೆಯನ್ನು ರಕ್ತದ ಕೆಸರಿನಲ್ಲಿ ತಳ್ಳಿದ ದೀರ್ಘಕಾಲದ ಅಂತರ್ ಯುದ್ಧಕ್ಕೆ ಎಡೆಮಾಡಿದ ಗುಲಾಮಗಿರಿ ಸಮಸ್ಯೆಯ ಬಗ್ಗೆ ಥೋರೋನ ಅಭಿಪ್ರಾಯಗಳು ಖಚಿತವಾಗಿದ್ದವು. "ಗುಲಾಮಗಿರಿ ಅತಿ ಕೆಟ್ಟದ್ದು. ಸಭ್ಯ ಜನರು ಪ್ರತಿಪಾದಿಸುವ ಎಲ್ಲಾ ಒಳ್ಳೆಯದನ್ನು ಅದು ವಿರೋಧಿಸುತ್ತದೆ. ಅದೆಷ್ಟೇ ಕಷ್ಟವಾಗಿರಲಿ ಬೇರುಸಹಿತ ಅದನ್ನು ಕಿತ್ತುಹಾಕಬೇಕು" ಅಷ್ಟು ಕೇವಲ ಬಾಯಿಮಾತಿನ ನುಡಿಗಳಲ್ಲ. ಗುಲಾಮರನ್ನು ಸ್ವಾತಂತ್ರ್ಯದ ಹಾದಿಯಲ್ಲಿ ಮುನ್ನಡೆಸಲು ಸಾಧ್ಯವಾದುದನ್ನೆಲ್ಲಾ ಅವನು ಮಾಡಿದ. ಸಾಮಾಜಿಕ ಕ್ರಾಂತಿ ಹೊರಗಡೆಯ ಶಕ್ತಿಯಿಂದ ಬರತಕ್ಕದ್ದಲ್ಲ. ಅದು ಏನಿದ್ದರೂ ಆಂತರಿಕ ಬದಲಾವಣೆಯಿಂದ ಬರುವಂತದ್ದು. ವ್ಯಕ್ತಿಗಳ ಪ್ರಗತಿಯಲ್ಲಿ ಸಮಾಜದ ಪ್ರಗತಿಯೂ ಅಡಗಿದೆ ಎಂಬುದು ಅವನ ನಂಬಿಕೆ.

ಅಸಹಕಾರ ಚಳುವಳಿಯ ಪ್ರತಿಪಾದಕನೇ ಥೋರೊ. ಅದರ ಪರಿಣಾಮದ ಪ್ರಥಮ ಅನುಭವ ಅವನಿಗಿತ್ತು. ಗುಲಾಮಗಿರಿಯನ್ನು ಆಚರಿಸುತ್ತಿದ್ದ ಸರ್ಕಾರಕ್ಕೆ ತೆರಿಗೆ ಕೊಡಕೂಡದೆಂದು ಪ್ರತಿಭಟಿಸಿದ. ಅದರ ಫಲವಾಗಿ ಸರ್ಕಾರ ಅವನನ್ನು ಬಂಧಿಸಿತು.

ಸೆರೆಮನೆಯಲ್ಲಿ ಪ್ರಸಿದ್ಧ ಸಾಹಿತಿ ಮತ್ತು ವಿಚಾರವಾದಿ ಎಮರ್‌ಸನ್ ಭೇಟಿಯಾದ.

"ನೀನು ಏಕೆ ಇಲ್ಲಿದ್ದೀಯೆ?" ಎಮರ್‌ಸನ್ ಕೇಳಿದ

"ನೀನು ಇಲ್ಲಿ ಏಕಿಲ್ಲವೊ ಅದಕ್ಕಾಗಿ" ಎಂದ ಥೋರೊ. ತನ್ನ ತತ್ವಗಳ ಬಗ್ಗೆ ಅವನಿಗೆ ಅಚಲವಾದ ನಂಬಿಕೆ.

ಅಧಿಕಾರಕ್ಕೆ ಎಂದೂ ಅವನು ಶರಣಾದವನಲ್ಲ. "ಯಾವ ಸರ್ಕಾರವಲ್ಲಿ ಜನರು ತಮ್ಮ ಅಧಿಕಾರವಿದೆಯೆಂದು ಭಾವಿಸುತ್ತಾರೊ ಅದೇ ಅತ್ಯುತ್ತಮ ಸರ್ಕಾರ. ಹಕ್ಕು ಬಾಧ್ಯತೆಗಳನ್ನು ಕಸಿದುಕೊಳ್ಳವಂತೆ ಜನರು ಸದಾ ಎಚ್ಚರದಿಂದ ಇರಬೇಕು. ಇದಕ್ಕೆ ಭಿನ್ನವಾದ ಪರಿಸ್ಥಿತಿಯಲ್ಲಿ ಅಸಹಕಾರ ಚಳವಳಿಯನ್ನು ನಡೆಸುವುದು ಪ್ರತಿಯೊಬ್ಬನ ಕರ್ತವ್ಯ".

ಆಧುನಿಕ ಪ್ರಪಂಚದಲ್ಲಿ ಥೋರೋನ ಪ್ರಭಾವವನ್ನೂ ಗುರುತಿಸಲು ಒಂದು ನಿರ್ದಿಷ್ಟ ಪ್ರಸಂಗವನ್ನು ಹೇಳಲಾಗುತ್ತಿದೆ. ಮಹಾತ್ಮಾ ಗಾಂಧೀಜಿಯವರು ಥೋರೋನ ಅಸಹಕಾರ ಚಳುವಳಿಯಿಂದ (Civil disobedience

movement). ಪ್ರಭಾವಿತರಾದರಂತೆ. ಆಗ ಅವರು ದಕ್ಷಿಣ ಆಫ್ರಿಕೆಯಲ್ಲಿ ಜನರ ಹಕ್ಕುಬಾಧ್ಯತೆಗಳಿಗಾಗಿ ಹೋರಾಡುತ್ತಿದ್ದರು. 'ಸತ್ಯಾಗ್ರಹ' ಎಂಬ ಪದವನ್ನು ಥೋರೊನ ಪ್ರಬಂಧಗಳನ್ನು ಓದಿದ ನಂತರ ರೂಪಿಸಿದರಂತೆ.

ಗಾಂಧೀಜಿಯವರು ಥೋರೋನ ಪ್ರಬಂಧಗಳು ನನಗೆ ತುಂಬಾ ಹಿಡಿಸಿದವು. ಕೆಲವನ್ನು ನಾನು ಅನುಸರಿಸಿದ್ದೇನೆ. ಭಾರತೀಯ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುತ್ತಿರುವ ನನಗೆ ಅಸಹಕಾರ ಚಳುವಳಿ ಸ್ಫೂರ್ತಿ ನೀಡಿದೆ. 'ಸತ್ಯಾಗ್ರಹ' ಎಂಬ ಪದವನ್ನು ನೀಡಲು ನನಗೆ ಸಾಧ್ಯವಾಯಿತು. ಪ್ರಬಂಧದ ಒಂದು ಭಾಗವನ್ನು 'ಇಂಡಿಯನ್ ಒಪೀನಿಯನ್' ಪತ್ರಿಕೆಯಲ್ಲಿ ಭಾಷಾಂತರಿಸಿದೆ." ಎಂದು ತಿಳಿಸಿದ್ದಾರೆ.

ಥೋರೊ ತನ್ನ ಅಭಿಪ್ರಾಯಗಳಿಗೆ ಪೌರಾತ್ಯ ದೇಶಗಳಿಗೆ ಋಣಿಯಾಗಿದ್ದಾನೆ. ಅವನಿಂದಲೇ ಭಾರತ ಸ್ಫೂರ್ತಿ ಪಡೆದದ್ದು ಸಹಜವಾಗಿಯೆ ಇದೆ. 'ಎಲ್ಲ ಧರ್ಮಗಳೂ ತತ್ವಗಳೂ ಒಂದೇ. ಎಲ್ಲವನ್ನೂ ಮೆಚ್ಚುತ್ತೇನೆ. ಹಿಂದೂ ಬೌದ್ಧ ಜೈನ ಧರ್ಮಗಳ ದೈವತ್ವದ ಕಲ್ಪನೆಯನ್ನು ನಾನು ಮೆಚ್ಚುತ್ತೇನೆ" ಎಂದು ಒಮ್ಮೆ ಹೇಳಿದ. ಬೈಬಲ್ಲು ಅವನಿಗೆ ಪೂರ್ಣ ಪರಿಚಯವಿದ್ದರೂ ಅವನು ಪೂರ್ವ ದೇಶದ ಧರ್ಮ ಗ್ರಂಥಗಳನ್ನೇ ಹೆಚ್ಚಾಗಿ ಮೆಚ್ಚಿಕೊಂಡಿರುತ್ತಾನೆ ಎಂಬುದನ್ನು ಅವನ ಗ್ರಂಥಗಳನ್ನು ಓದಿದವರಿಗೆ ಸ್ಪಷ್ಟವಾಗುತ್ತದೆ. "ಯೋಗಾಭ್ಯಾಸವನ್ನು ನಾನು ಮೆಚ್ಚುತ್ತೇನೆ. ಸ್ವಲ್ಪಮಟ್ಟಿಗೆ ನಾನು ಯೋಗಿಯೆ!" ಎನ್ನುತ್ತಾನೆ.

ಥೋರೊ ಪೂರ್ವದಿಂದ ಏನನ್ನು ಪಡೆದನೊ ಅದನ್ನು 'ಅಸಹಕಾರ ರೂಪದಲ್ಲಿ ಹಿಂದಿರುಗಿಸಿದ್ದಾನೆ' ಎಂದು ಕೆಲವು ವಿದ್ವಾಂಸರ ಅಭಿಮತ.

ಯುದ್ಧಕಾಲದಲ್ಲಿ ಅಸಹಕಾರ ತತ್ವ ಇನ್ನೂ ವಿಸ್ತಾರವಾಯಿತು. ನಾಜಿಗಳ ಎದುರು ಫ್ರೆಂಚರು ಅದನ್ನು ಅಸ್ತ್ರವನ್ನಾಗಿ ಉಪಯೋಗಿಸಿದರು.


ಚೀನೀಯರು ಅವನ ಪ್ರಬಂಧಗಳನ್ನು ಭಾಷಾಂತರಿಸಿಕೊಂಡರು. ಇಸ್ರೇಲಿನಲ್ಲಿ ಅವನ ಬಗ್ಗೆ ತೀವ್ರ ಆಸಕ್ತಿ. ಜಪಾನಿನಲ್ಲಿ ಅವನ ಪ್ರಭಾವ ಸಾರ್ವತ್ರಿಕ.

ಅವನು ಬೋಧಿಸಿದ 'ಕಂಟ್ರಿಸ್ಕೂಲ್' ಎಂಬ ಯೋಜನೆ ಜನತಾ ಶಾಲೆಗಳ ಪರಂಪರೆಯಲ್ಲಿ ಮೊದಲನೆಯದು ಎನ್ನಬಹುದು.

ಜನಾನುರಾಗ ಥೋರೊಗೆ ನಿಧಾನವಾಗಿ ಬಂತು. ಅವನು ಎಮರ್‌ಸನ್ನನ ಮೇಲೆ ಜೋತುಬಿದ್ದಿದ್ದಾನೆ ಎಂದು ಟೀಕಿಸುತ್ತಿದ್ದವರು ತಮ್ಮ ಅಭಿಪ್ರಾಯವನ್ನು ಬದಲಿಸಿಕೊಂಡರು. ಅವನ ಕೀರ್ತಿ ಗೆಳೆಯರಲ್ಲಿ ಭೀತಿಯನ್ನು ತಂದಿತು.

ಆದಕ್ಕೆ ಕಾರಣ ಅವನ ವಿಚಾರಶೀಲತೆ. ಅತಿ ಸಣ್ಣ ವಿಷಯಗಳನ್ನು ವಿಶ್ವದ ವೈಶಾಲ್ಯತೆಯ ಹಿನ್ನೆಲೆಯಲ್ಲಿ ಕಾಣುವ ಹಿರಿಮೆ ಅವನಲ್ಲಿತ್ತು. ಸತ್ಯವನ್ನು ಮೆಚ್ಚಿಕೊಳ್ಳುವ ತೆರೆದ ಮನಸ್ಸು ಹೃದಯ ಸಿರಿವಂತಿಕೆಗಳು ಅವನಲ್ಲಿದ್ದುವು. ಅವುಗಳಿಂದ ಪ್ರಭಾವಿತರಾದ ಅಮೆರಿಕನರು ಮಹಾತ್ಮಾ ಗಾಂಧಿಯವರ ತತ್ವಗಳನ್ನು ಮೆಚ್ಚಿಕೊಂಡದ್ದು ಸಹಜವೇ ಆಗಿದೆ.

ಎಸ್. ರಜತಾದ್ರಿ



ಅವರವರು ಮಾಡಿದ ಕರ್ಮಫಲವನ್ನು ಅವರವರೇ ಅನುಭವಿಸಬೇಕು.

—ಮಹಾಭಾರತ

ಮೂರ್ಖರ ಸಹವಾಸವು ಅವಿವೇಕ ಪರಂಪರೆಗೂ ಸಜ್ಜನರ ಸಹವಾಸವು ಧರ್ಮಸಾಧನೆಗೂ ಕಾರಣವಾಗುತ್ತದೆ.

—ವಾಲ್ಮೀಕಿ

ದುರಭಿಮಾನಗ್ರಸ್ತವಾದ ಮನಸ್ಸುಳ್ಳವರಿಗೆ ಹಿತೋಪದೇಶ ಮಾಡಿದರೆ ಕಮಲದ ಮೇಲೆ ಬಿದ್ದ ಬೆಳದಿಂಗಳಿನಂತೆ ಅದು ವ್ಯರ್ಥವಾಗುವುದು.

—ಭಾರವಿ

ನಿನಗೆ ಯಾರೂ ಕೇಡು ಮಾಡಬಾರದೆಂದು ಬಯಸಿದರೆ, ನೀನೂ ಯಾರಿಗೂ ಕೇಡು ಮಾಡಬೇಡ.

—ಎಪಿಕ್ಯೂರಸ್

ನಮ್ಮ ಭೂಮಿ-೪

ಸವೆತದ ಸತತಕ್ರಿಯೆ: ಭೂಮಿಯ ಮೇಲ್ಮೈಯನ್ನು ಪ್ರಕೃತಿಯ ಹಲವು ರೀತಿಯ ಬಲಗಳು ಬದಲಿಸುತ್ತಲೇ ಇರುತ್ತವೆ. ಮಳೆ, ನೀರು, ಗಾಳಿ, ಬಿಸಿಲು, ಹಿಮನದಿ ಇವೆಲ್ಲ ಭೂಮಿಯ ಮುಖವನ್ನು ಪರಿವರ್ತಿಸುವ ಸತತ ಕ್ರಿಯೆಯಲ್ಲಿ ಭಾಗಿಗಳು.

ಮಳೆ ಬರುತ್ತಿರುವಾಗ ಒಮ್ಮೆ ನೆಲವನ್ನು ನೋಡು. ಹೇಗೆ ಹೇಗೋ ದಾರಿ ಮಾಡಿಕೊಂಡು ನೀರು ಹರಿಯುತ್ತದೆ. ಆಕಾಶದಿಂದ ಬೀಳುವ ಮಳೆಹನಿಗೆ ಬಣ್ಣವಿಲ್ಲ. ಆದರೆ ನೆಲದಲ್ಲಿ ಹರಿಯುವ ನೀರಿಗೆ ಮಣ್ಣಿನ ಬಣ್ಣ. ಮಣ್ಣನ್ನು ಕೊಚ್ಚಿಕೊಂಡು ಹರಿಯುವ ನೀರಿಗೆ ಇದು ಸಹಜವೇ ಸರಿ! ಮಣ್ಣನ್ನಷ್ಟೇ ಏಕೆ, ವೇಗ ಹೆಚ್ಚಿದರೆ ಅದು ಕಲ್ಲನ್ನೂ ಉರುಳಿಸಿಕೊಂಡು ಹೋಗಬಹುದು. ಇಳಿಜಾರಿನಲ್ಲಿ ಅವರ ಕೆಲಸ ಇನ್ನೂ ಸುಲಭ. ಇಂತಹ ಮಣ್ಣು, ಕಲ್ಲುಗಳ ಸಾಗಾಟದ ಒಟ್ಟು ಪರಿಣಾಮ–ನೆಲದ ಸವೆತ. ಗುಡ್ಡಬೆಟ್ಟಗಳಲ್ಲಿ ಹುಟ್ಟಿದ ತೊರೆಗಳೂ ಹೊಳೆಗಳೂ ಕೂಡಿ ಆಗುವ ನದಿಗಳದ್ದು ಇದರಲ್ಲಿ ಮಹತ್ವದ ಪಾತ್ರ. ಗಂಗಾನದಿಯೊಂದೇ ವರ್ಷಂಪ್ರತಿ ಸುಮಾರು ೧೭.೭ ಕೋಟಿ ಘನ ಮೀಟರಿನಷ್ಟು ಮಣ್ಣನ್ನು ಬಂಗಾಳ ಕೊಲ್ಲಿಗೆ ಒಯ್ಯುವುದು. ಸವೆತದಿಂದ ಕಾಲಾಂತರದಲ್ಲಿ ಭೂಮಿಯ ಮೇಲ್ಮೈಯ ಮೇಲಾಗಬಲ್ಲ ದೊಡ್ಡ ಬದಲಾವಣೆಗೆ ದೃಷ್ಟಾಂತ––ಕೊಲರಾಡೊ ನದಿಯು ನೆಲವನ್ನು ಕೊರೆದು ಉಂಟುಮಾಡಿದ ಮಹಾಕಮರಿ. ನದಿಗಳ ವೇಗ ಹೆಚ್ಚಿದಾಗ, ಅವುಗಳಲ್ಲಿ ನೀರಿನ ಮಟ್ಟ ಏರಿದಾಗ ಸವೆತದ ದರವೂ ಹೆಚ್ಚು. ಮಳೆಗಾಲದ ನಾಲ್ಕು ತಿಂಗಳುಗಳಲ್ಲಿ ಗಂಗಾನದಿ ಸಾಗಿಸುವ ಮಡ್ಡಿ ವರ್ಷದ ಉಳಿದ ಎಂಟು ತಿಂಗಳುಗಳಲ್ಲಿ ಸಾಗಿಸುವುದಕ್ಕಿಂತ ೨೪ ಮಡ್ಡಿ ಹೆಚ್ಚು. ಪ್ರವಾಹವು ನಿಧಾನವಾದೆಡೆ ಮಡ್ಡಿ, ಮರಳು, ಕಲ್ಲುಗಳು ಸಂಚಯವಾಗುತ್ತವೆ. ನದೀ ತಳದಲ್ಲಿ ಮೆದುಶಿಲೆಯ ಪದರಗಳಿದ್ದರೆ ಅವನ್ನು ಬೇಗನೆ ಸವೆಸಿ ಗಟ್ಟಿ ಶಿಲೆಯ ಪದರಗಳ ಮೇಲೆ ನೀರು ಹರಿಯುತ್ತದೆ. ಇಲ್ಲಿಂದ ಕೆಳಕ್ಕೆ ಧುಮುಕುವ ನೀರು ಜಲಪಾತದ ಭವ್ಯ ದೃಶ್ಯ ನೀಡುವುದು. ಮುಂದೆ ಗಟ್ಟಿ ಶಿಲೆಯ ಪದರಗಳೂ ಸವೆದಾಗ ಈ ದೃಶ್ಯ ಮಾಯವಾಗುವುದು.

ಮಳೆಯ ನೀರೆಲ್ಲ ನದಿಗಳಲ್ಲಿ ಹರಿಯುವುದಿಲ್ಲ. ಸ್ವಲ್ಪ ಭಾಗ ನೆಲದಲ್ಲಿ ಇಂಗಿ ಅಂತರ್ಜಲವಾಗುತ್ತದೆ. ಭಾವಿ, ಚಿಲುಮೆಗಳಿಂದ ನಾವು ಪಡೆಯುವ ಸಿಹಿ ನೀರು ಹೀಗೆ ಇಂಗಿಹೋದ ಅಂತರ್ಜಲವೇ.

ಇಂಗಿದ ನೀರು ನೆಲದ ಬಿರುಕಿನಲ್ಲಿ ಸಾಗಿ ಮಾಟ ತೋಡಬಹುದು; ನೆಲದ

ಅಡಿಭಾಗವನ್ನು ಕೊರೆದು ಗುಹೆಗಳನ್ನು ರಚಿಸಬಹುದು. ಹರಿವಿನಿಂದ ಉಂಟಾಗುವ ಘರ್ಷಣೆ ಮಾತ್ರವಲ್ಲದೆ ಶಿಲೆಗಳ ಮೇಲೆ ನೀರಿನ ರಾಸಾಯನಿಕ ವರ್ತನೆಯೂ ಕೊರತೆಯನ್ನು ಹೆಚ್ಚಿಸುವುದು.

ನೆಲದೊಳಗಿನ ಚತುರಶಿಲ್ಪಿ : ಸುಣ್ಣಕಲ್ಲಿರುವ ಪ್ರದೇಶಗಳಲ್ಲಿ ಅಂತರ್ಜಲದ ಹರಿವಿನಿಂದ ಆಗುವ ಪರಿಣಾಮ ವಿಚಿತ್ರ. ನೀರಿನಲ್ಲಿ ವಾತಾವರಣದ ಕಾರ್ಬನ್‌ಡಯಾಕ್ಸೈಡ್ ವಿಲೀನವಾಗುವುದರಿಂದ ಕಾರ್ಬಾಲಿಕ್ ಆಮ್ಲ ಸುಣ್ಣಕಲ್ಲಿನೊಂದಿಗೆ ವರ್ತಿಸುವಾಗ ಸುಲಭದಲ್ಲಿ ಕರಗುವ ಕ್ಯಾಲ್ಸಿಯಂ ಬೈಕಾರ್ಬೊನೇಟ್ ಉಂಟಾಗುವುದು. ಹೀಗೆ ಸುಣ್ಣಕಲ್ಲನ್ನು ಕರಗಿಸುವ ಶಕ್ತಿ ನೀರಿಗಿದೆ. ಇದೇ ನೀರು ಮತ್ತೆ ಆವಿಯಾದಾಗ ಕಾರ್ಬನ್ ಡಯಾಕ್ಸೈಡ್ ಕೂಡ ಬೇರೆಯಾಗಿ ಕಾರ್ಬೊನೇಟ್ ಮತ್ತೆ ಸಂಚಯವಾಗುತ್ತದೆ. ಗುಹೆಗಳ ಮಾಡು ಮತ್ತು ಗೋಡೆಗಳಿಂದ ಸೋರುವ ನೀರು ಕೆಲವೆಡೆ ತೊಟ್ಟಿಕ್ಕುತ್ತ ಆವಿಯಾಗುವಾಗ ಕ್ಯಾಲ್ಸಿಯಂ ಕಾರ್ಬೊನೇಟ್ ಸೂಜಿಗಟ್ಟುತ್ತದೆ. ಅಲ್ಲಲ್ಲಿ ಮೊನಚು ಬೀಳಲುಗಳಂತೆ ನೇತುಬಿದ್ದ ಈ ರಚನೆಗಳನ್ನು ತೂಗುದೊಂಗಲುಗಳೆಂದು ಕರೆಯುವರು. ತೊಟ್ಟಿಕ್ಕಿದ ನೀರು ಗುಹೆಯ ತಳಕ್ಕೆ ಬಿದ್ದು ಆವಿಯಾದಂತೆ ಮೊನಚು ತಲೆಯ ಸ್ತಂಭಗಳು ಅಲ್ಲಲ್ಲಿ ರೂಪು ತಾಳುತ್ತವೆ. ಇವು ನೆಲದೊಂಗಲುಗಳು. ಹುಲ್ಲಿನಂತೆ, ತಂತುಗಳಂತೆ ತೋರುವ ವಿಚಿತ್ರ ಆಕೃತಿಯ ತೂಗುದೊಂಗಲುಗಳಿವೆ. ಹೂವುಗಳಂತೆ, ಅಟ್ಟಿ ಇಟ್ಟ ಬಿಲ್ಲೆಗಳಂತೆ ಕಾಣುವ ನೆಲದೊಂಗಲುಗಳಿವೆ. ಇಂತಹ ಗವಿಯೊಳಗೆ ಹೊಕ್ಕು ಬೆಳಕು ಚೆಲ್ಲಿದೆವೆಂದರೆ ತೊಂಗಲುಗಳಿಂದ ಪ್ರತಿಫಲಿತವಾದ ಅಸಂಖ್ಯಾತ ಕಿರಣಗಳಿಂದ ಅಂತರ್ಜಲ ರಚಿಸಿದ ಸೊಬಗಿನ ಲೋಕವೇ ಪ್ರತ್ಯಕ್ಷವಾಗುವುದು.

ನೆಲದ ಬಿರುಕಿನಿಂದ ಒಳಗಿಳಿದ ನೀರಹನಿಗಳು ಕೂಡಿ ಭೂಗತಹಳ್ಳ ಮತ್ತು ನದಿಗಳಾಗುವುದುಂಟು. ಭೂಗತ ನದಿಗಳು ಬತ್ತಿಹೋದಾಗ ತೆರವಾದ ಗುಹೆಗಳು ಮುಂದೆ ಪ್ರಾಣಿಗಳಿಗೂ ಮನುಷ್ಯರಿಗೂ ವಾಸಸ್ಥಾನಗಳಾಗುವುದುಂಟು.

ನೀರು ಕೊರೆದ ಗುಹೆಗಳು ಭೂಮಿಯಾದ್ಯಂತ ಇವೆ. ಅಮೇರಿಕದ ಕೆಂಟಕಿಯಲ್ಲಿರುವ ಮ್ಯಾಮತ್ ಗುಹೆ ಇವುಗಳಲ್ಲೆಲ್ಲ ದೊಡ್ಡದು. ಚಕ್ರವ್ಯೂಹದಂತೆ ಬಳಸುಬಳಸಾಗಿರುವ ಈ ಗುಹೆ ೨೫೦ ಕಿ.ಮಿ. ಗಿಂತಲೂ ಹೆಚ್ಚು ಉದ್ದವಿದೆ. ಇಷ್ಟೂ ಸುಮಾರು ೧೩ ಚದರ ಕಿ.ಮೀ. ವಿಸ್ತಾರದಲ್ಲಿ! ನಮ್ಮ ದೇಶದ ಮಧ್ಯಪ್ರದೇಶದಲ್ಲಿ ಕೆಲವು ಗುಹೆಗಳಿವೆ. ಪ್ರಾಕೃತಿಕ ಗುಹೆಗಳನ್ನೇ ವಿಸ್ತರಿಸಿ ಮಾಡಿದ ಗೋಡೆಗಳಲ್ಲಿ ಅಜಂತ, ಎಲ್ಲೋರದ ಖ್ಯಾತ ಚಿತ್ರಗಳನ್ನು ಬರೆದಿದ್ದಾರೆ.

ಶಿಥಿಲವಾಗುವ, ಕುಸಿಯುವ ಶಿಲೆ: ಬೇಸಿಗೆಯ ನಡುಹಗಲಲ್ಲಿ ಕಗ್ಗಲ್ಲನ್ನು ಮುಟ್ಟಿನೋಡು. ತುಂಬ ಬಿಸಿಯಾಗಿರುತ್ತದೆ. ಸೂರ್ಯ ಕಂತಿದ ಮೇಲೆ ಅದು ತಣಿಯುತ್ತದೆ. ಬಿಸಿಯಾದಾಗ ವಿಕಾಸಗೊಂಡ ಶಿಲೆ ತಣಿಯುವಾಗ ಸಂಕೋಚಗೊಳ್ಳುವುದು. ಈ ಕ್ರಿಯೆ ಅನವರತ ನಡೆದಂತೆ ಶಿಲಾಕಣಗಳ ಬಂಧ ಸಡಿಲವಾಗಿ ಶಿಲೆ ಒಡೆಯುತ್ತದೆ.

ಶಿಲೆಗಳ ಬಿರುಕುಗಳಲ್ಲಿ ನೀರು ಸೇರಿ ಚಳಿಗೆ ಗಡ್ಡೆಕಟ್ಟಿದರೆ ಹಿಗ್ಗಿ ವಿಶೇಷ ಒತ್ತಡ ಹೇರುತ್ತದೆ. ಹೀಗೂ ಶಿಲೆ ಒಡೆಯುವುದುಂಟು.

ಭೂಮಿಯ ಮೇಲೆ ಸಸ್ಯಗಳು ಬೆಳೆಯತೊಡಗಿದಂದಿನಿಂದ ಶಿಲೆಗಳು ಒಡೆದು ಶಿಥಿಲವಾಗುವ ಕ್ರಿಯೆ ಕ್ಷಿಪ್ರವಾಯಿತು. ಬಂಡೆಯಲ್ಲಿ ಸೂಕ್ಷ್ಮ ಎಡೆಯಿದ್ದು ನೀರಿನ ಪಸೆಯಿದ್ದರೆ ಸಾಕು, ಗಾಳಿ ಹೊತ್ತು ತಂದ ಬೀಜದಿಂದ ಹುಲ್ಲೋ ಗಿಡವೋ ಹುಟ್ಟಿ ಬೇರು ಬಿಡುವುದಿಲ್ಲ. ಬೆಳೆದಂತೆ ದಪ್ಪವಾಗುತ್ತ ಹೋಗುವ ಬೇರುಗಳು ಶಿಲೆಯ ಬಿರುಕನ್ನು ಹೆಚ್ಚಿಸುತ್ತವೆ.

ಶಿಥಿಲವಾದ ಶಿಲೆ ಮಣ್ಣಿಗೆ ಮೂಲ. ಶಿಲಾಕಣಗಳು, ಸಸ್ಯ–ಪ್ರಾಣಿ, ಪದಾರ್ಥಗಳು, ನೀರು ಅನಿಲಗಳಲ್ಲಿ ಕೂಡಿ ಭೂಮಿಯಲ್ಲಿ ಮಣ್ಣಿನ ಪದರ ಉಂಟಾಗಿದೆ.

ಗಾಳಿಯ ಕೊರೆತ: ಗಾಳಿಯಲ್ಲಿ ಅನೇಕ ಅನಿಲಗಳಿವೆ. ಅವುಗಳಲ್ಲಿ ಕೆಲವು ರಾಸಾಯನಿಕವಾಗಿ ವರ್ತಿಸಿ ಶಿಲೆಗಳನ್ನು ಕೊರೆಯುತ್ತವೆ. ತೈಲ ಸಂಸ್ಕರಣಾಗಾರ ಇಲ್ಲವೇ ಇತರ ರಾಸಾಯನಿಕ ಸ್ಥಾವರಗಳ ಸುತ್ತಲಿನ ವಾತಾವರಣದಲ್ಲಿ ಗಾಳಿಯ ಈ ಕ್ರಿಯೆ ಕಾಲಾಂತರದಲ್ಲಿ ಹೆಚ್ಚು ಸ್ಪಷ್ಟವಾಗುತ್ತದೆ. ಗಿಡಮರಗಳಿಲ್ಲದ ಒಣನೆಲದ ಮೇಲೆ ಬೀಸುವ ಗಾಳಿ ಮರಳು, ದೂಳು ಕಣಗಳನ್ನೆಬ್ಬಿಸಿ ಹೊತ್ತೊಯ್ದು ಎದುರಾದ ಶಿಲೆಗಳಿಗೆ ಬಡಿಯುವುದು. ಶಿಲೆಯ ಮೃದು ಭಾಗಗಳು ಬೇಗನೆ ಸವೆಯುತ್ತವೆ. ಹೀಗೆ ಸವೆತಕ್ಕೊಳಗಾದ ಶಿಲೆಗಳ ಗಟ್ಟಿ ಭಾಗಗಳು ಸೂಜಿ, ಸ್ತಂಭ, ಗೋಲ, ನಾಯಿಕೊಡೆಗಳಂಥ ವಿಚಿತ್ರ ಆಕಾರಗಳಿಂದ ಬೋಳು ನೆಲದಲ್ಲಿ ಎದ್ದು ನಿಲ್ಲುವವು. ಪ್ರಾಚೀನ ಈಜಿಪ್ಟಿನ ಜನ ಕಟ್ಟಿದ ಸ್ಫಿಂಕ್ಸ್‌ನಂಥ ಸ್ಮಾರಕಗಳೂ ಗಾಳಿಯ ಕೊರೆತಕ್ಕೆ ಈಡಾಗಿವೆ. 'ಶಿಲಾಬರಹ'ವೂ ಈ ಭೂಮಿಯಲ್ಲಿ ಶಾಶ್ವತವಲ್ಲ!

ಹಿಮನದಿಯ ಶಕ್ತಿ: ಎತ್ತರಕ್ಕೆ ಹೋದಂತೆ ವಾತಾವರಣದ ಉಷ್ಣತೆ ಕಡಿಮೆ. ನೀರಾವಿಯು ಮಳೆಹನಿ ಅಥವಾ ಹಿಮವಾಗಿ ಬೀಳುತ್ತದೆ. ಆದ್ದರಿಂದಲೇ ಅತ್ಯುನ್ನತ ಪರ್ವತ ಶಿಖರಗಳಲ್ಲಿ ಹಿಮ ಹರಡುವುದು. ಸೂರ್ಯನ

ಬಿಸಿಲಿಗೆ ಕರಗುವ ಪ್ರಮಾಣಕ್ಕಿಂತ ಸಂಚಯವಾಗುವ ಹಿಮ ಹೆಚ್ಚಿದಂತೆ ಹಿಮಹಾಸು ಹೆಚ್ಚು ದಪ್ಪವೂ ವಿಸ್ತಾರವೂ ಆಗುವುದು. ಕೆಳಗಿನ ಹಿಮಪದರಗಳು ಒತ್ತಡಕ್ಕೊಳಗಾಗಿ ಮಂಜುಗಡ್ಡೆಯಾಗುವವು. ಉತ್ತುಂಗ ಶಿಖರಗಳ ಮೇಲೆ ಸಂಗ್ರಹವಾದ ಮಂಜುಗಡ್ಡೆಯ ರಾಶಿ ತನ್ನ ಭಾರದಿಂದಲೇ ಕೆಳಗೆ ಚಲಿಸುತ್ತದೆ; ಹಿಮನದಿಯಾಗುತ್ತದೆ. ಹಿಂದೆ ಹಿಮಯುಗದಲ್ಲಿ ಎರಡು ಕೋಟಿ ಚದರ ಕಿ. ಮೀ. ವಿಸ್ತಾರಕ್ಕೂ ಮಂಜುಗಡ್ಡೆ ಹರಡಿದ್ದುಂಟು. ಮುಂದುವರಿಯುವ ಹಿಮನದಿ ಅರಣ್ಯಗಳನ್ನು ಕೆಡವುತ್ತ, ನೆಲವನ್ನು ಕೀಸುತ್ತ ಗಿರಿಶಿಖರಗಳನ್ನು ನಯಮಾಡುತ್ತದೆ; ಕಣಿವೆಗಳನ್ನು ಕೆತ್ತುತ್ತದೆ; ದೈತ್ಯ ಬಂಡೆಗಳನ್ನು ನೂರಾರು ಕಿ. ಮೀ. ದೂರ ಸಾಗಿಸುತ್ತದೆ. ಆಲ್ಪ್ಸ್‌ನ ಹಿಮನದಿಗಳಿಗೆ ಕೆಲವು ಮೀಟರು ತೆವಳಲು ವರ್ಷಾವಧಿ ಬೇಕು. ಗ್ರೀನ್‌ಲೆಂಡ್, ಅಂಟಾರ್ಟಿಕದ ಹಿಮನದಿಗಳು ಒಂದು ದಿನದಲ್ಲೇ ಕೆಲವು ಮೀಟರು ದೂರ ಚಲಿಸಬಲ್ಲವು.

ಕುಲುಕಾಟ–ಏರುತಗ್ಗು : ಭೂಮಿಯ ಮೈಯನ್ನು ಸವೆಸಿ ಸಮತಟ್ಟು ಮಾಡುವ ಕೆಲಸವಷ್ಟೇ ಆದಿಯಿಂದ ನಡೆದು ಬಂದುದಾಗಿದ್ದರೆ ಏರು–ತಗ್ಗುಗಳಾಗಲೀ ನದಿ–ಸರೋವರಗಳಾಗಲೀ ಇಂದು ಇರುತ್ತಿರಲಿಲ್ಲ. ಇದಕ್ಕೆ ವಿರುದ್ಧವಾದ, ಎತ್ತರ–ತಗ್ಗುಗಳನ್ನು ಉಳಿಸಿಕೊಳ್ಳುವ ಬಲಗಳೂ ಸದಾ ಕಾರ್ಯಶೀಲವಾಗಿರುತ್ತವೆ. ಭೂಮಿಯ ಚಿಪ್ಪೇ ಬಾಯಿಬಿಟ್ಟು ತಪ್ತ ಶಿಲಾರಸವನ್ನು ಉಗುಳುತ್ತ ಅಗ್ನಿಶಿಲೆಗಳ ಪರ್ವತಗಳು ಉಂಟಾಗುವುದು. ಭೂಮಿಯ ಚಿಪ್ಪಿನಲ್ಲಿ ಉಂಟಾಗುವ ಅದುಮು ಬಲಗಳಿಂದ ಮೇಲ್ಮೈ ಮುದುಡಿ ಮಡಿಕೆ ಬೀಳುವುದು. ಶಿಲಾಸ್ತರಗಳು ಕುಸಿದು ಸ್ತರಭಂಗ ಉಂಟಾಗುವುದು. ಭೂಮಿಯ ವಿಶಾಲ ಪ್ರದೇಶವೇ ಮೇಲಕ್ಕೆ ತಳ್ಳಲ್ಪಡುವುದುಂಟು. ಇಲ್ಲವೇ ಕೆಳಕ್ಕೆ ಎಳೆಯಲ್ಪಡುವುದುಂಟು. ಸಮುದ್ರ ತಳದ ಮೇಲೆ ಎತ್ತಲ್ಪಟ್ಟಾಗ ಅಲ್ಲಿ ಸಂಚಯಿಸಿದ ಮಡ್ಡಿಯಿಂದ ಉಂಟಾದ ಜಲಜಶಿಲೆಗಳೂ ಮೇಲೆ ಬರುತ್ತವೆ. ಇಂಥ ಜಲಜಶಿಲೆಗಳ ಅನೇಕ ಪದರಗಳನ್ನು ಕೊಲರಾಡೊ ನದಿ ಉಂಟುಮಾಡಿದ ಮಹಾ ಕಮರಿಯಲ್ಲಿ ಕಾಣಬಹುದು.

(ಸಶೇಷ)

ಅಡ್ಯನಡ್ಕ ಕೃಷ್ಣಭಟ್ಟ

ಚರಿತ್ರೆಯ ಪ್ರಯೋಜನಗಳು ಎರಡು; ಒಂದು ಬೌದ್ಧಿಕ ಸಂತೋಷ; ಇನ್ನೊಂದು ನೈತಿಕ ದುಃಖ. —ಎಮರಸನ್

ಜಲಮೂಲದ ರೋಗಗಳು

ಮಾನವನ ಮೂಲಭೂತ ಆಗತ್ಯಗಳಲ್ಲಿ ನೀರೂ ಒಂದು. ವಾಯು ಇಲ್ಲದೆ ಮಾನವ ಹೇಗೆ ಬದುಕಲಾರನೋ ಹಾಗೆಯೇ ನೀರಿಲ್ಲದೆಯೂ ಬದುಕಲಾರ. ನೀರಿಲ್ಲದೆ ಮರಳುಗಾಡಿನಲ್ಲಿ ಪರಿತಪಿಸಿ ಕೊನೆಯುಸಿರೆಳೆದ ಅಲೆಕ್ಸಾಂಡರನ ಕಥೆ ಯಾರಿಗೆ ತಾನೆ ಗೊತ್ತಿಲ್ಲ? ಒಂದು ದಿವಸ ನಲ್ಲಿಯಲ್ಲಿ ನೀರು ಬರದೇ ಹೋದರೆ ನಗರವಾಸಿಗಳು ಅನುಭವಿಸುವ ಕಷ್ಟ ಎಷ್ಟೆಂಬುದನ್ನು ವಿವರಿಸ ಬೇಕಾಗಿಲ್ಲ. ಮಾನವನ ಬಾಳಿಗೆ ಪೋಷಕವಾಗಿ, ಪೂರಕವಾಗಿ ಇರುವ ಅಂಶ ಗಳಲ್ಲಿ ನೀರು ತುಂಬ ಪ್ರಮುಖವಾದದು.

ವಾಸ್ತವವಾಗಿ, ಜೀವದ ಉಗಮ ಆಗಿರುವುದೇ ನೀರಿನಲ್ಲಿ. ನಮ್ಮ ದೇಹದ ಶೇ. ೭೦ರಷ್ಟು ಭಾಗ ನೀರಿನಿಂದಲೇ ಕೂಡಿದೆ. ಹೀಗಾಗಿ, ನೀರು ದೇಹದ ಅತ್ಯಗತ್ಯ ಅಂಶ. ಆದ್ದರಿಂದಲೇ, ಜೀವಿಯನ್ನು ರೂಪಿಸುವ 'ಪಂಚಭೂತ'ಗಳಲ್ಲಿ ನೀರೂ ಒಂದೆಂದು ನಮ್ಮ ಪ್ರಾಚೀನರು ಉದ್ಘೋಷಿಸಿದ್ದಾರೆ. ಇದರ ಮಹತ್ವ ವನ್ನು ಬಗೆಬಗೆಯಾಗಿ ಹಾಡಿ ಹೊಗಳಿದ್ದಾರೆ. ಋಗ್ವೇದದ ಋಷಿಯಂತೂ "ಅಪ್ಸು ಅಂತರಂ ಅಮೃತಂ", "ಅಪ್ಸು ಭೇಷಜಂ"—ಅಂದರೆ, "ನೀರಿನಲ್ಲಿ ಅಮೃತವಿದೆ", "ನೀರಿನಲ್ಲಿ ವ್ಯಾಧಿಗಳನ್ನು ಗುಣಪಡಿಸುವ ಔಷಧವಿದೆ"—ಎಂದು ಸಾರಿ ಹೇಳಿದ್ದಾನೆ. ಅಷ್ಟೇ ಅಲ್ಲ, ನೀರು "ಸಮಸ್ತ ದೇವತಾಸ್ವರೂಪ" ವೆಂದೂ ಸಾರಿದ್ದಾನೆ.

ವಾಯುಮಾಲಿನ್ಯ ಮತ್ತು ಶಬ್ದಮಾಲಿನ್ಯಗಳಂತೆಯೇ ಜಲಮಾಲಿನ್ಯವೂ ವೈಜ್ಞಾನಿಕ ಪ್ರಗತಿಯ ಅಭಿಶಾಪಗಳಲ್ಲಿ ಒಂದಾಗಿದೆ. ಜಲಮಾಲಿನ್ಯದಿಂದ ಮಾನವರಿರಲಿ, ಜಲಚರಗಳೂ ಬಾಳಲಾರದಂಥ ಸ್ಥಿತಿ ಏರ್ಪಟ್ಟಿದೆ. ಇದನ್ನು ಮನಗಂಡ ವಿಜ್ಞಾನಿಗಳು ಜಲಮಾಲಿನ್ಯವನ್ನು ತಡೆಗಟ್ಟಿ ಸಾಗರಭಾಗಗಳು ಮತ್ತೆ ಜಲಚರಯೋಗ್ಯವಾಗುವಂತೆ ಮಾಡುವತ್ತ ಗಮನಹರಿಸಿದ್ದಾರೆ. ಮೈಸೂರಿನ ಸುತ್ತಮುತ್ತಲೂ ಇಂಥದೇ ಪರಿಸ್ಥಿತಿ ಏರ್ಪಡುತ್ತಿದೆ ಎಂಬುದನ್ನು ನಮ್ಮ ತರುಣ ಸಂಶೋಧಕರೊಬ್ಬರು ಬಹಿರಂಗಪಡಿಸಿದ್ದಾರೆ. ಶುದ್ಧವಾದ ನೀರು ಮಾನವನ ಆರೋಗ್ಯಕ್ಕೆ ಕಾರಣವಾಗಿರುವಂತೆಯೇ, ಮಲಿನವಾದ ನೀರು ಅವನ ಅನಾರೋಗ್ಯಕ್ಕೆ ಕಾರಣವಾಗಿರುತ್ತದೆ. ಹೀಗೆ ಮಲಿನವಾದ ನೀರಿ ನಿಂದ ಉಂಟಾಗುವಂಥ ರೋಗಗಳಿಗೆ 'ಜಲಮೂಲದ ರೋಗಗಳು' ಎಂದು ಹೆಸರು. ಸುರಕ್ಷಿತವಾದ ಅಥವಾ ಪರಿಶುದ್ಧವಾದ ನೀರಿನ ಅಭಾವವೇ ವಾಸ್ತವ ವಾಗಿ ಅನೇಕ ಅನಭಿವೃದ್ಧ ರಾಷ್ಟ್ರಗಳಲ್ಲಿಯ ಅನಾರೋಗ್ಯಕ್ಕೆ ಬಲುಮಟ್ಟಿಗೆ ಕಾರಣ. ನಮ್ಮ ದೇಶದಲ್ಲಿಯೂ ಲಕ್ಷಾಂತರ ಜನರಿಗೆ ಸುರಕ್ಷಿತವಾದ ನೀರನ್ನು

ಒದಗಿಸುವಂಥ ವ್ಯವಸ್ಥೆ ಇಲ್ಲ. ಆದ್ದರಿಂದ, ಇಂಥ ನೀರು ಸರಬರಾಜು ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಅಗತ್ಯ. ಇದಕ್ಕಾಗಿ ಖರ್ಚು ಮಾಡುವ ಹಣ ಜನಸಮುದಾಯದ ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಅಪಾರ ಮಹತ್ವದ್ದಾಗುತ್ತದೆ. ಅಪಾರ ಲಾಭವನ್ನೂ ನೀಡುತ್ತದೆ.

ಪರಿಶುದ್ಧವಾದ ಅಥವಾ ಸುರಕ್ಷಿತವಾದ ನೀರು ಎಂದರೆ ಏನು ಎಂಬುದನ್ನು ಈಗ ಗಮನಿಸೋಣ. ವೈದ್ಯಕೀಯವಾಗಿ ಸುರಕ್ಷಿತವಾದ ನೀರು ಎಂದರೆ, ಬಳಸುವವನಿಗೆ ಯಾವುದೇ ಹಾನಿ ಉಂಟುಮಾಡದಿರುವ ನೀರು ಎಂದು ಅರ್ಥ. ಅಂದರೆ, ಅದು ಸೂಕ್ಷ್ಮಾಣುಜೀವಿಗಳಿಂದ ರಾಸಾಯನಿಕ ವಸ್ತುಗಳಿಂದ ಮುಕ್ತವಾಗಿರಬೇಕು. ಅಲ್ಲದೆ ಅದು ರುಚಿಕರವಾಗಿಯೂ ಇರಬೇಕು. ಕುಡಿಯುವ ನೀರಿನಲ್ಲಿ ಹಾನಿಕಾರಕ ಸೂಕ್ಷ್ಮಾಣುಗಳು ಮತ್ತು ಅಪಾಯಕಾರಿ ರಾಸಾಯನಿಕ ವಸ್ತುಗಳಿದ್ದರೆ, ಆಗ ಆ ನೀರನ್ನು ಬಳಸುವ ಜನ ಜಲಮೂಲದ ರೋಗಗಳಿಂದ ನರಳುತ್ತಾರೆ. ನಮ್ಮ ದೇಶದಲ್ಲಿ ಜಲಮೂಲದ ರೋಗಗಳು ಸರ್ವೇಸಾಮಾನ್ಯ. ನಮ್ಮ ಜನಸಂಖ್ಯೆಯ ಶೇ. ೭೦ರಷ್ಟು ಭಾಗ ಜೀವಿಸುತ್ತಿರುವ ಗ್ರಾಮಾಂತರ ಪ್ರದೇಶಗಳಲ್ಲಿ ಈ ಸಮಸ್ಯೆ ತೀವ್ರವಾಗಿದೆ. ಕಳೆದ ೩-೪ ದಶಕಗಳಲ್ಲಿ ಈ ರೋಗಗಳ ಪೈಕಿ ಹೆಚ್ಚಿನವನ್ನು ತಡೆಗಟ್ಟುವಲ್ಲಿ ಸಫಲರಾಗಿದ್ದೇವೆ. ಆದರೂ ಸಾಗಬೇಕಾದ ಹಾದಿ ಇನ್ನೂ ಬಹಳವಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಕೆಲವು ಉದಾಹರಣೆಗಳನ್ನು ಪರಿಶೀಲಿಸಿ, ಈ ಸಮಸ್ಯೆಗಳ ಸ್ವರೂಪವನ್ನು ತಿಳಿದುಕೊಳ್ಳೋಣ. ಕಾಲರಾ ರೋಗ ನಮ್ಮಲ್ಲಿ ಲಕ್ಷಾಂತರ ಮಂದಿಯ ಸಾವಿಗೆ ಕಾರಣವಾಗಿದೆ. ಇದು ಈಗ ಬಹುಮಟ್ಟಿಗೆ ನಿಯಂತ್ರಣಕ್ಕೆ ಒಳಪಟ್ಟಿದೆಯಾದರೂ ನೈರ್ಮಲ್ಯದ ಅಭಾವವಿರುವ ಜಾತ್ರೆಗಳು, ಮೇಳಗಳು ಮತ್ತು ಯಾತ್ರಾಸ್ಥಳಗಳಲ್ಲಿ ತನ್ನ ಕರಾಳ ಸ್ವರೂಪವನ್ನು ತೋರಿಸಿಯೇ ತೀರುತ್ತದೆ. ಕಾಲರಾ ರೋಗದಿಂದ ನರಳುತ್ತಿರುವ ವ್ಯಕ್ತಿಯ ಮಲಮೂತ್ರಗಳಿಂದ ಕಾಲರಾ ಸೂಕ್ಷ್ಮಾಣುಗಳು ಹೊರಬರುತ್ತವೆ. ಕೆಲವೇ ಗಂಟೆಗಳಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಹರಡಿ, ಒಂದೆರಡು ದಿನಗಳಲ್ಲಿಯೇ ನೂರಾರು ಮಂದಿಯನ್ನು ಇದು ಬಲಿ ತೆಗೆದುಕೊಳ್ಳಬಹುದು. ಏಕೆಂದರೆ, ಈ ರೋಗಾಣುಗಳು ನೀರಿನ ಮೂಲಕ ದೇಹವನ್ನು ಪ್ರವೇಶಿಸಿ, ಕರುಳಿನಲ್ಲಿ ಶೀಘ್ರವಾಗಿ ಹೆಚ್ಚಿ, ರೋಗಕ್ಕೆ ಕಾರಣವಾಗುತ್ತವೆ. ಅಂಥ ವ್ಯಕ್ತಿ ತಾನು ಮಾತ್ರವೇ ರೋಗದಿಂದ ನರಳುವುದಿಲ್ಲ; ತನ್ನ ಮಲದ ಮೂಲಕ ಈ ರೋಗಾಣುಗಳನ್ನು ವಿಸರ್ಜಿಸಿ, ಬೇರೆಯವರಿಗೂ ಸೋಂಕು ತಾಗಲು ಕಾರಣನಾಗುತ್ತಾನೆ.

ಜಲಮೂಲದ ರೋಗಕ್ಕೆ ಇನ್ನೊಂದು ಒಳ್ಳೆಯ ಉದಾಹರಣೆ ವಿಷಮ ಶೀತಜ್ವರ ಅಥವಾ ಟೈಫಾಯಿಡ್. ಇದು ಈಗ ಅಷ್ಟೊಂದು ತೀವ್ರವಾಗಿಲ್ಲವಾದರೂ ಅಲ್ಲಲ್ಲಿ ಕಂಡುಬರುತ್ತಿದೆ. ಈ ರೋಗದಿಂದ ಚೇತರಿಸಿಕೊಂಡ ಕೆಲವರು ನೋಡಲು ಆರೋಗ್ಯವಂತರೆಂಬಂತೆ ಕಂಡರೂ ಟೈಫಾಯಿಡ್ ವಾಹಕರಾಗಿದ್ದು, ತಮ್ಮ ಮಲಮೂತ್ರಗಳಲ್ಲಿ ಈ ರೋಗಾಣುಗಳನ್ನು ವಿಸರ್ಜಿಸುತ್ತಿರುತ್ತಾರೆ. ಇದರಿಂದ ಇತರರಿಗೂ ಈ ರೋಗ ಹರಡುತ್ತದೆ.

ದೊಡ್ಡ ನಗರಗಳಲ್ಲಿ ಇಂದು ಸಾಂಕ್ರಾಮಿಕ ರೋಗದಂತಾಗಿಬಿಟ್ಟಿರುವ ಕಾಮಾಲೆ ಅಥವಾ ಜಾಂಡೀಸ್‌ಗೆ ಜಲಮಾಲಿನ್ಯವೇ ಕಾರಣವಾಗಿದೆ. ನೀರು ಸರಬರಾಜಿನ ಮಾರ್ಗಗಳು ಚರಂಡಿಕೊಳವೆಗಳಿಂದ ಮಲಿನಗೊಳ್ಳುವುದೇ ಈ ರೋಗ ತಲೆದೋರಲು ಕಾರಣ. ಹೀಗಾಗಿ ನಂಜು ನಮ್ಮ ದೇಹವನ್ನು ಪ್ರವೇಶಿಸಿ ನಮಗೆ ಅಪಾರ ಕಷ್ಟ-ನಷ್ಟಗಳನ್ನುಂಟು ಮಾಡುತ್ತದೆ. ಪೋಲಿಯೋಮೈಲೈಟಿಸ್ ಕೂಡ ಜಲಮೂಲದ ರೋಗವೆ. ಬೃಹತ್ ಪ್ರಮಾಣದಲ್ಲಿ ಲಸಿಕೆ ಹಾಕುತ್ತಿರುವುದರಿಂದ ಇದರ ಪ್ರಾಬಲ್ಯ ಈಗ ಕಡಿಮೆಯಾಗುತ್ತಿದೆ. ಜಲಮೂಲದ ರೋಗಗಳ ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಹುದು. ಪ್ಯಾರಾ ಟೈಫಾಯಿಡ್ ಜ್ವರ, ಆಮಶಂಕೆ, ಗ್ಯಾಸ್ಟ್ರೋ ಎಂಟರೈಟಿಸ್, ಮಕ್ಕಳಲ್ಲಿ ಅತಿಸಾರ ಇತ್ಯಾದಿ, ಸುರಕ್ಷಿತವಾದ ಕುಡಿಯುವ ನೀರು ದೊರೆಯದೆ ಇರುವುದು ಶೌಚಗೃಹಗಳ ಸೌಲಭ್ಯವಿಲ್ಲದೆ ಇರುವುದರಿಂದಾಗಿ ಬಯಲಿನಲ್ಲಿ ಮಲಮೂತ್ರ ವಿಸರ್ಜನೆ ಮಾಡುವುದು, ವೈಯಕ್ತಿಕ ಸ್ವಚ್ಛತೆಯ ಕಡೆಗೆ ಗಮನಕೊಡದೆ ಇರುವುದು, ಕೊಳೆಬಟ್ಟೆಗಳನ್ನು ಕೆರೆ, ನದಿ ಅಥವಾ ಬಾವಿಯ ಬಳಿ ಒಗೆಯುವುದು — ಈ ಸಮಸ್ಯೆಗಳನ್ನು ಬಗೆಹರಿಸದ ಹೊರತು, ಇಂಥ ರೋಗರುಜಿನಗಳು ಇದ್ದೇ ಇರುತ್ತವೆ: ಅಷ್ಟೇ ಅಲ್ಲ, ಅಪಾಯಕಾರಿಯೂ ಉಪದ್ರವಕಾರಿಯೂ ಆಗಿ ಪರಿಣಮಿಸುತ್ತವೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಇವು ನಾಡಿನ ಅರ್ಥವ್ಯವಸ್ಥೆಯ ಪ್ರಗತಿಗೆ ಪ್ರತಿಕೂಲಕಾರಿಯೂ ಆಗಿ ಪರಿಣಮಿಸುತ್ತವೆ.

ಸೂಕ್ಷ್ಮಾಣು ಜೀವಿಗಳು ಮತ್ತು ಪರತಂತ್ರ ಜೀವಿಗಳಂತೆಯೇ, ಅಪಾಯಕಾರಿ ರಾಸಾಯನಿಕ ವಸ್ತುಗಳಿದ್ದರೂ ಅಂಥ ನೀರು ಆರೋಗ್ಯಕ್ಕೆ ಹಾನಿಕಾರಕವಾಗುತ್ತದೆ. ಉದಾಹರಣೆಗೆ ಫ್ಲೋರೋಸಿಸ್, ಅತಿಯಾದ ಫ್ಲೋರೈಡುಗಳಿರುವಂಥ ನೀರನ್ನು ಸೇವಿಸುವುದರಿಂದ ಮೂಳೆಗಳು ಗಡುಸಾಗುತ್ತವೆ. ಧಾರವಾಡ ಜಿಲ್ಲೆಯಲ್ಲಿ ಈ ಪರಿಸ್ಥಿತಿ ಇದೆಯೆಂದು ವರದಿಯಾಗಿದೆ. ಹಾಗೆಯೇ, ನೀರಿನಲ್ಲಿ

ಫ್ಲೋರೈಡುಗಳ ಅಭಾವ ಇದ್ದರೆ, ದಂತಕ್ಷಯ ಉಂಟಾಗುತ್ತದೆ. ನೀರಿನಲ್ಲಿ ಸೀಸ, ಆರ್ಸೆನಿಕ್, ಸೆಲೇನಿಯಮ್, ಪಾದರಸ, ಸಯನೈಡ್, ಕ್ಯಾಡ್ಮಿಯಮ್ ಗಳಿದ್ದರೂ ಆರೋಗ್ಯಕ್ಕೆ ಹಾನಿಯುಂಟಾಗುತ್ತದೆ. ನಂಜಿನ ಹಾಗೂ ಹಾನಿಕಾರಕವಾದ ಈ ವಸ್ತುಗಳು ಕೈಗಾರಿಕೆಗಳ ಕಶ್ಮಲಜಲದ ಮೂಲಕ ಹೊರಬಂದು ಕುಡಿಯುವ ನೀರನ್ನು ಮಲಿನಗೊಳಿಸುತ್ತವೆ. ಹರಿಹರದ ಪಾಲಿಫೈಬರ್ ಕಾರ್ಖಾನೆಯಿಂದ ಹೊರಬಿದ್ದ ರಾಸಾಯನಿಕ ವಸ್ತುಗಳು ನದಿಯ ನೀರಿನಲ್ಲಿ ಸೇರಿ ಇಡೀ ಗ್ರಾಮಗಳನ್ನೇ ರೋಗಗ್ರಸ್ತವಾಗಿಸಿವೆ ಎಂಬುದನ್ನು ಇತ್ತೀಚೆಗೆ ತಾನೆ ಕೇಳಿದ್ದೇವೆ. ಸೂಕ್ಷ್ಮಾಣುಜೀವಿ ರೋಗಗಳು ಇಳಿಮುಖವಾಗುತ್ತಿರುವಂಥ ಬೃಹತ್ ನಗರಗಳಲ್ಲಿ, ಇಂಥ ರೋಗಗಳು ಹೆಚ್ಚುತ್ತಿವೆ.

ನೀರಿನಿಂದ ಮಾತ್ರವೇ ಬರಬಹುದಾದಂಥ ಕೆಲವು ರೋಗಗಳು ವಿರಳವಾಗಿಯಾದರೂ ಕಂಡುಬರುತ್ತವೆ. ನಾರುಹುಣ್ಣು (ಗಿನಿವರ್ಮ್) ಮತ್ತು ಲಾಡಿಹುಳು ರೋಗ—ಇದಕ್ಕೆ ಉದಾಹರಣೆಗಳೆನ್ನಬಹುದು. ಈ ರೋಗಗಳು ಇರುವಂಥ ಕಡೆಗಳಲ್ಲಿ ಜನ ಕುಡಿಯುವ ಮುನ್ನ ನೀರನ್ನು ಕುದಿಸಬೇಕು. ಹಾಗೆ ಮಾಡಿದಾಗ ರೋಗಕಾರಕ ಪರೋಪಜೀವಿಗಳು ಸಾಯುತ್ತವೆ. ಹೀಗಾಗಿ, ಈ ಬಗೆಯ ರೋಗಗಳನ್ನು ನಿವಾರಿಸಬಹುದು. ಪಾಶ್ಚಾತ್ಯ ದೇಶಗಳಲ್ಲಿ ಸುರಕ್ಷಿತ ನೀರು ಸರಬರಾಜಿಗಾಗಿ ಸಾಕಷ್ಟು ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಂಡಿರುವುದರಿಂದ, ಅಲ್ಲಿ ಇಂಥ ರೋಗಗಳ ಸಂಭವ ತುಂಬ ಕಡಿಮೆಯಾಗಿದೆ.

ಶತಮಾನಗಳಷ್ಟು ಹಿಂದೆಯೇ 'ಋಗ್ವೇದ'ದ ಋಷಿ ಈ ಸತ್ಯವನ್ನು ಸಾರಿ ಹೇಳಿದ: "ಆಪೋ ಭವಂತು ಪೀತಯೇ: ಶಂ ಯೋರಭಿಸ್ರವಂತು ನಃ"—ಅಂದರೆ, "ನೀರು ನಮಗೆ ಪಾನಯೋಗ್ಯವಾಗಿರಲಿ; ಅದು ನಮ್ಮ ಸುತ್ತಲೂ ಹರಿಯಲಿ: ನಮಗೆ ಸುಖವನ್ನೂ ರೋಗ ಪರಿಹಾರವನ್ನೂ ಕರುಣಿಸಲಿ" ಎಂಬುದು ಈ ಮಾತಿನ ಆಶಯ. ಈ ಅಂಶವನ್ನು ಗಮನಿಸಿ, ಸುರಕ್ಷಿತ ನೀರು ಸರಬರಾಜು ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ಇಂಥ ಸಾಮುದಾಯಿಕ ಯೋಜನೆಗಳಿಂದ ಮಾತ್ರವೇ ಜಲಮೂಲದ ರೋಗಗಳನ್ನು ತಡೆಗಟ್ಟಬಹುದು. ಆ ಮೂಲಕ ಜನತೆಯ ಒಟ್ಟಾರೆ ಆರೋಗ್ಯವನ್ನು ಸುಧಾರಿಸಬಹುದು. ಜಲಮೂಲದ ರೋಗಗಳ ನಿವಾರಣೆಗೆ ಇಂಥ ಪ್ರಯತ್ನ ಮಾತ್ರವೇ ಪರಿಣಾಮಕಾರಿಯಾದ ಹಾಗೂ ಶಾಶ್ವತವಾದ ಮದ್ದಾಗಬಲ್ಲದು. ಇಂಥ ಯೋಜನೆಗಳಿಂದ ಮಾತ್ರವೇ "ಕ್ರಿ.ಶ. ೨೦೦೦ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ" ಎಂಬ ವಿಶ್ವ ಆರೋಗ್ಯ ಸಂಸ್ಥೆಯ ಧ್ಯೇಯವನ್ನು ಸಾಧಿಸಬಹುದಾಗಿದೆ.

ಡಾ॥ ಪಿ. ಆರ್. ಅನಂತರಾಮ್

ವ್ಯಕ್ತಿಯನ್ನು ಮೌನವಾಗಿ ಕೊಲ್ಲುವ ತಕ್ಷಕ: ಅತಿ ತುಯ್ತ

[ತಮ್ಮ ರಕ್ತದ ಅಧಿಕ ಒತ್ತಡದ ಬಗೆ ಮಿಲಿಯುಗಟ್ಟಲೆ ಭಾರತೀಯರು ಅಜ್ಞರಾಗಿದ್ದಾರೆ. ಖಾಯಿಲೆಯು ಪರಿಣಾಮ ಮರಣಾಂತಿವಾದರೂ ಸುಲಭವಾಗಿ ಪತ್ತೆಹಚ್ಚಬಹುದು ಚಿಕಿತ್ಸಿಸಬಹುವಾದ ಖಾಯಿಲೆ ಇದು. ನೀವೇನು ಮಾಡಬೇಕೆಂಬುದು ಮುಂದಿದೆ.]

ನಲ್ವತ್ತೆರಡರ ಜವ್ವನ. ಕಂಪೆನಿಯೊಂದರ ನಿರ್ವಾಹತ ಚಾಲಕ. ಪುಷ್ಕಳ ಮಧ್ಯಾಹ್ನದೂಟ ಮುಗಿಸಿದ್ದಾನೆ. ಇದ್ದಕ್ಕಿದ್ದಹಾಗೆ ಎದೆಯಲ್ಲಿ ಅತಿಯಾತನೆ ಕೊಡುವ ನೋವು ಅನುಭವವಾಯಿತು. "ವಾಯು" ಉಪದ್ರವವೆಂದು ತಿಳಿದು ಎರಡು ಮಾತ್ರೆಗಳನ್ನು ನುಂಗಿದ. ನೋವು ಎಡತೋಳಿಗೆ, ಕೈಗೆ ಹಾಗೂ ಬೆನ್ನಿಗೆ ಹಬ್ಬಲಾಗಿ ಡಾಕ್ಟರರಿಗೆ ಕರೆ ಕಳುಹಿಸಲಾಯಿತು. ಆ ನಿರ್ವಾಹಕ ಹೃದಯಾಘಾತ ಅನುಭವಿಸಿದ್ದ.

ಐವತ್ತೊಂಬರರ ಸ್ವತಂತ್ರೋದ್ಯಮಿ. ತನ್ನ ಹೊಸ ಯೋಜನೆಗೆ ಸರ್ಕಾರದ ಮಂಜೂರಾತಿ ಪಡೆಯುವುದಕ್ಕಾಗಿ ಡಿಲ್ಲಿಗೆ ಹಾರುವುದರಲ್ಲಿದ್ದ ತಡವಾದ ವಿಮಾನಕ್ಕೆ ಅಸಹನೆಯಿಂದ ಉದ್ವಿಗ್ನವಾಗಿ ಕಾಯುತ್ತಿದ್ದಾಗ ಅವನ ತಲೆ ಆದಿರಲು ಸುರುವಾಯಿತು. ಅವನು ಚೀತ್ಕರಿಸಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದ. ಪಾರ್ಶ್ವವಾಯು ಅವನ ಬಲಭಾಗಕ್ಕೆ ಬಡಿದಿತ್ತು.

ಈ ಇಬ್ಬರೂ ತಾವು ರಕ್ತದ ಅಧಿಕ ಒತ್ತಡದಿಂದ ನರಳುತ್ತಿರುವುದನ್ನು ತಿಳಿದಿರಲಿಲ್ಲ. ಇವರನ್ನು ಚಿಕಿತ್ಸಿದ ಬೊಂಬಾಯಿಯ ಮುಂದುವರಿದ ವೈದ್ಯ ಡಾ|| ಆರ್. ಎಚ್. ದಸ್ತೂರರು ಹೇಳುತ್ತಾರೆ. "ಸಾಮಾನ್ಯ ವೈದ್ಯಕೀಯ ತಪಾಸಣೆ ಪರಿಸ್ಥಿತಿಯನ್ನು ಪತ್ತೆಹಚ್ಚುತ್ತಿತ್ತು. ಹಾಗೂ ಜಾಗ್ರತೆಯ, ಹತೋಟಿಯ ಚಿಕಿತ್ಸೆ, ಆಹಾರ ಮತ್ತು ಜೀವನ ಕ್ರಮಗಳು ಆಘಾತಗಳನ್ನು ತಡೆಯುತ್ತಿದ್ದುವು."

ರಕ್ತದ ಅಧಿಕ ಒತ್ತಡ ಯಾ ಅತಿ ತುಯ್ತ. ಭಾರತದಲ್ಲಿ ಇಂದು ನಿಶ್ಶಕ್ತಿಯ ಮತ್ತು ಮರಣದ ಮುಖ್ಯ ಕಾರಣಗಳಲ್ಲಿ ಒಂದಾಗಿದೆ. ಇದು ರಕ್ತಪರಿಚಲನಾ ವ್ಯವಸ್ಥೆಯಲ್ಲಿ ಹೊಂಚುಹಾಕುತ್ತಿದ್ದು ಫಕ್ಕನೆ ಬಡಿಯುವ ಮೌನಧ್ವಂಸಕ.

೧೯೮೩ ಜನವರಿ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಹೈಪರ್ ಟೆನ್ಷನ್ ದಿ ಸೈಲೆಂಟ್ ಕಿಲ್ಲರ್ ಲೇಖನದ ಅನುವಾದ. ಲೇಖಕರು ಶ್ರೀ ಕೊಂಪಿಂಜೆಸ್ಲೋಯರ್

ಈ ಖಾಯಿಲೆ ಸುಮಾರು ಅರವತ್ತು ಮಿಲಿಯ ಭಾರತೀಯರನ್ನು ಹಿಂಸಿಸಿದೆ. ಚಿಕಿತ್ಸೆ ಮಾಡದಿದ್ದರೆ ಪರಿಣಾಮ:–ಹೃದಯಾಘಾತ ಮೂತ್ರಪಿಂಡ ಕೆಡುವಿಕೆ, ಕುರುಡುತನ–ಸಾವು.

ವಾಸ್ತವ ಸಂಗತಿ ಏನೆಂದರೆ ಅಕಾಲಿ ಮರಣಕ್ಕೆ ದಾರಿ ಮಾಡುವ ಗೊತ್ತಿರುವ ಖಾಯಿಲೆಗಳಲ್ಲಿಲ್ಲ ಅತಿ ತುಯ್ತು ಅತಿ ಸುಲಭವಾಗಿ ಹಿಡಿತಕ್ಕೆ ಬರುವಂಥದ್ದು. ರಕ್ತದ ಅಧಿಕ ಒತ್ತಡದ ವಿನಾಶಸಾಮರ್ಥ್ಯದ ಬಗ್ಗೆ ವ್ಯಾಪಕ ವಾಗಿರುವ ಅಜ್ಞತೆ ಸಮಸ್ಯೆಯನ್ನು ಅಪಾಯದ ಹಂತಕ್ಕೆ ಒಯ್ದಿದೆ. ೧೯೭೮ರ ಸರ್ವೆಯಲ್ಲಿ "ಹೃದ್ರೋಗ ನಿವಾರಣಾ ದೇಶೀಸಂಸ್ಥೆ"ಯ ಅಧ್ಯಕ್ಷರಾದ ಡಾ। ಜಯಶಂಕರ ಜವೇರಿಯವರು ವೇತನ ಪಡೆಯುವ ಹತ್ತುಸಾವಿರ ಬೊಂಬಾಯಿ ಜನರನ್ನು ಪರೀಕ್ಷಿಸಿದರು. ಆ ಪೈಕಿ ಸಾವಿರದ ಇನ್ನೂರ ಎಂಭತ್ತು ಜನ–ಎಂದರೆ ಹೆಚ್ಚುಕಮ್ಮಿ ಶೇಕಡಾ ಹದಿಮೂರು ಅತಿ ತುಯ್ತದಿಂದ ನರಳುತ್ತಿದ್ದರು. ಹೆಚ್ಚಿನವರು ತಮ್ಮ ಸ್ಥಿತಿಯನ್ನೇ ಅರಿತಿರಲಿಲ್ಲ. ಅರಿತಿದ್ದರೂ ಅಲಕ್ಷಿಸಿದ್ದರು.

ಸಾಮಾನ್ಯ ವ್ಯಾಪ್ತಿ: ರಕ್ತದೊತ್ತಡ ಎಂದರೇನು? ನಮ್ಮ ಹೃದಯ ನಿಮಿಷಕ್ಕೆ ಎಪ್ಪತ್ತೆರಡು ಸಲ–ದಿನಕ್ಕೆ ಒಂದು ಲಕ್ಷ ಸಲ–ಬಡಿಯುತ್ತದೆ. ಪ್ರತಿ ಬಡಿತದಲ್ಲೂ ಸುಮಾರು ಅರ್ಧಲೋಟ ರಕ್ತ ಅಪಧಮನಿಗೆ ನೂಕಲ್ಪಡುತ್ತದೆ ಮತ್ತು ಒಂದು ಲಕ್ಷದ ಇಪ್ಪತ್ತುಸಾವಿರ ರಕ್ತನಾಳಗಳ ಮುಖಾಂತರ ಸಂಚರಿಸಿ ಅಭಿಧಮನಿಯ ದ್ವಾರ ಮತ್ತೆ ಹೃದಯಕ್ಕೆ ಬರುತ್ತದೆ. ಈ ಹರಿವಿನ ಹಿಂದಿನ ಚಾಲಕ ಶಕ್ತಿ; ಪಂಪು ಮಾಡಲ್ಪಟ್ಟ ರಕ್ತ ಅಪಧಮನಿಯ ಗೋಡೆಗಳ ಮೇಲೆ ತೋರುವ ಬಲ–ರಕ್ತದೊತ್ತಡ (Blood Pressure).

ರಕ್ತವನ್ನು ಹೃದಯ ಆಲಿಯಾಗಿ ಪಂಪು ಮಾಡುವಾಗ ಪ್ರತಿ ಹೊಡೆತದಲ್ಲೂ ಒತ್ತಡ ಉಂಟಾಗುತ್ತದೆ. ಹೃದಯ ಕುಗ್ಗುವಾಗ ಒತ್ತಡ ಉಚ್ಚಕ್ಕೂ (Systole) ಹಿಗ್ಗುವಾಗ ನಿಮ್ನಕ್ಕೂ ಬರುತ್ತದೆ (Diastole) ರಕ್ತದೊತ್ತಡ ವ್ಯಕ್ತಿವ್ಯಕ್ತಿಗಳಲ್ಲಿ ಭಿನ್ನ. ಏಕ ವ್ಯಕ್ತಿಯಲ್ಲೂ ವಿವಿಧ ಕಾಲಗಳಲ್ಲಿ ಭಿನ್ನ, ನಿದ್ರೆಯಲ್ಲಿ ಕಮ್ಮಿ; ಕೆಲಸದಲ್ಲಿ ಗಾಬರಿಯಲ್ಲಿ ಜಾಸ್ತಿ. ಭಾವೋದ್ವೇಗಗಳು ಒತ್ತಡವನ್ನು ಉತ್ತುಂಗ ಎತ್ತರಕ್ಕೆ ಏರಿಸಿ ಬಿಡುತ್ತದೆ. ಈ ಹೊಂದಾಣಿಕೆಗಳು ನಮ್ಮ ಅರಿವಿಲ್ಲದೆಯೇ ಸ್ವಯಂ ನಿಯಂತ್ರಿತವಾಗಿ ಆಗುತ್ತಿರುತ್ತವೆ.

ವಯಸ್ಕ ವ್ಯಕ್ತಿಯ ರಕ್ತದೊತ್ತಡವನ್ನು "ಸಿಗ್ಮ ಮೊನೋಮೀಟರ್"ನಿಂದ ಅಳೆಯುತ್ತಾರೆ. ಅದು ೧೧೦–೬೦ ರಿಂದ ೧೫೦–೮೦ ರವರೆಗೆ ಇರುತ್ತದೆ. (ಇದ

ರಲ್ಲಿ ಮೊದಲನೆ ಸಂಖ್ಯೆ Systolic ಅಥವಾ ಉಚ್ಚ ಒತ್ತಡ. ಎರಡನೆ ಸಂಖ್ಯೆ Diastolic ಅಥವಾ ನಿಮ್ನ ಒತ್ತಡ) ಈ ಒತ್ತಡದ ಸ್ಥಿತಿ ೧೪೦-೯೦ಕ್ಕಿಂತ ಹೆಚ್ಚಿದ ಸ್ಥಿತಿಯೇ ಅತಿ ತುಯ್ತ (ಹೈಪರ್ ಟೆನ್ಶನ್) ಉಚ್ಚ ಒತ್ತಡ ಪ್ರಾಯ ಹೆಚ್ಚಿದಂತೆ ಹೆಚ್ಚುತ್ತದೆ. ಯಾಕೆಂದರೆ ಅಪಧಮನಿಗಳು ಸಂಕುಚಿಸುತ್ತವೆ. ಇದರಿಂದಾಗಿ ತಮ್ಮ ಸ್ಥಿತಿಸ್ಥಾಪಕ ಶಕ್ತಿಯನ್ನು ಕಳಕೊಳ್ಳುತ್ತವೆ. ಅತಿ ತುಯ್ತದ ಪ್ರಕೋಪತೆಯನ್ನು ನಿಮ್ನ ಒತ್ತಡ ನಿರ್ಧರಿಸುತ್ತದೆ. ನಿಮ್ನ ಒತ್ತಡವನ್ನು ೯೦ ರಿಂದ ೧೧೦ ವರೆಗೆ ಸೌಮ್ಯ, ೧೧೦ ರಿಂದ ೧೩೦ ರವರೆಗೆ ಮಧ್ಯಮ ; ೧೩೦ರ ಮೇಲೆ ಉಗ್ರ ಎಂದು ವರ್ಗೀಕರಿಸುತ್ತಾರೆ. ಒತ್ತಡ ಹೆಚ್ಚಿದಂತೆ ಹೃದಯದ ಮೇಲೆ ಹೆಚ್ಚು ದಣಿವು ಬೀಳುತ್ತದೆ. ಇದರ ಪರಿಣಾಮ ಮರ್ಮಾಂಗಗಳಿಗೆ ಮಾರಕ ಆಘಾತ.

ಆಸ್ಥಿಗತವಾಗ (Chromic) ಏರಿದ ಅಪಧಮನಿ ಒತ್ತಡ ಹೃದಯವನ್ನು ಬಲವಾಗಿ ಪಂಪು ಮಾಡುವಂತೆ ಮಾಡುತ್ತದೆ. ಹೃದಯಕ್ಕೆ ಕೆಲಸದೊತ್ತಡ ಹೆಚ್ಚುತ್ತದೆ. ದಣಿವು ಹೆಚ್ಚುತ್ತದೆ. ಕಾರಣ ಕಮ್ಮಿ ರಕ್ತವನ್ನು ಪಂಪು ಮಾಡುತ್ತದೆ. ಪರಿಣಾಮವಾಗಿ ಮೂತ್ರಪಿಂಡ ಸಾಕಷ್ಟು ದ್ರವವನ್ನು ಸ್ರವಿಸಲಾರದೆ ಸೋಲುತ್ತದೆ. ಆಗ ಯೂರಿಯದಂಥ ವಿಷವಸ್ತುಗಳು ರಕ್ತದಲ್ಲಿ ಸಂಗ್ರಹವಾಗುತ್ತದೆ. ಯುರೇಮಿಯದಂಥ ಮರಣಾಂತಿಕ ದೂರು ತಲೆದೋರುತ್ತದೆ.

ಇತರ ಮಾರಕಗಳು : ರಕ್ತದ ಅಧಿಕ ಒತ್ತಡ ಅಪಧಮನಿ ಗೋಡೆಗಳನ್ನು ಒರಟಾಗಿಸುತ್ತದೆ. ಇದು ಕೊಲೆಸ್ಟ್ರಾಲ್ ಟ್ರೈಗ್ಲಿಸರೈಡ್ ಫಾಸ್ಫೊಲಿಡೈಸ್ ಮೊದಲಾದ ಕೊಬ್ಬು ವಸ್ತುಗಳು ಗೋಡೆಯಡಿ ಸಂಗ್ರಹವಾಗಲು ಅನುವು ಮಾಡಿ ಕೊಡುತ್ತದೆ. ಪರಿಣಾಮ-Atheroselerosis ಎಂದರೆ ದಪ್ಪಗೊಂಡ ಅಪಧಮನಿ ಗೋಡೆಗಳು. ಅಪಧಮನಿ ಪೆಡಸಣೆ ಎಂದು ಇದರ ಹೆಸರು. ರಕ್ತ ಪ್ರವಾಹ ಕಷ್ಟದಾಯಕವಾಗುತ್ತದೆ. ಒಮ್ಮೊಮ್ಮೆ ಹೆಪ್ಪುಗಟ್ಟಬಹುದು. ಈ ಹೆಪ್ಪುಗಟ್ಟುವಿಕೆ ರಕ್ತವಿತರಣೆಯನ್ನು ಥಕ್ಕನೆ ನಿಲ್ಲಿಸಿ ಹೃದಯಾಘಾತ ಮೂತ್ರಪಿಂಡದ ನಿಷ್ಕ್ರಿಯತೆಗಳಿಗೆ ಅನುವು ಮಾಡಿ ಕೊಡುತ್ತದೆ. ಹೃದಯಾಘಾತದ ಸಂಭಾವ್ಯತೆ ಅತಿ ತುಯ್ತ ಇದ್ದವರಿಗೆ ಇತರರಿಗಿಂತ ಐದು ಪಾಲು ಜಾಸ್ತಿ. ಆಹಾರಯುಕ್ತ ೨೪೦-೧೩೦ ಒತ್ತಡ ಮಟ್ಟವನ್ನು ತಲುಪಿದರೆ, ರಕ್ತ ಮತ್ತು ಪ್ಲಾಸ್ಮಾ ಅಕ್ಷಿಪಟದಿಂದ ಸೂಸಲ್ಪಡುತ್ತದೆ. ಪರಿಣಾಮವಾಗಿ ಪೂರ್ಣಾಂಧತೆ ತಲೆದೋರಬಹುದು.

ಅತಿತುಯ್ತದಲ್ಲಿ ದ್ವಿವಿಧ—ಪ್ರಾಥಮಿಕ ಮತ್ತು ದ್ವಿತೀಯಕ. ಎರಡನೆಯ

ವಿಧದಲ್ಲಿ ಮೂತ್ರಪಿಂಡ ಖಾಯಿಲೆ, ಮೆದುಳು, ಥೈರಾಯ್ಡ್, ಅಡ್ರಿನಲ್ ಗ್ರಂಥಿಗಳ ಗಡ್ಡೆ, ಅಯೋರ್ಟ (ಹೃದಯದ ಮುಖ್ಯ ಅಪಧಮನಿ) ಸಪುರತೆ, ಮೊದಲಾದ ಕುತ್ತುಗಳು ಬರಬಹುದು. ಇದು ಎಳೆಯರಲ್ಲಿ ಸಾಮಾನ್ಯ ಹಾಗೂ ಶಸ್ತ್ರ ಚಿಕಿತ್ಸೆಯಿಂದ ಶಮನಗೊಳಿಸಿ ಒತ್ತಡವನ್ನು ಸುಸ್ಥಿತಿಗೆ ತರಬಹುದು. ಪ್ರಾಥಮಿಕ ಅತಿತುಯ್ತಕ್ಕೆ ಮೌನಧ್ವಂಸಕ ಎಂದು ಅಡ್ಡ ಹೆಸರು ಪಡೆದಿದೆ. ಇದು ಸರಿಯಾದ ಯಾವ ಲಕ್ಷಣಗಳನ್ನೂ ಬಿಟ್ಟುಕೊಡದೆ ಸಾಕಷ್ಟು ಆಧುನಿಕವಾಗುತ್ತದೆ. ಸಾಮಾನ್ಯವಾಗಿ ಜನ ತಿಳಿದಂತೆ ತಲೆನೋವು ಈ ಖಾಯಿಲೆಯ ಲಕ್ಷಣ ಅಲ್ಲ. ಸ್ಥೂಲಕಾಯ, ಸಿಹಿಮೂತ್ರ, ಅತಿ ಉಪ್ಪು, ಹೊಗೆಪಾನ, ಆವೇಶ-ಉದ್ವೇಗ, ಕೌಟುಂಬಿಕ ಹಿನ್ನೆಲೆಗಳು ಖಾಯಿಲೆಯನ್ನು ಸಾಮಾನ್ಯವಾಗಿ ನಿರ್ಧರಿಸುವ ಅಂಶಗಳು. ಅತಿತುಯ್ತ ಉಳ್ಳವರ ಮಕ್ಕಳಿಗೆ ಹತ್ತು ವರ್ಷ ಬೇಗ ಖಾಯಿಲೆ ಬರುವ ಶೇಕಡಾ ಐವತ್ತು ಸಂಭಾವ್ಯತೆ ಇದೆ. ಹೊಗೆಪಾನ ಹದಿನೈದರಿಂದ ಇಪ್ಪತ್ತು ಅಂಶ ಒತ್ತಡವನ್ನು (ಎಳೆದ ಹದಿನೈದು ನಿಮಿಷಗಳ ವರೆಗೆ) ಹೆಚ್ಚಿಸುವುದರಿಂದ, ಇಂಥವರಿಗೆ ಹೃದಯಾಘಾತದ ಭಯ ಜಾಸ್ತಿ.

ಎದ್ದು ತೋರುವ ಲಕ್ಷಣಗಳು ಇಲ್ಲದಿರುವಾಗ ಅತಿತುಯ್ತರು ರಕ್ಷಿತ ಭಾವದಿಂದಿರುತ್ತಾರೆ. ದುರದೃಷ್ಟವೆಂದರೆ ಅನೇಕ ರೋಗಿಗಳು ಮದ್ದು ತೆಗೆದುಕೊಳ್ಳುವಲ್ಲಿ ಉದಾಸೀನರಾಗಿರುತ್ತಾರೆ. ಒಬ್ಬ ಅಜ್ಞೇಯತಾವಾದಿ ರೋಗಿ ಹೇಳುತ್ತಾನೆ. "ನನಗೆ ತಲೆನೋವಿಲ್ಲ, ಎದೆ ನೋವಿಲ್ಲ ಮದ್ದು ಮದ್ದು ಜೀವನವೇಕೆ ಕೆಡಿಸಿಕೊಳ್ಳಲಿ." ಆದರೆ ಆತ ಎರಡು ವರ್ಷಗಳಲ್ಲಿ ಹೃದಯಾಘಾತಕ್ಕೊಳಗಾದ. ಅದೃಷ್ಟದಿಂದ ಆತ ಉಳಿದ. ಸೌಮ್ಯ ಅತಿತುಯ್ತವನ್ನು ಅಲಕ್ಷಿಸಿದ ಅನೇಕ ಮಂದಿ ತೀರಿದ್ದಾರೆ. "ನಿಮಗೆ ರಕ್ತದ ಅಧಿಕ ಒತ್ತಡ ಇದ್ದೂ ನೀವು ಸರಿಯಾದ ಚಿಕಿತ್ಸೆ ಪಡೆಯದಿದ್ದರೆ, ನೀವು ಆಯುಷ್ಯವನ್ನು ಇಪ್ಪತ್ತು ವರ್ಷಗಳಷ್ಟು ಕುಂಠಿತಗೊಳಿಸಿಕೊಳ್ಳುತ್ತೀರಿ" ಎಂದು ಡಾ॥ ಜಯಶೇಖರ್ ಜವೇರಿ ಎಚ್ಚರಿಸುತ್ತಾರೆ. ಪ್ರಥಮ ಅತಿತುಯ್ತಸ್ಥಿತಿ ಜೀವಾಂತದವರೆಗೂ ಇರುತ್ತದಾದರೂ ಮದ್ದು ಹಾಗೂ ನಿಶ್ಚಿತ ತಪಾಸಣೆಗಳಿಂದ ತಹಬಂದಿಗೆ ತರಬಹುದು.

ಕೆಳಗಿನ ಅಂಶಗಳನ್ನು ಗಮನಿಸುವುದರಿಂದ ನೀವೂ ರಕ್ತ ಅಧಿಕ ಒತ್ತಡದ ಭಯ ಮುಕ್ತರಾಗಬಹುದು.

೧. ನಿಯಮಿತ ಆಹಾರ, ನಿರ್ಧರಿತ ವ್ಯಾಯಾಮ—ನಿಮ್ಮ ಭಾರವನ್ನು ನಿಮ್ಮ ಕೈಯಡಿ ಇಡಿ.

೨. ಉಪ್ಪು ಮತ್ತು ಕೊಬ್ಬನ್ನು ಮಿತ, ಹಿತವಾಗಿ ಸ್ವೀಕರಿಸಿ.

೬. ಉರಿಮೂತ್ರ, ಮಂದ ಮೂತ್ರ, ವಾಸನಾಯುಕ್ತ ಮೂತ್ರ ಸಂಬಂಧ ತೊಂದರೆಗಳು ಕಂಡ ಪ್ರಾರಂಭದಲ್ಲೇ ಡಾಕ್ಟರರನ್ನು ಸಂಪರ್ಕಿಸಿ.


೭. ರಕ್ತದೊತ್ತಡವನ್ನು ವಾರ್ಷಿಕವಾಗಿ ಪರೀಕ್ಷಿಸಿಕೊಳ್ಳಿ. ಪರಂಪರೆಯಿಂದ ಈ ಕಾಯಿಲೆ ಉಳ್ಳವರು ಆರು ತಿಂಗಳಿಗೊಮ್ಮೆ ಪರೀಕ್ಷಿಸಿ.

೮. ಶ್ರಮ ಕಮ್ಮಿ ಮಾಡಿ.

ನೆನಪಿಡಿ. ಎಲ್ಲಾ ಅತಿತುಯ್ತ ದಾಳಿಗಳೂ ಕೂಡಲೇ ಭಯಾನಕ ಅಪಾಯವನ್ನು ತಂದೊಡ್ಡುವುದಿಲ್ಲ. ಸ್ವಲ್ಪ ಮಾತ್ರವೇ ಹೆಚ್ಚಿದ ಒತ್ತಡಕ್ಕೆ ಕೆಲವೊಮ್ಮೆ ಮದ್ದು ಕೂಡ ಬೇಕಾಗುವುದಿಲ್ಲ. ಚಿಕ್ಕಂದಿನಿಂದಲೇ ಬೆಳೆಸಿದ ಆರೋಗ್ಯಕರ ಅಭ್ಯಾಸಗಳು ಅತಿತುಯ್ತದ ಅಪಾಯವನ್ನು ಕಮ್ಮಿ ಮಾಡುತ್ತವೆ.

ನೀವು ಬುದ್ಧಿವಂತರಾಗಿ — ಕೂಡಲೇ ರಕ್ತದೊತ್ತಡ ಪರೀಕ್ಷಿಸಿಕೊಳ್ಳಿ.

ಎ. ಪಿ. ಚಂದ್ರಶೇಖರ



ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ

—ಸುಭಾಷಿತ

ಯಾವ ವ್ಯಕ್ತಿಗೆ ಕಟ್ಟುವ ಶಕ್ತಿ ಇಲ್ಲವೋ ಅವನಿಗೆ ಹಾಳು ಮಾಡುವ ಅಧಿಕಾರವೂ ಇಲ್ಲ.

—ರವೀಂದ್ರನಾಥ ಠಾಕೂರ್

ಎಲ್ಲ ಕೆಲಸವೂ ಬೀಜ ಬಿತ್ತಿದಂತೆ. ಅದು ಬೆಳೆದು ಫಲ ಕೊಡುವದಲ್ಲದೇ ಮತ್ತೆ ಬೀಜವನ್ನೂ ಒದಗಿಸುತ್ತದೆ.

—ಕಾರ್ಲೈಲ್

ಪುಸ್ತಕ ವಿಮರ್ಶೆ

ಮುಂಗೋಳಿ (ಜನಪದ ಲೇಖನಗಳ ಸಂಕಲನ) ಲೇಖಕರು : ತ. ಚಿ. ಚಲುವೇಗೌಡ, ಪ್ರಕಾಶಕರು : ಎಲ್. ವಿಜಯ, ತಳಗವಾದಿ ಪ್ರಕಾಶನ, ಕುವೆಂಪು ನಗರ, ಮೈಸೂರು-೫೭೦೦೦೯. ಪುಟಗಳು : xiv+೧೨೮, ಬೆಲೆ ರೂ. ೯-೦೦. ೧೯೮೮।

ಏಳು ಜನಪದ ಲೇಖನಗಳ ಸಂಕಲನ. ವಿವಿಧ ಸಂದರ್ಭಗಳಲ್ಲಿ ಬರೆದ ಪ್ರಬಂಧಗಳಿವು. ಮೊದಲೈದು ಲೇಖನಗಳು ಜನಪದ ಹೆಣ್ಣಿನ ಜೀವನಕ್ಕೆ ಸಂಬಂಧಿಸಿದ್ದರೆ, ಕೊನೆಯೆರಡು ಲೇಖನಗಳು ಶಿಶುಪ್ರಾಸಕ್ಕೂ ಜನಪದ ನೃತ್ಯಕ್ಕೂ ಸಂಬಂಧಿಸಿವೆ. ಇಲ್ಲಿನ ಲೇಖನಗಳು ವಿವಿಧ ಸಂದರ್ಭಗಳಲ್ಲಿ ಬರೆದವಾದರೂ, ಪುನರುಕ್ತಿಯಿಂದ ಮುಕ್ತವಾಗಿಲ್ಲ. ಜನಪದ ಹೆಣ್ಣಿನ ಜೀವನ ಕುರಿತಾದ ನಾಲ್ಕು ಲೇಖನಗಳು ಒಂದೇ ಪರಿಸರದಲ್ಲಿರುವ ಹೆಣ್ಣಿನ ಜೀವನ ಕ್ರಮವನ್ನು ತಿರುಗಮುರಗ ಪ್ರತಿಪಾದಿಸಿದ್ದರೆ, 'ಜನಪದ ಗೀತೆಗಳಲ್ಲಿ ಹೆಣ್ಣು ಮತ್ತು ತೌರು' ಲೇಖನ ಮಿಕ್ಕ ಲೇಖನಗಳ ಸಮೀಕ್ಷೆಯಾಗಿದೆ.

'ತೌರಿಗೆ ಮಾತು ತಂದೋಳು ಮಗಳಲ್ಲ'-ಲೇಖನದಲ್ಲಿ ತೌರಿನ ಘನತೆಗೆ ತಕ್ಕ ಹಾಗೆ ಗಂಡನ ಮನೆಯಲ್ಲಿ ಬದುಕಿ ಬಾಳಿದರೆ ಹೆಣ್ಣಿನ ಬದುಕು ಸಾರ್ಥಕ. ಹಾಗೇನಾದರೂ ಸೇರಿದ ಮನೆಯಲ್ಲಿ ತಟವಟ ಮಾಡಿದರೆ 'ತೌರಿಗೆ ಮಾತು ತಂದೋಳು' ಮಗಳಲ್ಲ ಎನಿಸಿಕೊಂಡು ನಿಷ್ಠುರವಾಗಿ ನಿಲ್ಲುತ್ತಾಳೆ. ತಾಯಿ ಮಗಳ ಮೇಲಿನ ವಾತ್ಸಲ್ಯದಿಂದ ಮತ್ತು ವ್ಯಾಮೋಹದಿಂದ ಸೂಕ್ತ ಸಲಹೆಯನ್ನು ನೀಡುವುದು ಸಹಜ. ಇಲ್ಲಿ ನೀಡಿರುವ ಪ್ರಾಸಂಗಿಕ ವಿವರಣೆ ಲೇಖನಕ್ಕೆ ಪೂರಕವಾಗಿದೆ. ಇಡೀ ಲೇಖನ, ಹೆಣ್ಣಿನ ಸಾರ್ಥಕ ಬದುಕು ಗಂಡನ ಮನೆಯಲ್ಲಿ ಎಂಬಂತಿದೆ.

ಗಂಡನ ಮನೆಯಲ್ಲಿರುವ ಹೆಣ್ಣಿಗೆ ತನ್ನ ತವರಿನ ನೆನಪಾಗುವುದು ಸಹಜ. ತನ್ನ ಕಡೆಯುವರು ಬಂದಾರು, ಕರೆದಾರು ಎಂಬ ಬಯಕೆ ಸಹಜ. ತನ್ನಲ್ಲಿ ಮೂಡಿದ ತವರಿನ ಬಯಕೆಯನ್ನು ಬಿಡಿಯುವ ಈ ಜನಪದ ತ್ರಿಪದಿಗಳು ಅರ್ಥಹೊಂದಿವೆ. ಇಲ್ಲಿ ಅತಳ ಯಾತನೆ, ಚಡಪಡಿಕೆ ಹೇಳತೀರನು. ಲೇಖಕರು ಇಲ್ಲಿ ಹೆಣ್ಣಿನ ತವರಿನ ಗೀಳು, ಪ್ರೀತಿ ವಿಶ್ವಾಸಗಳನ್ನು ಹೃದಯಸ್ಪರ್ಶಿಯಾಗಿ ವಿವರಿಸಿದ್ದಾರೆ. ಹೆಣ್ಣು ತನ್ನ ತವರಿನ ಬಳುವಳಿಯಲ್ಲಿಟ್ಟ ಪ್ರೀತಿ ನಂಬಿಕೆ ಹಿರಿದೇ ಸರಿ. ಸಂಪ್ರದಾಯದ ಪ್ರಾಸಂಗಿಕ ವಿವರಣೆಯೂ ಸೇರಿದೆ.

ತಾಯಿಯ ಹೆಗ್ಗಳಿಕೆಯನ್ನು 'ತಾಯಿಲ್ದ ತೌರಲ್ಲಿ ಹೆಣ್ಣಿನ ಗೋಳು'

ಲೇಖಿನ ಸಾಬಿತುಗೊಳಿಸಿದೆ. ಹೆಣ್ಣಿನ ಪಾಡನ್ನು ನೀಗಲು ಯಾವೊಂದು ವಸ್ತುವೂ ಸಾಟಿಯಿಲ್ಲ. ತವರಿನಲ್ಲಿ ಒಡಹುಟ್ಟಿದ್ದವರು ಯಾರಾರಿದ್ದರೂ ತಾಯಿದ್ದಂತಿಲ್ಲ ಎನ್ನುವುದು ಇಲ್ಲಿನ ವಿವರಣೆ ಮನಸದಟ್ಟುಪಡಿಸಿದೆ. ಅದರಲ್ಲೂ ಒಡಹುಟ್ಟಿದ ಅಣ್ಣತಮ್ಮಂದಿರು ಸ್ವಾರ್ಥಿಗಳಾದರಂತೂ ಹೆಣ್ಣಿಗೆ (ಮಗಳಿಗೆ) ತಾಯೂರ ಪ್ರವೇಶವೇ ಇಲ್ಲ. ಇಂತಹ ಅಡಕತ್ತರಿ ಪ್ರಸಂಗದಲ್ಲಿ ಆತಳ ತೊಳಲಾಟವನ್ನು ಸಾಧಾರವಾಗಿ ಪ್ರಸ್ತಾಪಿಸಿದೆ. ಇಷ್ಟಾದರೂ ಒಡಹುಟ್ಟಿದವರ ಬಾಂಧವ್ಯ ಎಂತಹದು ಎನ್ನುವುದು ಅವಳು ತನ್ನ ಅತ್ತಿಯೊಡನೆ ಆಡುವ ಮಾತಿನಲ್ಲಿ ವ್ಯಕ್ತವಾಗುತ್ತದೆ. ಎಂತಹ ಅಸಹನೀಯ ಪರಿಸ್ಥಿತಿಯಲ್ಲಿ ಅವಳಿಗೆ ತವರಿನ ಮಮತೆ ಕಿಂಚಿತ್ತೂ ಕಡಿಮೆಯಾಗದು.

ಶ್ರಮ ಪೂರ್ಣವಾದ ಬದುಕು ಹೆಣ್ಣಿನದು. ತನ್ನ ಸಂಸಾರದ ಸುಖ ಸಂತೋಷಕ್ಕೆ ತನ್ನನ್ನು ಅರ್ಪಿಸಿಕೊಂಡಿದ್ದಾಳೆ. ತನ್ನ ಸಂಸಾರದ ಪಾಲನೆಯೇ ತನ್ನ ಶ್ರೇಷ್ಠ ಕಾಯಕವೆಂದು ನಂಬಿದ್ದಾಳೆ. ಅವಳ ದೈನಂದಿನ ಕಾರ್ಯವ್ಯಾಪ್ತಿ ಹೆಚ್ಚಿದಷ್ಟೂ ಆತಳ ಗೌರವವೂ ಹೆಚ್ಚು. 'ಮುಂಗೋಳಿ' ಕೂಗುವ ಹೊತ್ತಿಗೆದ್ದು ತನ್ನ ಕೆಲಸ ಶುರು ಮಾಡಿದರೆ ಎಲ್ಲರೂ ಮಲಗಿದ ಮೇಲೆಯೇ ಅವಳಿಗೆ ವಿಶ್ರಾಂತಿಯ ಸಮಯ. ಗಂಡನಿಗೆ ಸಂಸಾರದ ಏಳ್ಗೆಯಲ್ಲಿ ಸರಿಸಾಟಿಯಾಗಿ ಸಹಕರಿಸುವಳು.

ಜನಪದ ಸಾಹಿತ್ಯದ ಒಂದು ಪ್ರಕಾರ, 'ಜನಪದ ಶಿಶುಪ್ರಾಸಗಳು.' ಶಿಶುಪ್ರಾಸಗಳ ಸೃಷ್ಟಿ ವೈವಿಧ್ಯಪೂರ್ಣವಾದದ್ದು. ಸಂಪ್ರದಾಯ ದ್ಯೋತಕವಾದ ಈ ಶಿಶುಪ್ರಾಸಗಳ ರೂಪುರೇಷೆಗಳು ವಿಶಿಷ್ಟ. ಆಯಾ ಪ್ರಾದೇಶಿಕ ಸಂಪ್ರದಾಯ, ವಯಸ್ಸಿನ ಅಂತರ, ಪರಿಸರ ಭಿನ್ನತೆಯಲ್ಲಿ, ವಿವಿಧ ಸನ್ನಿವೇಶಗಳಲ್ಲಿ ಬೆಳಕು ಕಂಡ 'ಶಿಶುಪ್ರಾಸ'ಗಳು ಅಭ್ಯಾಸಯೋಗ್ಯವಾದವು. ಅರಿವಿಲ್ಲದ ಮಕ್ಕಳು ಹಿರಿಯರ ಅನುಕರಣೆ, ಖುಷಿಗಾಗಿ ಕಟ್ಟುವ ಶಿಶುಪ್ರಾಸಗಳು ಸ್ಥೂಲವಾದ ಈ ಸಮೀಕ್ಷೆಯಲ್ಲಿ ಸೇರಿವೆ. ಇಲ್ಲಿ ಚೆಲುವೇಗೌಡರು ಶಿಶುಪ್ರಾಸಗಳ ಬಗ್ಗೆ ನಡೆದ ಕೆಲಸವನ್ನು ಪರಿಶೀಲಿಸುವವರ ಜೊತೆಗೆ ಸಮೀಕ್ಷೆಯನ್ನು ನಡೆಸಿ ವರ್ಗೀಕರಣದ ಪ್ರಸ್ತಾಪವನ್ನು ಮಾಡಿದ್ದಾರೆ.

ಜನಪದ ಕಲೆಗಳಲ್ಲಿ 'ಕುಣಿತ' (ನೃತ್ಯ) ವೂ ಒಂದು ಪ್ರಧಾನ ಕಲೆ. ಆಯಾ ಪರಿಸರದ, ಸಂಪ್ರದಾಯದ ಹಿನ್ನಲೆಯಲ್ಲಿ ರೂಢಿಗೆ ಬಂದ ನೃತ್ಯಗಳು ಹೆಚ್ಚು ಜನಪ್ರಿಯವಾಗಿವೆ. ಪರಿಚಯ ಮಾಡಿರುವ ನೃತ್ಯಗಳಲ್ಲಿ ಕೆಲವು ಹೆಚ್ಚು ಜನಪ್ರಿಯವಾಗಿ ಪ್ರಚಾರದಲ್ಲಿರುವುವು ಮತ್ತು ಕೆಲವು ವಿಶಿಷ್ಟ ಸಂದರ್ಭಗಳಲ್ಲಿ

ಮಾತ್ರ ಪ್ರಚಾರದಲ್ಲಿರುವುವು. ಎಂಟು ಜನಪದ ನೃತ್ಯದ ವಿವರಣೆ ಇಲ್ಲಿದೆ. ಇಲ್ಲಿನವು ದೇವತೆಯ ಹಬ್ಬದ ಸಂದರ್ಭದಲ್ಲಿಯೇ ಹೆಚ್ಚಾಗಿ ಕಂಡುಬರುತ್ತವೆ. ಪ್ರತಿಯೊಂದು ನೃತ್ಯವೂ ತನ್ನದೇ ಸಂಪ್ರದಾಯ ವಿಶೇಷತೆಯನ್ನು ಪಡೆದಿದೆ. ಎಷ್ಟೋ ವರ್ಷಗಳಿಗೊಮ್ಮೆ ಹಿರಿಯರ ನಿರ್ಧಾರದ ಅನುಸಾರ ಆಚರಿಸುವ ಕುಣಿತಗಳು ವೈಶಿಷ್ಟ್ಯಪೂರ್ಣವಾಗಿವೆ. ಲೇಖಕರ ಊರಲ್ಲಿ ವರ್ಷಂಪ್ರತಿ ಒಂದಲ್ಲ ಒಂದು ನೃತ್ಯವನ್ನು ಕಾಣಬಹುದು.

ಹಳ್ಳಿಯ ಬದುಕನ್ನು ಅನುಭವಪೂರ್ಣವಾಗಿಸಿಕೊಂಡಿವೆ ಇವರ ಬರಹ. ಸಾಂಪ್ರದಾಯಿಕ ವ್ಯವಹಾರವನ್ನು ಸೂಕ್ಷ್ಮವಾಗಿ ಗಮನಿಸಿದ ಗೌಡರು, ಸನ್ನಿವೇಶಕ್ಕೆ ತಕ್ಕಂತೆ ಚಿತ್ರಿಸುವಲ್ಲಿ ಶಕ್ತರಾಗಿದ್ದಾರೆ. ಜನಪದ ಹೆಣ್ಣಿನ ನೆಲಿ ಬೆಲೆಯ ಕಾಳಜಿ ವಹಿಸಿ, ಆಕೆಯ ಬದುಕಿನ ಮೌಲ್ಯಗಳನ್ನು ಸೂಕ್ತ ತ್ರಿಪದಿಗಳ ನಿದರ್ಶನದಿಂದ ಸಾಬೀತುಪಡಿಸಿದ್ದಾರೆ. ಇಲ್ಲಿ ಉಕ್ತವಾಗಿರುವ ಬಹುತೇಕ ಪ್ರಸಂಗಗಳು ಒಂದೇ ಆಗಿವೆ. ಆದರೆ ಅವೆಲ್ಲ ವಿವಿಧ ಸಂದರ್ಭಗಳಲ್ಲಿ ಬರೆದವೆಂಬು ದನ್ನು ದೃಢಪಡಿಸಿದ್ದಾರೆ ಲೇಖಕರು. ಜನಪದರ ಬಾಯಲ್ಲಿ ಪ್ರಚಲಿತವಿರುವ ಜನಪದ ತ್ರಿಪದಿಗಳನ್ನು ಪ್ರಾಸಂಗಿಕವಾಗಿ ವಿವರಿಸಿದ್ದಾರೆ. ಗೌಡರ ವಿಷಯ ನಿರೂಪಣಾ ಕ್ರಮ ಸರಳವಾದುದು.

ಸರಳ, ಸಮರ್ಪಕ ಮತ್ತು ವಿವರಣಾತ್ಮಕವಾಗಿದೆ ಇವರ ಭಾಷೆ. ಹಳ್ಳಿಯ ಜೀವನದಲ್ಲಿ ಹಾಸುಹೊಕ್ಕಾಗಿರುವ ಸಂಪ್ರದಾಯ, ಕಲೆಗಳ ಪ್ರಾಸಂಗಿಕ ವಿಷಯ ಪ್ರತಿಪಾದನೆ ನಿಚ್ಚಳವಾಗಿದೆ. ಒಟ್ಟಿನಲ್ಲಿ ಜಾನಪದಾಸಕ್ತರು ಓದಲು ಉಪಯುಕ್ತವಾದ ಪ್ರಬಂಧಸಂಕಲನ.

ಸಿ. ಎನ್. ರಾಮಚಂದ್ರ

*　　　*　　　*

ಕಚ್ಚೆಗೌಳಿಗರು : ಲೇಖಕರು—ಡಾ॥ ಅಂಬಳಿಕೆ ಹಿರಿಯಣ್ಣ ; ಪ್ರಥಮ ಮುದ್ರಣ: ೧೯೮೩ ; ಪುಟಗಳು : ೪೪ ; ಬೆಲೆ : ರೂ. ೨-೦೦.

ಕುಮಟ ತಾಲ್ಲೂಕು ದರ್ಶನ : (ತಾಲ್ಲೂಕು ಪರಿಚಯ ಕಿರು ಗ್ರಂಥ) ಲೇಖಕರು ಜಿ. ಎಸ್. ಭಟ್ಟ, ಮೊದಲ ಮುದ್ರಣ ೧೯೮೪, ಪುಟಗಳು ೬೪, ಬೆಲೆ ರೂ ೩-೦೦

ಮೇಲಿನ ಎರಡೂ ಗ್ರಂಥಗಳ ಪ್ರಕಾಶಕರು—ಐ.ಬಿ.ಹೆಚ್. ಪ್ರಕಾಶನದ ಪರವಾಗಿ ಜಿ ಕೆ. ಅನಂತರಾಮ್, ೫ನೆಯ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು ೫೬೦೦೦೯.

ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವ ಕರ್ನಾಟಕದ ಕಚ್ಚೆಗೌಳಿಗರದು ಒಂದು ವಿಶಿಷ್ಟ ಬುಡಕಟ್ಟು. ಕರ್ನಾಟಕದ ಭವ್ಯಪ್ರಕೃತಿ,


ಚನ್ನಗಿರಿ, ಶಿಕಾರಿಪುರ, ಸಾಗರ, ತೀರ್ಥಹಳ್ಳಿ, ನರಸಿಂಹರಾಜಪುರ ಮತ್ತು ತರೀಕೆರೆ ಈ ತಾಲ್ಲೂಕುಗಳಲ್ಲಿ ಕಂಡುಬರುವ ಇವರು ಎಲ್ಲಿಂದ ಬಂದರು, ಏಕೆ ಎಂಬ ಪ್ರಶ್ನೆಗಳಿಗೆ ಯಾವ ಲಿಖಿತ ಆಧಾರಗಳೂ ಇಲ್ಲವೆಂದು ಲೇಖಕರೇ ಹೇಳಿದ್ದಾರೆ. ೧೯೭೧ರ ಜನಗಣತಿ ಪ್ರಕಾರ ಕೇವಲ ೫೧೪೬ ಮಂದಿ ಇರುವ ಈ ಅಲೆಮಾರಿ ಜನಾಂಗದವರ ಪರಿಚಯ ಮಾಡಿಕೊಡುವ ಈ ಚಿಕ್ಕ ಪುಸ್ತಕದಲ್ಲಿ ಅವರ ಆಚಾರ, ವಿಚಾರ, ವಿಹಾರ, ಆಹಾರ ಕುರಿತ ವಿವರಗಳಿವೆ. ಕಾನೆ ಧರಿಸುವ ಈ ಮಂದಿ ಮರಾಠಿ ಮಾತಾಡುವ ಪ್ರದೇಶಗಳಿಂದ ಇಲ್ಲಿಗೆ ಬಂದಿರಬಹುದೆಂದೂ ಕಾಡುಮೃಗಗಳ ಜೊತೆ ಸೆಣೆಸಿ ಬದುಕುವ ಧೈರ್ಯಶಾಲಿಗಳೆಂದೂ ಇವರು ಕಾಡುಮೇಡುಗಳಲ್ಲಿ ನೆಲೆಸಿ ಸ್ವತಂತ್ರ ಜೀವನ ನಡೆಸುವರೆಂದೂ ತಿಳಿದು ಬಂದಿದೆ. ಇವರ ಉಡುಗೆ ತೊಡುಗೆಗಳು, ಗುಡಿಸಲ ಮಾದರಿ, ಕೆಲಸದ ವಿಭಜನೆ, ಎಮ್ಮೆ ಸಾಕಾಣಿಕೆ, ಆಹಾರ ಪದ್ಧತಿ, ಸಂಪ್ರದಾಯಗಳು, ಜನನ, ಯೌವನ, ಮದುವೆ, ಸೀರುಡಿಕೆ, ಮರಣ ಮುಂತಾದ ಕಾಲಗಳಲ್ಲಿ ಅವರು ಅನುಸರಿಸುವ ರೀತಿ ನೀತಿಗಳು, ಧಾರ್ಮಿಕ ಜೀವನ ಅವರ ಹಬ್ಬಗಳು, ಪುಗಡಿ ನೃತ್ಯ ಮುಂತಾದವುಗಳ ಸಂಕ್ಷಿಪ್ತ ಪರಿಚಯ ಹಾಗೂ ಮಾಟ ಮಂತ್ರ ಗಾಳಿ ಇತ್ಯಾದಿಗಳಲ್ಲಿ ಅವರ ನಂಬಿಕೆಗಳು ಅವರದೇ ಆದ ವೈದ್ಯ ಪದ್ಧತಿ ಅವರ ಸಾಮಾಜಿಕ ವ್ಯವಸ್ಥೆ ಮತ್ತು ಇಂದು ಅವರ ಸ್ಥಾನಮಾನ ಕುರಿತಂತೆ ಕಚ್ಚಿಗೌಳಿಗರ ಬಗ್ಗೆ ಸಾಕಷ್ಟು ಈ ಪುಟ್ಟ ಪುಸ್ತಕ ಮಾಹಿತಿ ನೀಡುತ್ತದೆ.

ಕುಮಟ ತಾಲ್ಲೂಕು ದರ್ಶನ ಒಂದು ಪರಿಚಯ ಗ್ರಂಥ. ಆಕರ್ಷಕ ಛಾಯಾಚಿತ್ರಗಳಿಂದ ಕೂಡಿರು ಈ ಪುಸ್ತಕದಲ್ಲಿ ಭಟ್ಟರು ಕುಮಟ ತಾಲ್ಲೂಕಿನ ಭೌಗೋಳಿಕ ಪರಿಚಯದೊಡನೆ–ಪ್ರಾರಂಭಿಸಿ–ಅಲ್ಲಿನ ಹಾಲಕ್ಕಿ ಒಕ್ಕಲಿಗರು, ನಾಡವರು, ನಾಮಧಾರಿಗಳು ಅಗೇರರು, ಹವ್ಯಕರು ಮುಂತಾದ ಈ ತಾಲ್ಲೂಕಿನ ವಿಶಿಷ್ಟ ಜನಾಂಗದವರ ಪರಿಚಯ ಮಾಡಿಕೊಟ್ಟಿದ್ದಾರೆ. ತಾಲ್ಲೂಕು ಚರಿತ್ರೆಯನ್ನು ಪುರಾಣ ಪುರುಷ ಪರಶುರಾಮನಿಂದ ಪ್ರಾರಂಭಿಸಿ ಹಂತಹಂತವಾಗಿ ಅದರ ಏರುಪೇರುಗಳನ್ನು ಘಟನೆಗಳನ್ನು ೧೯೬೦ರವರೆಗೆ ಗುರುತಿಸಿದ್ದಾರೆ. ಮಿರ್ಜಾನ್, ಬಾಡ, ಸಾಣಿಕಟ್ಟೆ, ಕದಡಿ, ಗೋಕರ್ಣ, ಧಾರೇಶ್ವರ, ಮೇದಿನಿ ಕೋಟೆ, ಹಿರೇಗುತ್ತಿ, ಯಾಣ, ಕಳ್ತಿಗುಡ್ಡ ಮತ್ತು ಕುಮಟ ಪಟ್ಟಣ ಮುಂತಾದ ಮುಖ್ಯ ಸ್ಥಳಗಳನ್ನೂ ಧಾರ್ಮಿಕ ಕೇಂದ್ರಗಳನ್ನೂ ಕುರಿತು ಸರಳವಾಗಿ ಹೇಳಿದ್ದಾರೆ. ತಾಲ್ಲೂಕಿನ ಕಲೆ ಕುರಿತು ಅಲ್ಲಿಗೇ ವಿಶಿಷ್ಟವಾದ ಹಾಲಕ್ಕಿ ಒಕ್ಕಲಿಗರ ಕೋಲಾಟ (ಹಗರಣ), ಗುಮಟೆಪದ, ಸುಗ್ಗಿ ಕುಣಿತ ಯಕ್ಷಗಾನ,

ತಾಳಮದ್ದಲೆ ಮುಂತಾದವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಪತ್ರಿಕೋದ್ಯಮದಲ್ಲಿ ಕುಮಟದ ಸ್ಥಾನ ಮಹತ್ತರವಾದದ್ದು. ೧೯೧೬ ರಲ್ಲಿ 'ಕಾನಡಾವೃತ್ತ' ಪತ್ರಿಕೆ ಇಲ್ಲಿಂದ ಪ್ರಕಟವಾಗಲಾರಂಭಿಸಿ ಸ್ವಾತಂತ್ರ ಸಂಗ್ರಾಮ ಕಾಲದಲ್ಲಿ ಬ್ರಿಟಿಷರ ಕ್ರೋಧಕ್ಕೆ ಸಿಕ್ಕಿ ವಿವಿಧ ಕಿರುಕುಳ ಅನುಭವಿಸಿ ಇಂದಿಗೂ ಉಳಿದುಬಂದಿದೆ. ಈ ಪುಸ್ತಕದಲ್ಲಿ ಇತರ ಪತ್ರಿಕೆಗಳ ಹಾಗೂ ಅಲ್ಲಿಯ ಸಾಹಿತಿಗಳ ಮತ್ತು ಸಾಹಿತ್ಯದ ಪರಿಚಯವಿದೆ.

ತಾಲ್ಲೂಕಿನ ಸಂಪನ್ಮೂಲಗಳನ್ನು ಕುರಿತು, ಉದ್ಯೋಗಾವಕಾಶ ಮುಂತಾದವುಗಳ ಬಗ್ಗೆ ಹೊಸ ಸೂಚನೆ ನೀಡಿ ಅಲ್ಲಿ ದೊರಕುವ ಸುಣ್ಣಕಲ್ಲಿನಿಂದ ಸಿಮೆಂಟ್ ತಯಾರಿಸಿ ತಾಲ್ಲೂಕು ಯುವಕರ ನಿರುದ್ಯೋಗ ನಿವಾರಣೆಗಳು ಮಾಡಬಹುದೆಂದು ಸೂಚಿಸಿದ್ದಾರೆ. ಮುಖ್ಯ ಉದ್ಯೋಗ ಮೀನುಗಾರಿಕೆ ಕುರಿತ ಸೂಕ್ತ ಪರಿಚಯವಿದೆ. ಹಾಗೇ ತಾಲ್ಲೂಕಿನ ವ್ಯವಸಾಯ, ಪಶುಸಂಗೋಪನೆ, ವಿವಿಧ ಕೈಗಾರಿಕೆಗಳಾದ ಗೇರುಬೀಜ ಸಂಸ್ಕರಣ, ಹೆಂಚಿನ ಕಾರ್ಖಾನೆ, ತಾಮ್ರದ ಹಂಡೆಗಳನ್ನು ಮಾಡುವುದು ಗ್ರಾಮೋದ್ಯೋಗ, ಚಾಪೆ, ಬುಟ್ಟಿ, ಪಾದರಕ್ಷೆ ತಯಾರಿಕೆ, ತೆಂಗಿನ ನಾರಿನ ಉದ್ಯಮ, ಗುಡಿಗಾರಿಕೆ ಮುಂತಾದವುಗಳ ಉಲ್ಲೇಖವಿದೆ. ತಾಲ್ಲೂಕಿನ ಶಿಕ್ಷಣ ಸೌಕರ್ಯ, ವೈದ್ಯಕೀಯ ಸೌಲಭ್ಯ ಸಾರಿಗೆ ಮತ್ತು ಆಡಳಿತ ವ್ಯವಸ್ಥೆ ಕುರಿತ ವಿವರವಿದೆ.

ಬಿ. ಶಾಮಸುಂದರ



ಮುಂದೆ ಭಂಗಿಸಿ ಹಿಂದೆ ಉಂಬಳಿಯ ನೀಡುವುದು ಮುಂದಲೆಯ ಕೊಯ್ದು ಮುಡಿಗ್ಹೂವು ಮುಡಿಸಿದಂತೆ.

—ಪುರಂದರದಾಸರು

ತಂಟೆ-ತಕರಾರುಗಳನ್ನು ಎಬ್ಬಿಸಲು ದಿನಕ್ಕೆ ನೂರು ಅವಕಾಶಗಳು ದೊರಕುತ್ತವೆ. ಒಳ್ಳೆಯದನ್ನು ಮಾಡಲು ವರ್ಷಕ್ಕೆ ಒಂದೇ ಅವಕಾಶ ದೊರೆಯುವುದು ದುರ್ಲಭ.

—ವಾಲ್ಟೇರ್

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ : ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಕೃಷ್ಣಮೂರ್ತಿಪುರಂ : : ಮೈಸೂರು-೪

eg. No. KRNN. 29 / WPP 6 | LICENSE No. 21 LICENSED TO POST WITHOUT PREPAYMENT

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು

ತರಿಸಿ ಓದಿರಿ

Edited by R. Boraiah, Printed by H. G. Ramaswamy Iyenga Manager, Karnataka State Adult Education Council Pres and Published by Karnataka State Adult Education Counc Mysore city (India)